ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 22 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 330 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಸಿದ್ದರಾಮಯ್ಯ–ಜಮೀರ್ ಸಂಬಂಧ ಹಳಸಿತೆ...!?



ಬೆಂಗಳೂರು, ಮಾ.21(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಸತಿ ಮಂತ್ರಿ ಜಮೀರ್ ಅಹ್ಮದ್ ಖಾನ್ ನಡುವಿನ ಸಂಬಂಧ ಹಳಸಿದೆ ಎಂಬ ವಿಷಯ ರಾಜಕೀಯ ಪಡಸಾಲೆಯಲ್ಲಿ ಚರ್ಚೆಯಾಗುತ್ತಿದೆ.

ಇತ್ತೀಚಿನ ಬೆಳವಣಿಗೆಗಳು ಸಿದ್ದರಾಮಯ್ಯ ಮತ್ತು ಜಮೀರ್ ಅಹ್ಮದ್ ಖಾನ್ ನಡುವೆ ಮೊದಲಿನ ಅನ್ಯೋನ್ಯತೆ ಇಲ್ಲವೆಂಬುದಕ್ಕೆ ಪೂರಕವಾಗಿವೆ.

ಅಧಿಕಾರ ಹಂಚಿಕೆ ವಿಚಾರದಲ್ಲಿ, ಸಿದ್ದರಾಮಯ್ಯ ತಮ್ಮ ನಾಯಕ ಎಂಬುದಾಗಿ ಬಹಿರಂಗವಾಗಿ ಹೇಳುತ್ತಿದ್ದ ಜಮೀರ್ ಇತ್ತೀಚಿಗೆ ಮುಖ್ಯಮಂತ್ರಿಗಳ ಪ್ರವಾಸದಲ್ಲಿ ಗೈರು ಹಾಜರಿ ಎದ್ದು ಕಾಣುತ್ತಿದೆ. ಇದೀಗ ಜಮೀರ್ ಅಹ್ಮದ್ ಖಾನ್ ಹೆಚ್ಚಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆ ಕಾಣಿಸಿಕೊಳ್ಳತೊಡಗಿದ್ದಾರೆ. ಶಿವಕುಮಾರ್ ಅನುಪಸ್ಥಿತಿಯಲ್ಲಿ ▶ 6ನೇ ಪುಟಕ್ಕೆ

ಸರ್ಕಾರಿ ಶಾಲಾ ದಾಖಲಾತಿ ಹೊಣೆ

ಡಿಸಿ, ಸಿಇಓ ಹೆಗಲಿಗೆ

ಬೆಂಗಳೂರು, ಮಾ.21(ಕೆಎಂಶಿ)– **ಸರ್ಕಾರಿ ಶಾಲೆಗಳಿಗೆ ಮಕ್ಕಳ ದಾಖಲಾತಿ ಹೊಣೆಗಾರಿಕೆಯನ್ನು ಆಯಾಯ ಜಿಲ್ಲಾ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳ ಹೆಗಲಿಗೆ ಹಾಕಿದೆ.**



ಮಧು ಬಂಗಾರಪ್ಪ


ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಜಿಲ್ಲಾಡಳಿತಕ್ಕೆ ಪತ್ರ ಬರೆದು, 2026–27ನೇ ಸಾಲಿಗೆ ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ದಾಖಲಾತಿ ಅಭಿಯಾನ ನಡೆಸಿ ಶಿಕ್ಷಣದಿಂದ ಯಾವುದೇ ಮಕ್ಕಳು ವಂಚಿತರಾಗಬಾರದು. ಮನೆ–ಮನೆಗೆ ತೆರಳಿ ಶಾಲೆಯಿಂದ ದೂರ ಉಳಿದಿರುವ ಮಕ್ಕಳನ್ನು ಮರಳಿ ಕರೆತನ್ನಿ ಎಂದು ಆದೇಶಿಸಿದ್ದಾರೆ. ಮಕ್ಕಳಿಗೆ ಸರ್ಕಾರ ನೀಡುವ ಸೌಲಭ್ಯಗಳನ್ನು ಪ್ರಚಾರ ಮಾಡುವ ಮೂಲಕ ದಾಖಲಾತಿ ಅಭಿಯಾನ ನಡೆಸಿ, ಯಾವ ಮಗುವೂ ಶಿಕ್ಷಣದಿಂದ ವಂಚಿತ ಆಗಬಾರದು.

ಜಿಲ್ಲಾದ್ಯಂತ ವ್ಯವಸ್ಥಿತವಾಗಿ ದಾಖಲಾತಿ ಆಂದೋಲನ ಹಮ್ಮಿಕೊಳ್ಳಿ. ಪ್ರತೀ ಗ್ರಾಮದಲ್ಲಿ ಎಸ್‌ಡಿಎಂಸಿ ಸದಸ್ಯರು ಶಿಕ್ಷಕರು ಮತ್ತು ಹಳೆಯ ವಿದ್ಯಾರ್ಥಿಗಳ ಸಹಕಾರದೊಂದಿಗೆ ಮಕ್ಕಳನ್ನು ನಮ್ಮ ಶಾಲೆಗೆ ಕರೆತನ್ನಿ. ಗ್ರಾಮದ ಪ್ರತೀ ಮನೆಗೆ ಭೇಟಿ ಮಾಡಿ, ಯಾವುದಾದರೂ ಮನೆಯಲ್ಲಿ ಶಿಕ್ಷಣದಿಂದ ವಂಚಿತರಾದ ಮಕ್ಕಳಿದ್ದರೆ, ಅವರ ಪೋಷಕರಿಗೆ ಕಲಿಕೆ ಸೌಲಭ್ಯಗಳ ವಿವರ ನೀಡಿ ಮರಳಿ ಕರೆತನ್ನಿ ಎಂದಿದ್ದಾರೆ.

ಶಾಲೆಗಳಲ್ಲಿ ಹಳೆಯ ವಿದ್ಯಾರ್ಥಿಗಳ ವಾಟ್ಸ್‌ಆಪ್ ಗ್ರೂಪ್‌ಗಳ ಮೂಲಕ ಶಾಲಾ ಅಭಿವೃದ್ಧಿ ಮತ್ತು ದಾಖಲಾತಿ ಹೆಚ್ಚಿಸುವಲ್ಲಿ ನೆರವು ಪಡೆದುಕೊಳ್ಳಿ ಎಂದು ತಿಳಿಸಿದ್ದಾರೆ. ಒಟ್ಟಾರೆ ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆ ಮತ್ತು ಪಪೂ ಕಾಲೇಜುಗಳಲ್ಲಿ ದಾಖಲಾತಿ ಪ್ರಮಾಣ ಹೆಚ್ಚಿಸುವುದು ನಿಮ್ಮ ಹೊಣೆಗಾರಿಕೆ ಎಂದು ತಿಳಿಸಿದ್ದಾರೆ. ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಜಾತಿ ಗಣತಿ ಸಮೀಕ್ಷೆ ಕಾರ್ಯದಲ್ಲಿ ಶಿಕ್ಷಕ ವೃಂದ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದರಲ್ಲಿ ಯಾವುದೇ ವಿನಾಯಿತಿ ನೀಡಬಾರದು ಎಂದು ಮಧು ಬಂಗಾರಪ್ಪ ಜಿಲ್ಲಾಡಳಿತಕ್ಕೆ ಕಟ್ಟಾದೇಶ ಮಾಡಿದ್ದಾರೆ.



> “ ಒಂದನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ಸೇರಬಯಸುವ ಎಲ್ಲಾ ಮಕ್ಕಳಿಗೂ ಪ್ರವೇಶಾವಕಾಶ ಕಲ್ಪಿಸಿ. ಗ್ರಾಮೀಣ ಭಾಗದಲ್ಲಿ ಇಂಗ್ಲಿಷ್ ವ್ಯಾಮೋಹ ಇರುವ ಪೋಷಕರಿಗೆ, ಸರ್ಕಾರಿ ಶಾಲೆಗಳಲ್ಲೂ ಪ್ರಾಥಮಿಕ ಹಂತದಿಂದ ಆಂಗ್ಲ ಮಾಧ್ಯಮದಲ್ಲಿ ಕಲಿಕೆ ಸೌಲಭ್ಯಗಳಿವೆ ಎಂಬುದನ್ನು ಮನವರಿಕೆ ಮಾಡಿಕೊಡಿ.
>
> –ಮಧುಬಂಗಾರಪ್ಪ, ಶಿಕ್ಷಣ ಸಚಿವ





ಅಮೆರಿಕ–ಯುಕೆಯ 4,000 ಕಿ.ಮೀ. ದೂರದ ಸೇನಾನೆಲೆ ಗುರಿಯಾಗಿಸಿ ಇರಾನ್ ಕ್ಷಿಪಣಿ ದಾಳಿ

ಭಾರತದ ತೀರದ ಹತ್ತಿರತ್ತಿರ ಬರುತ್ತಿರುವ ಮಿಸ್ಸೈಲ್‌ಗಳು

ವಾಷಿಂಗ್ಟನ್,ಮಾ.21–ಇಷ್ಟು ದಿನ ತನ್ನ ನೆರೆಹೊರೆಯ ದೇಶಗಳಲ್ಲಿರುವ ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ಮಾಡುತ್ತಿದ್ದ ಇರಾನ್ ಇದೀಗ ತನ್ನ ಯುದ್ಧ ಮಾದರಿಯನ್ನೇ ಬದಲಿಸಿದ್ದು, ನೇರವಾಗಿ ಅಮೆರಿಕವನ್ನ ಟಾರ್ಗೆಟ್ ಮಾಡಿದೆ.

ಇರಾನ್ ತನ್ನ ದಾಳಿ ತೀವ್ರತೆಯನ್ನು ಹೆಚ್ಚಿಸಿದ್ದು, ಬರೊಬ್ಬರಿ 4,000 ಕಿಮೀ ದೂರದಲ್ಲಿರುವ ಡಿಯಾಗೋ ಗಾರ್ಸಿಯಾದಲ್ಲಿರುವ ಅಮೆರಿಕ–ಯುಕೆ ವಾಯು ನೆಲೆಯನ್ನು ಗುರಿಯಾಗಿಸಿ ಕೊಂಡು ದಾಳಿ ಮಾಡಿದೆ. ಈ ಸ್ಥಳ ಭಾರತದ ತೀರ ಪ್ರದೇಶಕ್ಕೆ ಹತ್ತಿರವಿದೆ. ಇರಾನ್ ಇಷ್ಟು ದೂರದ ಗುರಿಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡಿರು ವುದು ಇತಿಹಾಸದಲ್ಲೇ ಮೊದಲು ಎಂದು ಹೇಳಲಾಗಿದೆ. ಅಂತೆಯೇ ಇದು ದೀರ್ಘ ದಾಳಿಯ ಸಾಧ್ಯತೆಯನ್ನು ಸೂಚಿಸುತ್ತದೆ ಎನ್ನಲಾಗಿದೆ. ಇರಾನ್ ಇತ್ತೀಚೆಗೆ ಹಿಂದೂ ಮಹಾಸಾಗರದ ಡಿಯಾಗೋ ಗಾರ್ಸಿಯಾದಲ್ಲಿರುವ ಅಮೆರಿಕ–ಬ್ರಿಟನ್ ಜಂಟಿ ಮಿಲಿಟರಿ ನೆಲೆಯ ಮೇಲೆ ತನ್ನ ಎರಡು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹಾರಿಸಿದೆ ಎಂದು ಹೇಳಿಕೊಂಡಿತ್ತು. ಆದರೆ ಈ ದಾಳಿಯನ್ನು ಅಮೆರಿಕದ ▶ 6ನೇ ಪುಟಕ್ಕೆ

ಸೇನಾ ಕಾರ್ಯಾಚರಣೆ ಶೀಘ್ರ ಸ್ಥಗಿತ: ಅಮೆರಿಕ

ಹಾರ್ಮುಜ್ ಜಲಸಂಧಿ ತೆರೆಯುವಂತೆ 22 ರಾಷ್ಟ್ರಗಳು ಇರಾನ್‌ಗೆ ಒತ್ತಾಯ!


ನವದೆಹಲಿ: ಹಾರ್ಮುಜ್ ಜಲಸಂಧಿ ತೆರೆಯಲು 22 ರಾಷ್ಟ್ರಗಳು ಇರಾನ್ ಅನ್ನು ಒತ್ತಾಯಿಸಿರುವ ಬೆನ್ನಲ್ಲೇ ಸೇನಾ ಕಾರ್ಯಾಚರಣೆ ಶೀಘ್ರ ಕೊನೆಗೊಳ್ಳಲಿದೆ ಎಂದು ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನ ಸ್ಪೀಕರ್ ಮೈಕ್ ಜಾನ್ಸನ್ ಹೇಳಿದ್ದಾರೆ.

ಅಂದುಕೊಂಡಷ್ಟು ಕಾರ್ಯಾಚರಣೆ ಈಗ ಮುಗಿದಿದೆ ಅಂದುಕೊಂಡಿದ್ದೇನೆ. ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಅವುಗಳ ಉತ್ಪಾದನಾ ಸಾಧನಗಳನ್ನು ಹೊರತೆಗೆಯಲು ಮತ್ತು ನೌಕಪಡೆಯನ್ನು ನಾಶಪಡಿಸಲು ಪ್ರಯತ್ನಿಸುತ್ತಿದ್ದೇವೆ. ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳಿಗೆ ಬೆದರಿಕೆ ಹಾಕುವ ಇರಾನ್‌ನ ಸಾಮರ್ಥ್ಯ ಸ್ವಲ್ಪ ಮಟ್ಟಿಗೆ ಕಷ್ಟಕರವಾಗಿದೆ. ಅಮೆರಿಕ ▶ 6ನೇ ಪುಟಕ್ಕೆ

ಹೋಟೆಲ್‌ಗಳಿಗೆ ಕೇಂದ್ರ ಸರ್ಕಾರದ ಗುಡ್ ನ್ಯೂಸ್

ಸೋಮವಾರದಿಂದ ಶೇ.20ರಷ್ಟು ಸಿಲಿಂಡರ್ ಪೂರೈಕೆಗೆ ನಿರ್ಧಾರ

ಮೈಸೂರು, ಮಾ.21(ಬಿಎಲ್‌ಯು)–ಕೇಂದ್ರ ಸರ್ಕಾರ ಶೇ.20ರಷ್ಟು ವಾಣಿಜ್ಯ ಸಿಲಿಂಡರ್‌ಗಳನ್ನು ಪೂರೈಕೆ ಮಾಡುವುದಾಗಿ ನಿರ್ಧಾರ ಕೈಗೊಂಡಿರುವುದರಿಂದ ಸೋಮವಾರದ ನಂತರ ಹೋಟೆಲ್ ಉದ್ಯಮದ ವ್ಯವಹಾರ ಸುಧಾರಿಸಬಹುದು ಎಂದು ಮೈಸೂರಿನ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಮಧ್ಯಪ್ರಾಚ್ಯ ಯುದ್ಧದ ಪರಿಣಾಮದ ಹಿನ್ನೆಲೆಯಲ್ಲಿ ವ್ಯತ್ಯಯ ಉಂಟಾಗಿರುವ ಎಲ್‌ಪಿಜಿ ಸಿಲಿಂಡರ್ ಸಮಸ್ಯೆ ಪರಿಹರಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಸೋಮವಾರದಿಂದ ಎಲ್ಲಾ ರಾಜ್ಯಗಳಿಗೆ ಶೇ.20ರಷ್ಟು ಸಿಲಿಂಡರ್ ಪೂರೈಕೆ ಮಾಡುವುದಾಗಿ ತೀರ್ಮಾನ ಕೈಗೊಂಡಿದೆ ಎಂದರು. ಇದರಿಂದ ಮೈಸೂರಿನ ಹೋಟೆಲ್ ಉದ್ಯಮದ ವ್ಯವಹಾರ ಚೇತರಿಸಿಕೊಳ್ಳಲಿದ್ದು, ಬಾಗಿಲು ಹಾಕಿರುವ ಹೋಟೆಲ್‌ಗಳು ಪುನರಾರಂಭ ಗೊಳ್ಳಲಿವೆ. ಈ ಮೊದಲು ಶೇ.10ರಷ್ಟು ಸಿಲಿಂಡರ್ ನೀಡುವುದಾಗಿ ಕೇಂದ್ರ ಸರ್ಕಾರ ತಿಳಿಸಿತ್ತು. ಆದರೆ ಮೈಸೂರಿಗೆ ಈ ತನಕ ಒಂದು ಸಿಲಿಂಡರ್ ಕೂಡ ಬಂದಿಲ್ಲ. ಮೊದಲಿನ ಶೇ.10ರಷ್ಟರ ಜೊತೆಗೆ ಇಂದು ಶೇ.20 ರಷ್ಟು ಸಿಲಿಂಡರ್ ನೀಡಿದರೆ ಶೇ.30ರಷ್ಟು ಸಿಲಿಂಡರ್ ದೊರೆಯುತ್ತದೆ ಎಂದರು.

ಮೈಸೂರಿಗೆ ಒಂದು ದಿನಕ್ಕೆ 4,000 ಸಿಲಿಂಡರ್ ಅವಶ್ಯಕತೆ ಇದೆ. ಕೇಂದ್ರ ಸರ್ಕಾರ ಸೋಮವಾರದಿಂದ ಶೇ.30 ರಷ್ಟು ಸಿಲಿಂಡರ್ ನೀಡಿದರೆ ಮೈಸೂರು ನಗರಕ್ಕೆ 1,200 ಸಿಲಿಂಡರ್ ದೊರೆಯುತ್ತದೆ. ಇದರಿಂದ ಬಾಗಿಲು ಹಾಕಿರುವ ಹೋಟೆಲ್‌ಗಳು ಪುನರಾರಂಭಗೊಳ್ಳಲಿವೆ ಎಂದು ಮಾಹಿತಿ ನೀಡಿದರು.

ದಾವಣಗೆರೆ ದಕ್ಷಿಣಕ್ಕೆ ಸಮರ್ಥ್ ಶಾಮನೂರು, ಬಾಗಲಕೋಟೆಯಲ್ಲಿ ಉಮೇಶ್ ಮೇಟಿಗೆ ಟಿಕೆಟ್!



ಸಮರ್ಥ್



ಉಮೇಶ್ ಮೇಟಿ

ಬೆಂಗಳೂರು, ಮಾ.21: ದಾವಣಗೆರೆ ಮತ್ತು ಬಾಗಲಕೋಟೆ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಕಾಂಗ್ರೆಸ್ ನಡೆಸುತ್ತಿದ್ದ ಸರ್ಕಸ್ ಸುಖಾಂತ್ಯ ಕಂಡಿದೆ. ಖಾಸಗಿ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಮಹತ್ವದ ಸಭೆಯಲ್ಲಿ ಅತೃಪ್ತ ಮುಸ್ಲಿಂ ಮುಖಂಡರನ್ನು ಮನವೊಲಿಸುವಲ್ಲಿ ಹೈಕಮಾಂಡ್ ಯಶಸ್ವಿಯಾಗಿದೆ.

ದಾವಣಗೆರೆ ಟಿಕೆಟ್ ಮುಸ್ಲಿಂ ಸಮುದಾಯಕ್ಕೆ ನೀಡಬೇಕೆಂದು ಅಲ್ಪಸಂಖ್ಯಾತ ನಾಯಕರು ಪಟ್ಟು ಹಿಡಿದಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ, ಸಚಿವರಾದ ಜಮೀರ್ ಅಹಮದ್, ಮಲ್ಲಿಕಾರ್ಜುನ, ಬೈರತಿ ಸುರೇಶ್, ಕೆ.ಜೆ.ಜಾರ್ಜ್ ಹಾಗೂ ಶಾಸಕರಾದ ಹ್ಯಾರಿಸ್, ರಿಜ್ವಾನ್ ಅರ್ಷದ್ ಅವರ ಸಮ್ಮುಖದಲ್ಲಿ ಸಂಧಾನ ಸಭೆ ನಡೆಸಲಾಯಿತು. ಹಲವು ಸುತ್ತಿನ ಮಾತುಕತೆಯ ನಂತರ, ಮುಸ್ಲಿಂ ನಾಯಕರು ಒಲ್ಲದ ಮನಸ್ಸಿನಿಂದಲೇ ಹೈಕಮಾಂಡ್ ತೀರ್ಮಾನಕ್ಕೆ ಸಮ್ಮತಿ ಸೂಚಿಸಿದ್ದಾರೆ.

ಅಭ್ಯರ್ಥಿಗಳು ಯಾರು: ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಅಂತಿಮವಾಗಿ ಶಾಮನೂರು ಶಿವಶಂಕರಪ್ಪ ಕುಟುಂಬಕ್ಕೆ ಒಲಿದಿದೆ. ಶಾಮನೂರು ಅವರ ಮೊಮ್ಮಗ ಸಮರ್ಥ್ ಅವರಿಗೆ ಟಿಕೆಟ್ ಬಹುತೇಕ ಖಚಿತವಾಗಿದೆ. ಬಾಗಲಕೋಟೆ ಕ್ಷೇತ್ರದಲ್ಲಿ ಉಮೇಶ್ ಮೇಟಿ ಅವರಿಗೆ ಟಿಕೆಟ್ ನೀಡಲು ಕಾಂಗ್ರೆಸ್ ನಾಯಕರು ಒಮ್ಮತದ ತೀರ್ಮಾನ ಕೈಗೊಂಡಿದ್ದಾರೆ.

ನಾಳೆ ಅಧಿಕೃತ ಘೋಷಣೆ: ನಾಳೆ ಕಾಂಗ್ರೆಸ್ ಹೈಕಮಾಂಡ್ ಅಧಿಕೃತವಾಗಿ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಿದೆ. ವಿಶೇಷವೆಂದರೆ, ಟಿಕೆಟ್ ಘೋಷಣೆಯಾದ ಬೆನ್ನಲ್ಲೇ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯೂ ಅಬ್ಬರದಿಂದ ನಡೆ ▶ 6ನೇ ಪುಟಕ್ಕೆ

ಶ್ರೀ ಚಾಮುಂಡೇಶ್ವರಿಯ ಕನ್ನಡ ಹಾಡು ಹಂಚಿಕೊಂಡ ಮೋದಿ



ನವದೆಹಲಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಿಶ್ವಮಾತೆ ಕುರಿತು ಮಾತನಾಡುತ್ತಾ ಕನ್ನಡದ ಪ್ರಸಿದ್ಧ ಭಕ್ತಿಗೀತೆಯನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಡಾ. ರಾಜ್‌ಕುಮಾರ್ ಅಭಿನಯದ ‘ಶ್ರೀಕೃಷ್ಣದೇವರಾಯ’ ಸಿನಿಮಾದ ಶ್ರೀ ಚಾಮುಂಡೇಶ್ವರಿ ಹಾಡನ್ನು ಹಂಚಿಕೊಂಡಿರುವ ಅವರು, ವಿಶ್ವಮಾತೆಯ ಮೇಲಿನ ಅಚಲ ನಂಬಿಕೆಯು ಭಕ್ತರಲ್ಲಿ ಹೊಸ ಪ್ರಜ್ಞೆ ಮತ್ತು ಚೈತನ್ಯವನ್ನು ತುಂಬುತ್ತದೆ ಎಂದು ಬರೆದುಕೊಂಡಿದ್ದಾರೆ.

ವಿಶ್ವಮಾತೆಯ ಮೇಲಿನ ಅಚಲ ಭಕ್ತಿ: ಎಕ್ಸ್ ಖಾತೆಯಲ್ಲಿ ಈ ಹಾಡನ್ನು ಹಂಚಿಕೊಂಡಿರುವ ಪ್ರಧಾನಿ ಮೋದಿ, ಭಾರತ ದೇಶದ ಆಧ್ಯಾತ್ಮಿಕ ಪರಂಪರೆ, ದೇವಿ ಆರಾಧನೆ ಮತ್ತು ಶಕ್ತಿ ಉಪಾಸನೆಯ ಮಹತ್ವವನ್ನು ತಮ್ಮ ಸಂದೇಶದಲ್ಲಿ ಉಲ್ಲೇಖಿಸಿದ್ದಾರೆ. ವಿಶ್ವಮಾತೆಯ ಮೇಲಿನ ಅಚಲ ಭಕ್ತಿ, ಭಕ್ತರಲ್ಲಿ ಹೊಸ ಚೇತನ ಮತ್ತು ಉತ್ಸಾಹವನ್ನು ಉಂಟು ಮಾಡುತ್ತದೆ ಎಂಬ ಸಂದೇಶದೊಂದಿಗೆ ಅವರು ಈ ಹಾಡನ್ನು ಹಂಚಿಕೊಂಡಿದ್ದು, ಕನ್ನಡಿಗರ ಗಮನ ಸೆಳೆದಿದೆ. ವಿಶೇಷವಾಗಿ ನಾಡದೇವತೆ ಎಂದೇ ಕರೆಯಲ್ಪಡುವ ಮೈಸೂರಿನ ಆರಾಧ್ಯ ದೇವತೆ ಚಾಮುಂಡೇಶ್ವರಿ ಕುರಿತು ಪ್ರಧಾನಿ ಮೋದಿ ಮಾಡಿದ ಈ ಪೋಸ್ಟ್‌ಗೆ ಸಾಮಾಜಿಕ ಜಾಲತಾಣದಲ್ಲಿ ಭಾರಿ ಪ್ರತಿಕ್ರಿಯೆ ವ್ಯಕ್ತವಾಗಿದೆ.



ನರೇಂದ್ರ ಮೋದಿ

ಈ ಭಕ್ತಿಗೀತೆ ಕನ್ನಡದ ಅತ್ಯಂತ ಜನಪ್ರಿಯ ದೇವಿ ಹಾಡುಗಳಲ್ಲಿ ಒಂದಾಗಿದೆ. ವಿಶ್ವಮಾತೆ ಕುರಿತು ಪ್ರಧಾನಿ ಮೋದಿ ಹಂಚಿಕೊಂಡ ಈ ▶ 6ನೇ ಪುಟಕ್ಕೆ

‘ಮೈಸೂರು ಮಿತ್ರ’ ಫಲಶ್ರುತಿ

ಚಾಮರಾಜ ವೃತ್ತದ ಪಾದಚಾರಿ ಮಾರ್ಗದಲ್ಲಿ ‘ಟಾಂಗಾ ನಿಲ್ದಾಣ’ ನಿರ್ಮಾಣದಿಂದ ಹಿಂದೆ ಸರಿದ ಮಹಾನಗರ ಪಾಲಿಕೆ

ಅಡಿಪಾಯ ತೆರವು; ಜನ ಸಂಚಾರಕ್ಕೆ ಅನುವು

ಮೈಸೂರು, ಮಾ.21 (ಎಂಟಿವೈ)– ಮೈಸೂರು ಅರಮನೆ ಮುಂಭಾಗದ ಚಾಮರಾಜ ವೃತ್ತದಲ್ಲಿ ಪುರಭವನದ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಪಾದಚಾರಿ ಮಾರ್ಗದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ‘ಟಾಂಗ ನಿಲ್ದಾಣ’ ಕಾಮಗಾರಿಯನ್ನು ಮೈಸೂರು ಮಹಾನಗರ ಪಾಲಿಕೆ ಕೈಬಿಟ್ಟಿದೆ.



ಪಾದಚಾರಿ ಮಾರ್ಗದಲ್ಲಿ ಟಾಂಗಾ ನಿಲ್ದಾಣಕ್ಕಾಗಿ ನಿರ್ಮಿಸಿದ್ದ ಕಟ್ಟೆಗಳನ್ನು ತೆರವುಗೊಳಿಸಿರುವುದು.

ಪಾರಂಪರಿಕ ರಸ್ತೆ, ಪಾರಂಪರಿಕ ವೃತ್ತ ಹಾಗೂ ಪಾರಂಪರಿಕ ಕಟ್ಟಡಗಳ ಬಳಿ ನಿಯಮ ಉಲ್ಲಂಘಿಸಿ ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ್ ಯೋಜನೆಯಡಿ ಪಾದಚಾರಿ ಮಾರ್ಗದಲ್ಲಿ ಟಾಂಗಾ ನಿಲ್ದಾಣ ನಿರ್ಮಾಣದ ಬಗ್ಗೆ ಮಾ.16ರ ‘ಮೈಸೂರು ಮಿತ್ರ’ ಸಂಚಿಕೆಯಲ್ಲಿ ಸಮಗ್ರ ವರದಿ ಪ್ರಕಟಿಸಲಾಗಿತ್ತು. ಇದರಿಂದ ಸಾರ್ವಜನಿಕ ವಲಯದಲ್ಲಿ ಪಾದಚಾರಿ ಮಾರ್ಗ ನಿರ್ಮಾಣ ಕುರಿತು ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ▶ 6ನೇ ಪುಟಕ್ಕೆ

ಮೈಸೂರಲ್ಲಿ ಮುಸ್ಲಿಂ ಬಾಂಧವರಿಂದ ರಂಜಾನ್ ಆಚರಣೆ

ಸರ್‌ಖಾಜಿ ಮೌಲಾನ ಮಹಮ್ಮದ್ ಉಸ್ಮಾನ್ ಶರೀಫ್ ಪ್ರಾರ್ಥನೆ ವೇಳೆ ವಿಶ್ವಶಾಂತಿ ಸಂದೇಶ

- ಪರಸ್ಪರ ಆಲಂಗಿಸಿಕೊಂಡು ಶುಭಾಶಯ ವಿನಿಮಯ
- ಬಡವರಿಗೆ ಸಹಾಯ, ಸಿಹಿ ಹಂಚಿ ಹಬ್ಬ ಆಚರಣೆ

ಮೈಸೂರು, ಮಾ.21(ಜಿಎ)–ಶಾಂತಿ, ಸೌಹಾರ್ದತೆಯ ಸಂದೇಶ ಸಾರುವ ರಂಜಾನ್(ಈದ್ ಉಲ್ ಫಿತರ್) ಹಬ್ಬವನ್ನು ನಗರದೆಲ್ಲೆಡೆ ಮುಸ್ಲಿಂ ಸಮುದಾಯದವರು ಭಕ್ತಿಭಾವದಿಂದ ಆಚರಿಸಿದರು. ಮೂವತ್ತು ದಿನಗಳ ರಂಜಾನ್ ಉಪವಾಸವನ್ನು ಕಟ್ಟುನಿಟ್ಟಾಗಿ ಪಾಲಿಸಿದ ಮುಸ್ಲೀಮರು ತಮ್ಮ ಆದಾಯದ ಶೇ.2.5ರಷ್ಟನ್ನು ಜಕಾತ್ ರೂಪದಲ್ಲಿ ದಾನ ಮಾಡಿ, ಪ್ರತಿ ಕುಟುಂಬ ಸದಸ್ಯರಿಂದ ಫಿತ್ರಾ ನೀಡಿದ ನಂತರ ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ಭಕ್ತಿಪೂರ್ವಕವಾಗಿ ಸೇರಿ ಹಬ್ಬವನ್ನು ಆಚರಿಸಿದರು.

ನಗರದ ವಿವಿಧ ಕಡೆಗಳಲ್ಲಿರುವ ಮಸೀದಿಗಳಲ್ಲಿ ಶನಿವಾರ ಮುಂಜಾನೆಯಿಂದಲೇ ಪ್ರಾರ್ಥನೆ ಸಲ್ಲಿಸಿ ಬಳಿಕ ತಿಲಕ್‌ನಗರದ ಈದ್ಗಾ ಮೈದಾನಕ್ಕೆ ತೆರಳಿ ಮುಸ್ಲಿಂ ಧರ್ಮಗುರು ಸರ್‌ಖಾಜಿ ಮೌಲಾನ ಮಹಮ್ಮದ್ ಉಸ್ಮಾನ್ ಶರೀಫ್ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಸಾಮೂಹಿಕ ಪ್ರಾರ್ಥನೆ ನಂತರ ಪರಸ್ಪರ ಆಲಂಗಿಸಿಕೊಂಡು ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರಲ್ಲದೆ, ಸಿಹಿ ವಿತರಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಬಡ ಮುಸ್ಲಿಂ ಸಮುದಾಯದವರಿಗೆ ಹಬ್ಬದ ಅಂಗವಾಗಿ ಸಿಹಿ ತಿಂಡಿ, ಹಾಲು, ಹಣ್ಣು, ಬಟ್ಟೆ ಇತ್ಯಾದಿಗಳನ್ನು ವಿತರಿಸಲಾಯಿತು. ರಾಜೀವ್‌ನಗರ, ಗೌಸಿಯಾನಗರದ ಈದ್ಗಾಗಳಲ್ಲಿ ಈದ್ ನಮಾಜ್ ನಡೆಯಿತು. ಬಡಾವಣೆಗಳಲ್ಲಿ ಇರುವ ಮಸೀದಿಗಳಲ್ಲೂ ಪ್ರಾರ್ಥನೆ ಸಲ್ಲಿಸಿದರು.

ಬಳಿಕ ಸ್ನೇಹಿತರ ಮನೆಗಳು, ಅಕ್ಕಪಕ್ಕದ ಮನೆಗಳಿಗೆ ತೆರಳಿ ಶುಭಾಶಯ ವಿನಿಮಯ ಮಾಡಿಕೊಂಡರು. ಸಾಮೂಹಿಕ ಪ್ರಾರ್ಥನೆ ಹಾಗೂ ಸಾಮೂಹಿಕ ನಮಾಜ್ ಸಮಯದಲ್ಲೂ ಎಲ್ಲರೂ ಪರಸ್ಪರ ಆಲಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು.

ಈ ವೇಳೆ ಧರ್ಮ ಸಂದೇಶ ನೀಡಿದ ಧರ್ಮಗುರು ಸರ್‌ಖಾಜಿ ಮೌಲಾನ ಮಹಮ್ಮದ್ ಉಸ್ಮಾನ್ ಶರೀಫ್, ಇಸ್ಲಾಂ ಧರ್ಮದ ಮುಖ್ಯ ಉದ್ದೇಶ ದೇವರ ಆರಾಧನೆ ಹಾಗೂ ಮಾನವ ಸೇವೆ. ಉಪವಾಸ, ನಮಾಜ್, ಜಕಾತ್ ಮತ್ತು ಫಿತ್ರಾ ಮೂಲಕ ಬಡವರಿಗೂ ಸಹಾಯ ಮಾಡುವುದೇ ಈ ಹಬ್ಬದ ಮಹತ್ವ. ಈದ್ ಹಬ್ಬ ಕೇವಲ ಆಚರಣೆ ಮಾತ್ರವಲ್ಲ, ವಿಶ್ವಕ್ಕೆ ಮಾನವೀಯತೆ, ಏಕತೆ ಮತ್ತು ಸಹೋದರತ್ವದ ಸಂದೇಶ ಸಾರುವ ಹಬ್ಬವಾಗಿದೆ ಎಂದರು.

ಪ್ರವಾದಿ ಮಹಮ್ಮದ್ ಅವರ ಜೀವನಶೈಲಿಯನ್ನು ಅನುಸರಿಸುವುದರೊಂದಿಗೆ ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬದುಕಬೇಕು. ಯುವಕರು ಮದ್ಯಪಾನ, ಮಾದಕ ವಸ್ತುಗಳಂತಹ ದುಶ್ಚಟಗಳಿಂದ ದೂರವಿದ್ದು ಉತ್ತಮ ಜೀವನ ನಡೆಸಬೇಕು ಎಂದು ಸಲಹೆ ನೀಡಿದ ಅವರು, ದೇಶದ ಹಾಗೂ ವಿಶ್ವದ ಶಾಂತಿ ಮತ್ತು ಸಮೃದ್ಧಿಗಾಗಿ ಪ್ರಾರ್ಥಿಸಿದರು.





ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ವೇಳೆ ಮುಸ್ಲಿಂ ಧರ್ಮಗುರು ಸರ್‌ಖಾಜಿ ಮೌಲಾನ ಮಹಮ್ಮದ್ ಉಸ್ಮಾನ್ ಶರೀಫ್ ಸಂದೇಶ ಸಾರಿದರು.

ಸಾಮೂಹಿಕ ಪ್ರಾರ್ಥನೆ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಮೈದಾನದ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಶಾಸಕ ತನ್ವೀರ್ ಸೇಠ್ ಅಶೋಕ ರಸ್ತೆಯ ಮಸ್ಜಿದ್–ಎ–ಕಚ್ಚಿ ಮೆಮನ್‌ನಲ್ಲಿ ಬೆಳಗ್ಗೆ ಈದ್ ನಮಾಜ್‌ನಲ್ಲಿ ಪಾಲ್ಗೊಂಡು ಮುಸ್ಲಿಂ ಸಹೋದರರಿಗೆ ಹಬ್ಬದ ಶುಭಾಶಯ ಕೋರಿದರು. ಶಾಸಕ ಕೆ.ಹರೀಶ್ ಗೌಡ ಈದ್ಗಾ ಮೈದಾನಕ್ಕೆ ಭೇಟಿ ನೀಡಿ ಮುಸಲ್ಮಾನರಿಗೆ ರಂಜಾನ್ ಶುಭಾಶಯ ತಿಳಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮಾಜಿ ಡೀನ್ ಡಾ.ಶಕೀಬ್–ಉರ್–ರಹಮಾನ್, ಮಾಜಿ ಕಾರ್ಪೊರೇಟರ್ ಮತ್ತು ಮುಸ್ಲಿಂ ಸಹಕಾರ ಬ್ಯಾಂಕ್ ಅಧ್ಯಕ್ಷ ಕೆ.ಸಿ. ಶೌಕತ್ ಪಾಷಾ, ಮಾಜಿ ಉಪ ಮೇಯರ್ ಅನ್ವರ್ ಅಫ್ತಾಬ್ ಬೇಗ್, ಮೈಸೂರು ಜಿಲ್ಲೆ ವಕ್ಫ್ ಸಲಹಾ ಸಮಿತಿ ಅಧ್ಯಕ್ಷ ಆರಿಫ್ ಎ.ಮೆಹ್ತಿ, ವಕ್ಫ್ ಅಧಿಕಾರಿ ಮುಷ್ತಾಕ್ ಅಹಮದ್ ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್, ಮೌಲಾನಾ ಮುಫ್ತಿ ಸೈಯದ್ ತಾಜುದ್ದೀನ್, ಮೌಲಾನಾ ಅಬ್ದುಸ್ ಸಲಾಂ, ಕಾಂಗ್ರೆಸ್ ಮುಖಂಡರಾದ ಶೌಕತ್ ಅಲಿ ಖಾನ್, ಅಬ್ರಾರ್ ಮೊಹಮ್ಮದ್, ಮೊಹಮ್ಮದ್ ತಂಝೀಲ್ ಫೈಜಾನ್, ಪತ್ರಕರ್ತ ಅಪ್ಸರ್ ಪಾಷಾ ಮತ್ತು ಸಮಾಜದ ಮುಖಂಡರು ಜಮೀಲ್ ಅಹ್ಮದ್ ಅಶ್ರಫಿ, ಮುಮ್ತಾಜ್ ಅಹಮದ್, ಮಜಿ ತಾಜ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಭಾನುವಾರ 22 ಮಾರ್ಚ್ 2026

ಇರಾನ್ ಮೇಲಿನ ದಾಳಿ ಖಂಡಿಸಿದ ಪ್ರಧಾನಿ ಮೋದಿ



ನವದೆಹಲಿ,ಮಾ.21–ಅಮೆರಿಕ ಹಾಗೂ ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸಿದ ಭೀಕರ ವೈಮಾನಿಕ ದಾಳಿಯ ಬಗ್ಗೆ ಕೊನೆಗೂ ಮೌನ ಮುರಿದಿರುವ ಪ್ರಧಾನಿ ನರೇಂದ್ರ ಅವರು, ಪವಿತ್ರ ರಂಜಾನ್ ಹಬ್ಬದಂದೇ ಇರಾನ್ ಮೇಲಿನ ದಾಳಿಯನ್ನು ಖಂಡಿಸಿದ್ದಾರೆ.

ಈ ಕುರಿತು ಶನಿವಾರ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಇರಾನ್ ಅಧ್ಯಕ್ಷ ಡಾ. ಮಸೂದ್ ಪೆಜೆಶ್ಕಿಯಾನ್ ಅವರೊಂದಿಗೆ ಮಾತನಾಡಿ ಈದ್ ಮತ್ತು ನೌರುಜ್ ಶುಭಾಶಯ ತಿಳಿಸಿದ್ದೇವೆ. ಈ ಹಬ್ಬವು ಪಶ್ಚಿಮ ಏಷ್ಯಾಕ್ಕೆ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಯನ್ನು ತರುತ್ತದೆ ಎಂದು ನಾವು ಆಶಿಸುತ್ತೇವೆ ಎಂದಿದ್ದಾರೆ.

ಪ್ರಾದೇಶಿಕ ಸ್ಥಿರತೆಗೆ ಬೆದರಿಕೆ ಹಾಕುವ ಮತ್ತು ಜಾಗತಿಕ ಪೂರೈಕೆ ಸರಪಳಿಗೆ ಅಡ್ಡಿಪಡಿಸುವ ಈ ಪ್ರದೇಶದಲ್ಲಿನ ನಿರ್ಣಾಯಕ ಮೂಲಸೌಕರ್ಯಗಳ ಮೇಲಿನ ದಾಳಿಯನ್ನು ಖಂಡಿಸುತ್ತೇವೆ ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಚರಣೆ ಸ್ವಾತಂತ್ರ್ಯವನ್ನು ಕಾಪಾಡುವ ಮತ್ತು ಹಡಗು ಮಾರ್ಗಗಳು ಮುಕ್ತ ಮತ್ತು ಸುರಕ್ಷಿತವಾಗಿರುವುದನ್ನು ಖಚಿತಪಡಿಸಿಕೊಳ್ಳುವ ಮಹತ್ವವನ್ನು ಪುನರುಚ್ಚರಿಸಲಾಗಿದೆ. ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳ ಸುರಕ್ಷತೆ ಮತ್ತು ಭದ್ರತೆಗೆ ಇರಾನ್‌ನ ನಿರಂತರ ಬೆಂಬಲವನ್ನು ಶ್ಲಾಘಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ಹಿಂದೆ ಇರಾನ್ ವಿರುದ್ಧದ ಯುದ್ಧಕ್ಕೆ ಕೇಂದ್ರ ಸರ್ಕಾರದ ಪ್ರತಿಕ್ರಿಯೆಯು ಭಾರತದ ಮೌಲ್ಯಗಳು, ತತ್ವಗಳು ಮತ್ತು ಹಿತಾಸಕ್ತಿಗಳಿಗೆ ಬಗೆದ ದ್ರೋಹವಾಗಿದೆ ಎಂದು ಕಾಂಗ್ರೆಸ್, ಮೋದಿ ವಿರುದ್ಧ ವಾಗ್ದಾಳಿ ನಡೆಸಿತ್ತು

ಶ್ರೀಗಳಿಂದ ಆಶೀರ್ವಾದ...



ಮೈಸೂರು ನಗರ ಜೆಡಿಎಸ್ ಅಧ್ಯಕ್ಷರಾಗಿ ನೇಮಕಗೊಂಡ ಎಸ್‌ಬಿಎಂ ಮಂಜು ಅವರು ಆದಿಚುಂಚನಗಿರಿಯ ಮೈಸೂರು ಶಾಖಾ ಮಠಕ್ಕೆ ಭೇಟಿ ನೀಡಿ ಶ್ರೀ ಸೋಮನಾಥನಂದ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ಜೆಡಿಎಸ್ ಮುಖಂಡರಾದ ಚಂದ್ರಹಾಸ್, ಮಹದೇವ್, ಹನುಮೇಗೌಡ ಇದ್ದರು.

ಅಭಿನಂದನೆ...



ಬಡವರ ಬಂಧು ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡ ಮಾಜಿ ಮೇಯರ್ ಅನಂತು ಅವರನ್ನು ಕಾಂಗ್ರೆಸ್ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಪಡುವಾರಹಳ್ಳಿ ಪಾಪಣ್ಣ, ಕಾಂಗ್ರೆಸ್ ಯುವ ಮುಖಂಡರಾದ ಕೃಷ್ಣ, ಸತ್ಯನಾರಾಯಣ, ಸುಣ್ಣದಕೇರಿ ರಮೇಶ್ ಇದ್ದರು.

ನೀರಾನೆ ದಾಳಿಗೆ ಪಶುವೈದ್ಯೆ ಸಾವು ಪ್ರಕರಣ

ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ; ಸಮೀಕ್ಷಾ ಮಾವ ಗಂಭೀರ ಆರೋಪ

ಆನೇಕಲ್, ಮಾ. 21: ಶಿವಮೊಗ್ಗದ ಹುಲಿಧಾಮದಲ್ಲಿ ನೀರಾನೆ ದಾಳಿಗೆ ಪಶುವೈದ್ಯೆ ಸಮೀಕ್ಷಾ ರೆಡ್ಡಿ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಇದರಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಹಾಗಾಗಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಆಗಬೇಕು ಎಂದು ಮೃತ ಸಮೀಕ್ಷಾ ರೆಡ್ಡಿ ಮಾವ ನವೀನ್ ಗಂಭೀರ ಆರೋಪ ಮಾಡಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯ ಆನೇಕಲ್‌ನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಚಿಕ್ಕಂದಿನಿಂದಲೂ ಕಾಡು ಪ್ರಾಣಿಗಳೆಂದರೆ ಸಮೀಕ್ಷಾಗೆ ಹೆಚ್ಚು ಪ್ರೀತಿ. ನೂರಾರು ಕೋಟಿ ರೂ ಆಸ್ತಿ ಇದ್ರೂ ಸೇವೆ ಮಾಡಬೇಕೆಂಬ ಹಂಬಲ ಇತ್ತು. ಮದುವೆ ಮಾಡಿಕೊಳ್ಳುವ ಯೋಚನೆ ಕೂಡ ಸಮೀಕ್ಷಾಗೆ ಇರಲಿಲ್ಲ. ಅಧಿಕಾರಿಗಳೇ ಹಾಸ್ಟೆಲ್ ಬಳಿ ಜೀಪ್ ಕಳುಹಿಸಿದ್ದಾರೆ.

ಹಾಸ್ಟೆಲ್ ವಾರ್ಡನ್ ಇಬ್ಬರು ಯುವತಿಯರನ್ನ ಜೊತೆಗೆ ಕಳಿಸಿದ್ದಾರೆ. ಒಬ್ಬ ಹುಡುಗಿಯನ್ನು ನೀರಾನೆ ಬಳಿ ಕಳಿಸಲು ಕಾಮನ್‌ಸೆನ್ಸ್ ಬೇಕು. 20 ಸಿಂಹಗಳು ಸಹ ಒಂದು ನೀರಾನೆ ಸಮೀಪ ಹೋಗಲ್ಲ, ಅದರಲ್ಲೂ ನೀರಾನೆ ಗರ್ಭಿಣಿ ಇದ್ದು ಭಯ ಇರುತ್ತೆ. ವೈಲ್ಡ್‌ಲೈಫ್ ಬಗ್ಗೆ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದಿದ್ದಾರೆ.

ಕವಿ ಗೋಷ್ಠಿಗೆ ಕವನಗಳ ಆಹ್ವಾನ

ಮೈಸೂರು,ಮಾ.21–ಮೈಸೂರಿನ ವಿಜಯನಗರ 1 ನೇ ಹಂತದಲ್ಲಿರುವ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ 'ಪರಭವಕ್ಕೆ ಮುನ್ನುಡಿ' ಎಂಬ ಕವನ ಸಂಕಲನವನ್ನು ಹೊರತರಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಆಸಕ್ತ ಮೈಸೂರು ಜಿಲ್ಲೆಯ ಕವಿಗಳಿಂದ ಪ್ರಚಲಿತ ವಿದ್ಯಾಮಾನಗಳನ್ನು ಕುರಿತ ವೈವಿಧ್ಯಮಯ ಸ್ವರಚಿತ ಕವನಗಳನ್ನು ಆಹ್ವಾನಿಸಲಾಗಿದೆ. ಕವನಗಳನ್ನು ಮಾ.25ರೊಳಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಮ.ನ.ಲತಾಮೋಹನ್ ಮೊ: 7624831434 ಅಥವಾ sanjwmincu@gmail.com ಗೆ ಕಳುಹಿಸುವಂತೆ ಪರಿಷತ್‌ನ ಜಂಟಿ ಕಾರ್ಯದರ್ಶಿ ಮೈ.ನಾ.ಲೋಕೇಶ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ನಿಧನ



ಜಯಶಂಕರ್

ಮೈಸೂರು: ರಾಮಾನುಜ ರಸ್ತೆಯ 4ನೇ ತಿರುವಿನ ನಿವಾಸಿ, ಪತ್ರಿಕಾ ಏಜೆಂಟ್ ಜಯಶಂಕರ್ ಅವರು ಶನಿವಾರ ನಿಧನರಾದರು. ಮೃತರಿಗೆ 61 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಪುತ್ರಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ನಾಳೆ (ಮಾ.22) ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ. ಇವರು ಮೂರು ದಶಕಗಳಿಂದ ವಿವಿಧ ಪತ್ರಿಕೆಗಳ ಪತ್ರಿಕಾ ಏಜೆನ್ಸಿ ಪಡೆದು, ಯಶಸ್ವಿಯಾಗಿ ನಿರ್ವಹಿಸಿದ್ದರು. ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಸುರೇಶ್, ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಂದರ್, ಸದಸ್ಯರು ಇವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಟಿ. ಭಾಗ್ಯಲಕ್ಷ್ಮಿ



ಮೈಸೂರು, ಮಾ.21–ಆಧ್ಯಾತ್ಮಿಕ ಸಾಧಕಿಯಾಗಿದ್ದ ಶ್ರೀಮತಿ ಟಿ.ಭಾಗ್ಯಲಕ್ಷ್ಮಿ ಇಂದು ಹೃದಯಾಘಾತದಿಂದ ನಗರದ ಶ್ರೀರಾಂಪುರ ಬಡಾವಣೆಯಲ್ಲಿನ ತಮ್ಮ ಸ್ವಗೃಹದಲ್ಲಿ ನಿಧನರಾದರು.ಮೃತರು ಮೂವರು ಪುತ್ರರು ಮತ್ತು ಪುತ್ರಿಯನ್ನು ಹಾಗೂ ಸಹೋದರ ಮಹಾರಾಣಿ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರಾಗಿದ್ದ ಡಾ. ಟಿ. ಸುಬ್ರಹ್ಮಣ್ಯಂ, ನಾಲ್ವರು ಸಹೋದರಿಯರನ್ನು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಧ್ಯಾಹ್ನದ ನಂತರ ನಂಜನಗೂಡು ರಸ್ತೆಯಲ್ಲಿನ ಹರಿಶ್ಚಂದ್ರಘಾಟ್‌ನಲ್ಲಿ ನಡೆಸಲಾಯಿತೆಂದು ಕುಟುಂಬದ ಮೂಲಗಳು ತಿಳಿಸಿವೆ.



ನರಸಮ್ಮ

ಮೈಸೂರು,ಮಾ.21– ಮೈಸೂರಿನ ಚಿಕ್ಕವೀರಣ್ಣ ರಸ್ತೆಯ 10ನೇ ಕ್ರಾಸ್ ನಿವಾಸಿ ನರಸಮ್ಮ (85) ಶನಿವಾರ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪುತ್ರ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಸದಸ್ಯ ನರಸಿಂಹ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಾ.22ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಣವಂತರು, ವಂಚಕರು ನಾಯಕರಾಗಿ ಆಡಳಿತ ನಡೆಸುತ್ತಿದ್ದಾರೆ

ವಿಶ್ವ ಸ್ವಯಂಸೇವಾ ಸಂಸ್ಥೆ, ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ



ಮೈಸೂರಿನ ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆಯ ಸೀತಾ ಸಭಾಂಗಣದಲ್ಲಿ ಮೈತ್ರಿ ಮೈಸೂರು ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ವತಿಯಿಂದ ವಿಶ್ವ ಸ್ವಯಂಸೇವಾ ಸಂಸ್ಥೆಗಳ ದಿನ ಹಾಗೂ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಮೈಸೂರು,ಮಾ.21(ಜಿಎ)–ಸಮಾಜವನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ನಿಟ್ಟಿನಲ್ಲಿ ಅನ್ಯಾಯಗಳನ್ನು ಖಂಡಿಸುವ ಹಾಗೂ ಸರ್ಕಾರಗಳನ್ನು ಎಚ್ಚರಿಸುವ ಹೊಣೆಗಾರಿಕೆಯನ್ನು ಸ್ವಯಂ ಸೇವಾ ಸಂಸ್ಥೆಗಳು ಹೊತ್ತಿವೆ ಎಂದು ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಹಣವಂತರು, ವಂಚಕರು ನಾಯಕರಾಗಿ ಆಡಳಿತ ನಡೆಸುತ್ತಿದ್ದಾರೆ ಎಂದರು.

ಮೈಸೂರಿನ ಮೇಟಗಳ್ಳಿಯಲ್ಲಿರುವ ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆಯ ಸೀತಾ ಸಭಾಂಗಣದಲ್ಲಿ ಮೈತ್ರಿ ಮೈಸೂರು ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದಿಂದ ಆಯೋಜಿಸಿದ್ದ ವಿಶ್ವ ಸ್ವಯಂ ಸೇವಾ ಸಂಸ್ಥೆಗಳ ದಿನ ಹಾಗೂ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ಕಾಲಘಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಕೇವಲ ಸೇವಾ ಕಾರ್ಯಗಳಿಗೆ ಸೀಮಿತವಾಗದೇ, ಸುಸ್ಥಿರ ಅಭಿವೃದ್ಧಿಯ ದಿಸೆಯಲ್ಲಿ ಸಮಾಜವನ್ನು ಪ್ರಶ್ನಿಸುವ ಮತ್ತು ಜಾಗೃತಿಗೊಳಿಸುವ ಕಾರ್ಯವನ್ನು ಮಾಡಬೇಕಾಗಿದೆ. ದೇಶದಲ್ಲಿ ಹಣವಂತರು ಮತ್ತು ವಂಚಕರು ನಾಯಕರಾಗಿ ಆಡಳಿತ ನಡೆಸುತ್ತಿರುವುದು ಸಮಾಜವನ್ನು ದುಸ್ಥಿತಿಗೆ ತಳ್ಳುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವದಲ್ಲಿ ನಿರಂಕುಶ ಆಡಳಿತದ ಲಕ್ಷಣಗಳು ಕಾಣಿಸುತ್ತಿವೆ. ಸಮಾಜದ ಬಗ್ಗೆ ಕಾಳಜಿ ಇರುವವರು ರಾಜಕೀಯಕ್ಕೆ ಬರಲು ಹಿಂಜರಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಮಹಿಳೆಯರು ಜಾತಿ ಮತ್ತು ಧರ್ಮದ ಕಟ್ಟಳೆಗಳಿಂದ ದೂರ ಉಳಿದು ಜನಸಾಮಾನ್ಯರೊಂದಿಗೆ ಬೆರೆತು ಕೆಲಸ ಮಾಡಬೇಕು. ಸಮಾಜ ದಲ್ಲಿ ಬೇರೂರಿರುವ ಕತ್ತು ಹಿಸುಕುವ ಕಟ್ಟು ಪಾಡುಗಳನ್ನು ತಳ್ಳಿಹಾಕಿ, ಸಮಾನತೆ ಮತ್ತು ನ್ಯಾಯದ ದಾರಿಯಲ್ಲಿ ನಡೆಯುವುದು ಅಗತ್ಯ ಎಂದರು.

ವಿಶ್ರಾಂತ ಕುಲಪತಿ ಪ್ರೊ.ವೈ.ಎಸ್. ಸಿದ್ದೇಗೌಡ ಮಾತನಾಡಿ, ಭಾರತವು ಇಂದು ವಿಶ್ವದ ಬಲಿಷ್ಠ ರಾಷ್ಟ್ರಗಳಲ್ಲಿ ಒಂದಾಗಿ ಹೊರಹೊಮ್ಮಲು ಸಂವಿಧಾನವೇ ಬುನಾದಿಯಾಗಿದೆ. ಸರ್ಕಾರ ಮಾತ್ರ ಸಮಾಜದ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ. ಸ್ವಯಂಸೇವಾ ಸಂಸ್ಥೆಗಳಿಗೂ ಅವಕಾಶ ನೀಡಿ ಸಮಾಜಮುಖಿ ಕಾರ್ಯಗಳಿಗೆ ಪ್ರೋತ್ಸಾಹ ನೀಡಲಾಗಿದೆ. ಎನ್‌ಜಿಒ ಸಂಸ್ಥೆಗಳು ಸಮಾಜದಲ್ಲಿ ಉತ್ತಮ ಸಂಬಂಧ ಬೆಳೆಸಿ ಅನೇಕ ಸೇವಾ ಕಾರ್ಯಕ್ರಮಗಳನ್ನು ನಡೆಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆರ್.ಎಲ್.ಹೆಚ್.ಪಿ ಸಂಸ್ಥೆಯ ನಿರ್ದೇಶಕಿ ಸರಸ್ವತಿ ಮಾತನಾಡಿ, ಸಮಾಜದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಿರುವುದು ಕಳವಳಕಾರಿಯಾಗಿದೆ. ನೈತಿಕ ಮೌಲ್ಯಗಳ ಕುಸಿತ, ಮಕ್ಕಳ ಮೇಲಿನ ಹಿಂಸಾಚಾರ ಮತ್ತು ಮಹಿಳೆಯರ ಮೇಲಿನ ಅಪರಾಧಗಳು ಹೆಚ್ಚುತ್ತಿರುವುದು ಸಮಾಜದ ಅಸ್ವಸ್ಥತೆ ತೋರಿಸುತ್ತದೆ ಎಂದು ತಿಳಿಸಿದರು.

ಪತ್ರಕರ್ತೆ ರಶ್ಮಿ ಕೋಟಿ ಮಾತನಾಡಿ, ಮಹಿಳೆ ಸಬಲರಾದರೆ ಕುಟುಂಬ ಸ್ವಾವಲಂಬಿಯಾಗುತ್ತದೆ. ಕುಟುಂಬ ಸ್ವಾವಲಂಬಿಯಾದರೆ ಸಮಾಜದ ಅಭಿವೃದ್ಧಿಗೆ ದಾರಿ ತೆರೆದುಕೊಳ್ಳುತ್ತದೆ. ಸಮಾಜದ ಪ್ರಗತಿ ಮಹಿಳೆಯರ ಸಬಲೀಕರಣದ ಮೇಲೆ ಅವಲಂಬಿತವಾಗಿದೆ ಎಂದರು.

ವಿಕಸನ ಸಂಸ್ಥೆಯ ಮಹೇಶ್ ಚಂದ್ರ ಗುರು ಮಾತನಾಡಿ, ಸ್ವಯಂಸೇವಾ ಸಂಸ್ಥೆಗಳ ಮೂಲಕ ಸಮಾಜದಲ್ಲಿ ಉತ್ತಮ ಬದಲಾವಣೆ ತರಲು ಸಾಧ್ಯವಾಗುತ್ತದೆ. ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಸಮಾಜಮುಖಿ ಕಾರ್ಯಕ್ರಮಗಳು ಯಶಸ್ವಿಯಾಗುತ್ತವೆ ಮತ್ತು ನೊಂದವರಿಗೆ ಹೆಚ್ಚು ಸಹಾಯ ದೊರೆಯುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪರಿವರ್ತನ ಸಂಸ್ಥೆಯ ಜಿ.ಎಸ್.ರಾಜೇಗೌಡ, ಮಹಿಳಾ ಪರ ಹೋರಾಟಗಾರರಾದ ಕೆ.ಎನ್. ಸುನೀತಾ, ಎನ್.ಆರ್.ಸಂಸ್ಥೆಯ ಆರ್. ಹರೀಶ್ ಅವರನ್ನು ಅಭಿನಂದಿಲಾಯಿತು.

ಈ ಸಂದರ್ಭದಲ್ಲಿ ಎನ್‌ಆರ್ ಫೌಂಡೇಶನ್ ಅಧ್ಯಕ್ಷ ಆರ್.ಗುರು, ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಎನ್‌ಆರ್ ನಿಸರ್ಗ ಫೌಂಡೇಶನ್ ನಿರ್ದೇಶಕ ಹೆಚ್.ಡಿ.ಕೋಟೆ ಪ್ರಭು, ಮೈತ್ರಿ ಅಧ್ಯಕ್ಷ ಡಾ.ಮೋಹನ್ ಕೋಟೆಕೆರೆ ಇನ್ನಿತರರು ಉಪಸ್ಥಿತರಿದ್ದರು.

ಬೋಗಾದಿ ಪಪಂ ಬಜೆಟ್‌ಗೆ ಶಾಸಕ ಜಿ.ಟಿ.ದೇವೇಗೌಡರಿಂದ ಅನುಮೋದನೆ



ಬೋಗಾದಿ ಪಟ್ಟಣ ಪಂಚಾಯಿತಿಯ ಆಯ–ವ್ಯಯ(ಬಜೆಟ್)ಕ್ಕೆ ಶಾಸಕ ಜಿ.ಟಿ.ದೇವೇಗೌಡರು ಅನುಮೋದನೆ ನೀಡಿದರು. ಈ ವೇಳೆ ಆಡಳಿತಾಧಿಕಾರಿ ಮಹೇಶ್‌ಕುಮಾರ್, ಮುಖ್ಯ ಅಧಿಕಾರಿ ಸುಜಯ್‌ಕುಮಾರ್, ಕಂದಾಯಾಧಿಕಾರಿ ಶಿವಾನಂದಪ್ಪ, ಕಿರಿಯ ಇಂಜಿನಿಯರ್ ಸೌಮ್ಯ, ಕಿರಿಯ ಆರೋಗ್ಯ ನಿರೀಕ್ಷಕ ಪುನೀತ್‌ಕುಮಾರ್, ಅಕೌಂಟೆಡ್ ಪ್ರಕಾಶ್ ಉಪಸ್ಥಿತರಿದ್ದರು.

ಭಾರತದತ್ತ ಎಲ್‌ಪಿಜಿ ಹೊತ್ತ ಇನ್ನು ಎರಡು ಹಡಗುಗಳು



ಟೆಹ್ರಾನ್: ಭಾರತದ ಎರಡು ದ್ರವೀಕೃತ ಪೆಟ್ರೋಲಿಯಂ ಅನಿಲ ಟ್ಯಾಂಕರ್‌ಗಳು ಹಾರ್ಮುಜ್ ಜಲಸಂಧಿ ದಾಟಲು ಇರಾನ್ ಸಮ್ಮತಿಸಿದೆ. ಹೀಗಾಗಿ ಟ್ಯಾಂಕರ್‌ಗಳು ಹಾರ್ಮುಜ್ ಮೂಲಕ ಸಾಗಲು ತಯಾರಿ ನಡೆಸುತ್ತಿವೆ ಎಂದು ವರದಿಯಾಗಿದೆ.

ಫೆಬ್ರವರಿ 28ರಂದು ಯುದ್ಧ ಪ್ರಾರಂಭವಾದಾಗಿನಿಂದ ಇರಾನ್ ಮತ್ತು ಓಮನ್ ನಡುವಿನ ಕಿರಿದಾದ ಸಮುದ್ರ ಮಾರ್ಗದಲ್ಲಿ ನೂರಾರು ಹಡಗುಗಳು ಸಿಲುಕಿಕೊಂಡಿದ್ದವು. ಆದಾಗ್ಯೂ, ಭಾರತದ ರಾಜತಾಂತ್ರಿಕ ಸಂಪರ್ಕದ ನಂತರ, ಎರಡು ಭಾರತೀಯ ಹಡಗುಗಳಾದ ಶಿವಾಲಿಕ್ ಮತ್ತು ನಂದಾದೇವಿ ಸುರಕ್ಷಿತವಾಗಿ ಜಲಸಂಧಿಯನ್ನು ದಾಟಿ ಗುಜರಾತ್ ತಲುಪಿವೆ.

ಗಲ್ಫ್ ಸಮುದ್ರದಲ್ಲಿ ಲಂಗರು ಹಾಕಲಾಗಿರುವ ಇನ್ನೂ ಎರಡು ಭಾರತೀಯ ಟ್ಯಾಂಕರ್‌ಗಳು ಶೀಘ್ರದಲ್ಲೇ ಹಾರ್ಮುಜ್ ಜಲಸಂಧಿಯನ್ನು ದಾಟುವ ಸಾಧ್ಯತೆಯಿದೆ. ಗಲ್ಫ್‌ನೊಳಗೆ ಯುನೈಟೆಡ್ ಅರಬ್ ಎಮಿರೇಟ್ಸ್ ಕೇಂದ್ರವಾದ ಶಾರ್ಜಾ ಬಳಿ ಲಂಗರು ಹಾಕಲಾಗಿರುವ ಭಾರತೀಯ ಧ್ವಜ ಹೊತ್ತ ಎಲ್‌ಪಿಜಿ ಟ್ಯಾಂಕರ್‌ಗಳಾದ ಪೈನ್ ಗ್ಯಾಸ್ ಮತ್ತು ಜಗ್ ವಸಂತ್ ಪ್ರಯಾಣಕ್ಕೆ ಸಿದ್ಧತೆ ನಡೆಸುತ್ತಿವೆ.

ಎರಡು ಎಲ್‌ಪಿಜಿ ಟ್ಯಾಂಕರ್‌ಗಳು ಇಂದು ಪ್ರಯಾಣ ಬೆಳೆಸುವ ಸಾಧ್ಯತೆ ಇದೆ. ಜಗ್ ವಸಂತ್ ಅನ್ನು ಬಿಪಿಸಿಎಲ್ ಮತ್ತು ಪೈನ್ ಗ್ಯಾಸ್ ಅನ್ನು ಐಒಸಿ ಚಾರ್ಟರ್ಡ್ ಮಾಡಿವೆ ಎಂದು ತಿಳಿದುಬಂದಿದೆ. ನಿನ್ನೆ ಹಡಗುಗಳು ನೌಕಾಯಾನಕ್ಕೆ ಸಿದ್ಧವಾಗುತ್ತಿವೆಯೇ ಎಂದು ಕೇಳಿದಾಗ, ಭಾರತದ ಫೆಡರಲ್ ಶಿಪ್ಪಿಂಗ್ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ, ತಕ್ಷಣದ ವಿವರಗಳು ಲಭ್ಯವಿಲ್ಲ ಎಂದು ಹೇಳಿದ್ದರು. ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಮಾತನಾಡಿ, ಗಲ್ಫ್ ಒಳಗಿರುವ ಭಾರತದ 22 ಹಡಗುಗಳ ಸುರಕ್ಷಿತ ಮತ್ತು ಅಡೆತಡೆಯಿಲ್ಲದ ಸಂಚಾರಕ್ಕೆ ದೇಶದ ಪ್ರಯತ್ನ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಇತರ ನಾಯಕರೊಂದಿಗೆ ಅವುಗಳ ಸುರಕ್ಷಿತ ಸಾಗಣೆಯ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮಾ.24, 25, ನೀರು ಸರಬರಾಜಲ್ಲಿ ವ್ಯತ್ಯಯ



ಮೈಸೂರು, ಮಾ.21(ಎಸ್‌ಪಿಎನ್)– ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ ಯಂತ್ರಾಗಾರಕ್ಕೆ ಮಾ.24ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ನಿಲುಗಡೆಯಾಗಲಿದೆ. ಈ ಹಿನ್ನಲೆಯಲ್ಲಿ ಮಾ.24 ಮತ್ತು 25ರಂದು ನೀರು ಸರಬರಾಜಿನಲ್ಲಿ ವ್ಯತ್ಯವಾಗಲಿದೆ.

ಸಿಎಸ್‌ಆರ್ ಮತ್ತು ಹೆಚ್‌ಎಲ್‌ಆರ್ ಪ್ರಾಂತ್ಯಗಳಿಗೆ, ವಾರ್ಡ್ ನಂ.1ರಿಂದ 7, ವಾರ್ಡ್ ನಂ.20, 23, 38, ವಾರ್ಡ್ ನಂ.42ರಿಂದ 45,47 ಹಾಗೂ ಡಿಎಂಎ ಪ್ರದೇಶಗಳಾದ ಹೆಬ್ಬಾಳ, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ. ಕೊಪ್ಪಲು, ಮೇಟಗಳ್ಳಿ, ಲೋಕನಾಯಕ ನಗರ, ಬೃಂದಾವನ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿ ನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 2ನೇ ಮತ್ತು 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರವಲಯಗಳಾದ ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್.ಆರ್. ಮೊಹಲ್ಲಾ ಭಾಗಶಃ, ನಜರ್‌ಬಾದ್, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಎಚ್‌ಬಿ ಕಾಲೂನಿ, ಹೂಟಗಳ್ಳಿ ಹಾಗೂ ಇತ್ಯಾದಿ ಪ್ರದೇಶಗಳಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೈಸೂರು ನಗರಪಾಲಿಕೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ರತ್ನ ಮಾಂಗಲ್ಯ' ನಾಟಕ ಪ್ರದರ್ಶನ ಉದ್ಘಾಟನೆ....



ಮೈಸೂರು ತಾಲೂಕು ಜಯಪುರ ಹೋಬಳಿಯ ತಳೂರು ಗ್ರಾಮದಲ್ಲಿ ಮಾರಮ್ಮ ಹಬ್ಬದ ಪ್ರಯುಕ್ತ ಆಯೋಜಿಸಿದ್ದ 'ರತ್ನ ಮಾಂಗಲ್ಯ' ಎಂಬ ಸಾಮಾಜಿಕ ನಾಟಕ ಪ್ರದರ್ಶನವನ್ನು ಉದ್ಯಮಿ ಹಾಗೂ ಸಮಾಜ ಸೇವಕರಾದ ಎಸ್.ಶ್ರೀಕಾಂತ್ ಉದ್ಘಾಟಿಸಿದರು. ಗ್ರಾಮದ ಮುಖಂಡರಾದ ತಳೂರು ಮಹೇಶ್, ಚೆಲುವರಾಜು, ನಿಂಗರಾಜು, ಕೆ.ಜಿ.ಮಹೇಶ್, ಬಸವರಾಜು, ಶಿಲ್ಪಾ ಹರೀಶ್, ನಾಟಕ ಮಂಡಳಿ ಸದಸ್ಯರು ಮತ್ತು ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.3.2026 ಭಾನುವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026 ರಿಂದ 30.03.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಭರಣಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ರೋಟರಿ ಜಯಪ್ರಕಾಶನಗರ, ರೋಟರಿ ಜಯಪ್ರಕಾಶನಗರ ಚಾರಿಟಬಲ್ ಟ್ರಸ್ಟ್, ಜೆ.ಪಿ. ನಗರ ಸ್ಪೋರ್ಟ್ಸ್ ಕ್ಲಬ್, ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ :** ಕಣ್ಣಿನ ಉಚಿತ ತಪಾಸಣಾ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: ಜೆ.ಪಿ. ನಗರ ಸ್ಪೋರ್ಟ್ಸ್ ಕ್ಲಬ್ ಆವರಣ, ಬೆಳಗ್ಗೆ 8ರಿಂದ.

■ **ಯುವಾತ್ಮ ಮೈಸೂರು:** ಧನ್ವಂತರಿ ಪ್ರೀಮಿಯರ್ ಲೀಗ್, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಬ್ರಾಹ್ಮಣ ಮುಖಂಡ ಎನ್.ಎಂ.ನವೀನ್‌ಕುಮಾರ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ಉಪಸ್ಥಿತರು: ಉತ್ತರಾದಿ ಮಠದ ವ್ಯವಸ್ಥಾಪಕ ಅನಿರುದ್ಧಾಚಾರ್ಯ ಪಾಂಡುರಂಗಿ, ಎಸ್.ಬಿ.ವಾಸುದೇವಮೂರ್ತಿ, ಡಾ.ಕೆ.ಎಸ್.ಗುರುರಾಜ, ಸ್ಥಳ: ಪೆವಿಲಿಯನ್ ಮೈದಾನ, ಬೆಳಗ್ಗೆ 8ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಕಿಡ್ನಿ ಆರೋಗ್ಯ ತಪಾಸಣೆ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಪಿಸಿಓಡಿ ತಪಾಸಣಾ ಶಿಬಿರ, ವಸಂತ ವಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಸುಯೋಗ್ ಆಸ್ಪತ್ರೆ :** ಉಚಿತ ಸಕ್ಕರೆ ಕಾಯಿಲೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 9.30 ರಿಂದ.

■ **ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ನೇಗಿಲ ಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ಮಂಡ್ಯ ಜಿಲ್ಲೆಯ ಪೊಲೀಸ್ ಅಧೀಕ್ಷಕಿ ಡಾ.ಶೋಭಾರಾಣಿ, ಅಧ್ಯಕ್ಷತೆ : ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ಅಧ್ಯಕ್ಷೆ ಶ್ರೀಮತಿ ಶೋಭ ರಮೇಶ್, ಮುಖ್ಯ ಅತಿಥಿಗಳು : ಡಾ. ಶ್ವೇತ ಸದಾನಂದ್, ಸಹಾಯಕ ಸರ್ಕಾರಿ ಅಭಿಯೋಜಕರಾದ ಸಂಧ್ಯಾ ಮಂಜುನಾಥ್, ಸ್ಥಳ: ಮರುಳೇಶ್ವರ ನೇಗಿಲಯೋಗಿ ಭವನ, ಬೆಳಗ್ಗೆ 11ಕ್ಕೆ.

■ **ಆರ್ಟ್ ಪಾರ್ಕ್ :** ಮುಖ್ಯ ಅತಿಥಿಗಳು : ಕಾವಾ ಡೀನ್ ಎ. ದೇವರಾಜು, ಉಪಸ್ಥಿತರು : ಅಶ್ವಿನಿ ಪಾಂಡುರಂಗಿ, ವೈ.ಎಸ್. ಚೇತನ್‌ಕುಮಾರ್, ಎಂ. ದೀಪಕ್ ಕುಮಾರ್, ಸ್ಥಳ: ಹೆರಿಟೇಜ್ ಹೌಸ್, ಕುಕ್ಕರಹಳ್ಳಿ, ಬೆಳಗ್ಗೆ 11 ರಿಂದ.

■ **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ:** ವಿಶೇಷ ಸಂವಾದ, ಭಾಷಣಕಾರರು: ಡಾ.ಶಾರದಾ, ಸ್ಥಳ: ಹಾರ್ಡ್ವಿಕ್ ಶಾಲಾ ಆವರಣದ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ರವಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎಂ.ಎ.ಶೋಭಾ. ವ್ಯಾಖ್ಯಾನ –ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 8.30 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಡೌನ್ ಸಿಂಡ್ರೋಮ್ ದಿನದ ಸಂದರ್ಭದಲ್ಲಿ ಡೌನ್ ಸಿಂಡ್ರೋಮ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ಮೈಸೂರು ಘಟಕದ ಕಾರ್ಯದರ್ಶಿಗಳು ಹಾಗೂ ಮಕ್ಕಳ ನರರೋಗ ತಜ್ಞರಾದ ಡಾ.ಅನುಷಾರಾಜ್.ಕೆ ಮತ್ತು ಮಕ್ಕಳ ಮನೋವೈದ್ಯರಾದ ಡಾ.ಭಾಗ್ಯವತಿ ಅವರೊಂದಿಗೆ ಸಂವಾದ, ಪ್ರಸ್ತುತಿ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಟಿ.ನರಸೀಪುರದ ವಿದ್ಯೋದಯ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ಚೈತನ್ಯ ಚಿಲುಮೆ– ಬಹುಮುಖ ಪ್ರತಿಭೆ ಪೃಥು.ಪಿ.ಅದ್ವೈತ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬಿ.ಜಿ.ಕವಿತಾ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ – ಐ.ವಿ.ಎಫ್. ಪ್ರಯಾಣದಲ್ಲಿ ಮಹಿಳೆಯರ ಮಾನಸಿಕ ಆರೋಗ್ಯ ಈ ಕುರಿತು ಐ.ವಿ.ಎಫ್. ತಜ್ಞೆ ಡಾ. ರೇಖಾ ರಾಜೇಂದ್ರ ಕುಮಾರ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುವವರು ಆಶಾ, 12.35 ಭಕ್ತಿಗೀತೆಗಳು, 12.45 ಜನಪದ ಸಂಗೀತ : ತಾಯಮ್ಮ ಮತ್ತು ಸಂಗಡಿಗರಿಂದ ಸೋಬಾನೆ ಪದ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ ಕುರಿತು ಮಾಹಿತಿ ನೀಡುತ್ತಾರೆ ದಿವ್ಯ ಹೆಗಡೆ ಕಬ್ಬಿನಗದ್ದೆ, 1.20 ಭಾವಗೀತೆಗಳು – ಡಾ. ಶಮಿತಾ ಮಲ್ನಾಡ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಅನುರಕ್ತೆ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿ.ಕೃಷ್ಣಮೂರ್ತಿ–ನಾಗಸ್ವರ ವಾದನ, 4.45 ಚಿತ್ರಗೀತೆಗಳು, 6.51 ಕೃಷಿರಂಗ : ಹಟ್ಟಿಹರಟೆ –ವಾರದ ಗ್ರಾಮೀಣಾ ಚರ್ಚೆ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಫಸ್ಟ್ ಫಿಲ್ಮ್ – ಪ್ರಸ್ತುತಿ–ಎಸ್.ಶ್ರೀಮಾನ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಜಗಜ್ಯೋತಿ ಬಸವೇಶ್ವರ ನಾಟಕದ ಹಾಡುಗಳು, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಡಾ. ಧನಲಕ್ಷ್ಮಿ ಅವರ ಹಾಡುಗಾರಿಕೆ

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ರಾಮೋತ್ಸವ ಕಾರ್ಯಕ್ರಮ, ಸಂಜೆ 6.30 ರಿಂದ ವಿದುಷಿ ಗಾಯಿತ್ರಿ ಸತ್ಯನಾರಾಯಣ್ ಮತ್ತು ಶಿಷ್ಯರಿಂದ (ಸವಿಗಾನ ಸಂಗಿತ ಶಾಲೆ) ದೇವರನಾಮಗಳು, ಸಂಜೆ 7ರಿಂದ ವಿದುಷಿ ಲಕ್ಷ್ಮೀನಾಗರಾಜ್ ಮತ್ತು ವಿದುಷಿ ಇಂದು ನಾಗರಾಜ್ (ಚಿಲಕುಂದ ಸಹೋದರಿಯರು) ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ತಾಂಡವಮೂರ್ತಿ–ಪಿಟೀಲು, ವಿದ್ವಾನ್ ಮಂಜುನಾಥ್–ಘಟಂ, ಸ್ಥಳ:ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ ಐ ಬ್ಲಾಕ್, ರಾಮಕೃಷ್ಣನಗರ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಹಂದಿ–ಮಂದಿ ನಾಟಕ ಪ್ರದರ್ಶನ, ನಿರ್ದೇಶನ : ಶಕೀಲ್ ಅಹ್ಮದ್, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ಪರಿವರ್ತನ ರಂಗ ಸಮಾಜ :** 'ಸೂರ್ಯನ ಕುದುರೆ' ಕನ್ನಡ ನಾಟಕ ಪ್ರದರ್ಶನ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 7ಗಂಟೆಗೆ


ಮೈಸೂರು ಮಿತ್ರ

ನೆಲಕ್ಕುರುಳಿದ ಬೃಹತ್ ಬೇವಿನ ಮರ

● ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಿಲ್ಲ ● ಜಖಂಗೊಂಡಿದ್ದ 2 ಆಟೋ, ಬೈಕ್, ಕಾರು







ಮೈಸೂರಿನ ನಜರ್‌ಬಾದಿನ ಹುತಾತ್ಮ ಹೇಮಚಂದು ವೃತ್ತದಲ್ಲಿ ಶನಿವಾರ ಮಧ್ಯಾಹ್ನ ಬೃಹತ್ ಬೇವಿನ ಮರ ನೆಲಕ್ಕುರುಳಿದ್ದ ಪರಿಣಾಮ ಆಟೋ, ಬೈಕ್ ಹಾಗೂ ಕಾರ್ ಜಖಂಗೊಂಡಿದ್ದವು.

ಮೈಸೂರು,ಮಾ.21(ಪಿಎಂ)– ಬೇರು ದುರ್ಬಲಗೊಂಡಿದ್ದ ಬೃಹತ್ ಬೇವಿನ ಮರವೊಂದು ಇದ್ದಕ್ಕಿದ್ದಂತೆ ನೆಲಕ್ಕುರುಳಿದ ಘಟನೆ ಶನಿವಾರ ಮಧ್ಯಾಹ್ನ ನಜರ್‌ಬಾದಿನ ಹುತಾತ್ಮ ಹೇಮಚಂದು ವೃತ್ತದಲ್ಲಿ ನಡೆದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಆದರೆ ಎರಡು ಆಟೋ, ಬೈಕ್ ಹಾಗೂ ಕಾರು ಜಖಂಗೊಂಡು, ಇವುಗಳಲ್ಲಿದ್ದ ಜನರು ಸಣ್ಣಪುಟ್ಟದಾಗಿ ಗಾಯಗೊಂಡಿದ್ದಾರೆ.

ನಜರ್‌ಬಾದಿನ ಮಲೆ ಮಹದೇಶ್ವರ ರಸ್ತೆ–ನಜರ್‌ಬಾದ್ ಮುಖ್ಯರಸ್ತೆ ಹಾಗೂ ಸರ್ಕಾರಿ ಅತಿಥಿಗೃಹ ರಸ್ತೆಯ ಜಂಕ್ಷನ್‌ನಲ್ಲಿ (ಹುತಾತ್ಮ ಹೇಮಚಂದು ವೃತ್ತ) ಪೀಪಲ್ಸ್ ಪಾರ್ಕ್ ಆವರಣದಲ್ಲಿರುವ ಕೇಂದ್ರ ಗ್ರಂಥಾಲಯದ ಎದುರಿನ ಸಂಭ್ರಮ ಬಾರ್ ಅಂಡ್ ರೆಸ್ಟೋರೆಂಟ್ ಕಾಂಪೌಂಡ್‌ಗೆ (ಒಳಗೆ) ಹೊಂದಿಕೊಂಡಿದ್ದ ಸುಮಾರು ವರ್ಷದ ಈ ಬೇವಿನ ಮರ ನೆಲಕ್ಕುರುಳಿದೆ.

ಮಧ್ಯಾಹ್ನ ಸುಮಾರು 3.30ರ ವೇಳೆಯಲ್ಲಿ ಈ ಘಟನೆ ಸಂಭವಿಸಿದ್ದು, ಅದೇ ವೇಳೆ ರಸ್ತೆಯಲ್ಲಿ ಸಾಗುತ್ತಿದ್ದ ಎಂದು ಆಟೋ (ಕೆಎ–02, ಬಿ–1358) ಮರದಡಿಗೆ ಸಿಲುಕಿ ಸಂಪೂರ್ಣ ಜಖಂಗೊಂಡಿತ್ತು. ಇದರಿಂದ ಈ ಆಟೋ ಚಾಲಕ, ನಜರ್‌ಬಾದ್ ನಿವಾಸಿ ಸಿದ್ದರಾಜು (45) ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಆಟೋದಲ್ಲಿ ಪ್ರಯಾಣಿಸುತ್ತಿದ್ದ ನಜರ್‌ಬಾದಿನ ಉಮಾಶಂಕರ್ (70) ಹಾಗೂ ಇವರ ಪುತ್ರಿ ರಚನಾ (20) ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ.

ಅದೇ ರೀತಿ ಮತ್ತೊಂದು ಆಟೋದ (ಕೆಎ–05, ಎಸಿ–2854) ಮುಂಭಾಗಕ್ಕೆ ಹಾನಿಯಾಗಿದ್ದು, ಇದರ ಚಾಲಕ ಯರಗನಹಳ್ಳಿಯ ನಾರಾಯಣ (72) ಅವರಿಗೂ ಸಣ್ಣಪುಟ್ಟ ಗಾಯಗಳಾಗಿವೆ. ಅಲ್ಲದೆ, ದ್ವಿಚಕ್ರ ವಾಹನದಲ್ಲಿ (ಕೆಎ–09, ಇಜೆ–4990) ಸಾಗುತ್ತಿದ್ದ ಬ್ರಹ್ಮಚಾರಿ (72) ಅವರಿಗೂ ಗಾಯವಾಗಿದ್ದರೆ, ಇವರ ದ್ವಿಚಕ್ರ ವಾಹನ ಸಂಪೂರ್ಣ ಜಖಂಗೊಂಡಿತ್ತು. ಅಂತೆಯೇ ಇದೇ ಮಾರ್ಗದಲ್ಲಿ ಸಾಗುತ್ತಿದ್ದ ಕಾರೊಂದು (ಕೆಎ–51, ಎಎಂ–4117) ಜಖಂಗೊಂಡಿತ್ತು. ಇದರ ಚಾಲಕ ಶರಣಬಸು (28) ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ.

> ನಮ್ಮ ಕಾಂಪೌಂಡ್ ಒಳಗೆ ಇದ್ದ 100ರಿಂದ 150 ವರ್ಷಗಳ ಮರ ಇದು. ಬುಡ ದುರ್ಬಲಗೊಂಡಿತ್ತು. ಹಾಗಾಗಿ ಪಾಲಿಕೆ ಅಧಿಕಾರಿಗಳು ಸೇರಿದಂತೆ ಸಂಬಂಧಿಸಿದವರಿಗೆ ಪರಿಶೀಲಿಸಿ ತೆರವುಗೊಳಿಸುವ ಬಗ್ಗೆ ಮನವಿ ಮಾಡಿದ್ದೆ. ಅರಣ್ಯ ಇಲಾಖೆ ಅನುಮತಿ ಪಡೆದು ಕ್ರಮ ವಹಿಸುವುದಾಗಿ ಪಾಲಿಕೆ ಅಧಿಕಾರಿಗಳು ತಿಳಿಸಿದ್ದರು. ಅಷ್ಟರಲ್ಲಿ ಈ ಘಟನೆ ನಡೆದಿದೆ. ಇಲ್ಲಿ ದಿನನಿತ್ಯ ಸಂಚಾರ ದಟ್ಟಣೆ ಸಾಮಾನ್ಯ. ಅದಾಗ್ಯೂ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲವೆಂದರೆ ನಿಜಕ್ಕೂ ಪುಣ್ಯವೇ ಸರಿ. ಅರಣ್ಯ ಇಲಾಖೆ ಅಧಿಕಾರಿಗಳು, ಪಾಲಿಕೆ ಅಧಿಕಾರಿಗಳು ಮತ್ತು ಪರಿಸರ ವಾದಿಗಳು ಸಮನ್ವಯದೊಂದಿಗೆ ಪರಿಶೀಲಿಸಿ ರಸ್ತೆ, ಫುಟ್‌ಪಾತ್‌ನಲ್ಲಿ ನೆಲಕ್ಕುರುಳುವ ಹಂತದಲ್ಲಿರುವ ಮರಗಳನ್ನು ತೆರವುಗೊಳಿಸಲು ಕ್ರಮ ವಹಿಸಿ, ಮುಂದಾಗಬಹುದಾದ ಅನಾಹುತ ತಪ್ಪಿಸಬೇಕೆಂದು ಮನವಿ ಮಾಡುತ್ತೇನೆ.
>
> -ಸಂದೇಶಸ್ವಾಮಿ, ಮಾಜಿ ಮೇಯರ್ ಹಾಗೂ ಮಾಲೀಕರು, ಸಂಭ್ರಮ ಬಾರ್ ಅಂಡ್ ರೆಸ್ಟೋರೆಂಟ್.

ಮರದ ರೆಂಬೆ ಕೊಂಬೆಗಳ ನಡುವೆ ಸಿಲುಕಿ ಸಂಪೂರ್ಣ ಜಖಂಗೊಂಡಿದ್ದ ಆಟೋ (ಕೆಎ–02, ಬಿ–1358)ದಲ್ಲಿ ಚಾಲಕ ಸಿದ್ದರಾಜು ಹಾಗೂ ಪ್ರಯಾಣಿಕರಾದ ಉಮಾಶಂಕರ್ ಮತ್ತು ಅವರ ಪುತ್ರಿ ರಚನಾ ಅವರನ್ನು ಸುರಕ್ಷಿತವಾಗಿ ಹೊರಗೆ ತರಲು ಹರಸಾಹಸ ಪಡಬೇಕಾಯಿತು. ಪಾಲಿಕೆಯ ಅಭಯ ತಂಡದವರು ರೆಂಬೆ–ಕೊಂಬೆಗಳನ್ನು ತುಂಡರಿಸಿದರೆ, ಪೊಲೀಸರು ಹಾಗೂ ಸಾರ್ವಜನಿಕರ ನೆರವಿನಿಂದ ಈ ಮೂವರನ್ನು ಸುರಕ್ಷಿತವಾಗಿ ರೆಂಬೆ ಕೊಂಬೆಗಳ ನಡುವಿನಿಂದ ಹೊರ ಕರೆತರಲಾಯಿತು.

ಉರುಳಿ ಬಿದ್ದ ವಿದ್ಯುತ್ ಕಂಬಗಳು: ಬೃಹತ್ ಬೇವಿನ ಮರ ನೆಲಕ್ಕುರಳಿದ ಪರಿಣಾಮ ವಿದ್ಯುತ್ ತಂತಿಗಳು ಸೇರಿದಂತೆ ಇನ್ನಿತರ ಕೇಬಲ್‌ಗಳು ತುಂಡರಿಸಿದ್ದವು. ಮರ ಬಿದ್ದ ರಭಸಕ್ಕೆ ಕೇಬಲ್‌ಗಳು ತುಂಡಾಗುವ ಜೊತೆಗೆ ಎರಡು ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದವು. ವಿದ್ಯುತ್ ಸರಬರಾಜು ನಿಲುಗಡೆಗೊಳಿಸಿ ಮರದ ಕಾಂಡ ಸೇರಿದಂತೆ ರೆಂಬೆ-ಕೊಂಬೆಗಳನ್ನು ತುಂಡರಿಸಲಾಯಿತು.

ಮರ ಬಿದ್ದಿದ್ದ ಹಿನ್ನೆಲೆಯಲ್ಲಿ ಮಲೆ ಮಹದೇಶ್ವರ ರಸ್ತೆ ಮೂಲಕ ನಜರ್‌ಬಾದ್ ಮುಖ್ಯರಸ್ತೆ ಹಾಗೂ ಹಾರ್ಡಿಂಜ್ ವೃತ್ತದಿಂದ ಸರ್ಕಾರಿ ಅತಿಥಿಗೃಹದತ್ತ ಸಂಚಾರ ಬಂದ್ ಆಗಿತ್ತು.

ಮೈಸೂರು ಮಹಾನಗರ ಪಾಲಿಕೆಯ ಅಭಯ–ಎ2 ತಂಡದ ಸಿಬ್ಬಂದಿ ಮರದ ರೆಂಬೆ ಕೊಂಬೆ ತುಂಡರಿಸುವ ಕಾರ್ಯಾಚರಣೆ ನಡೆಸಿದರೆ, ಸೆಸ್ಕ್ ಸಿಬ್ಬಂದಿ ಅವರಿಗೆ ಅಗತ್ಯ ನೆರವಿನ ಕಾರ್ಯ ನಡೆಸಿದರು. ಮುನ್ನೆಚ್ಚರಿಕಾ ಕ್ರಮವಾಗಿ ಅಗ್ನಿಶಾಮಕ ಸಿಬ್ಬಂದಿ ತಂಡವನ್ನು ಸಹ ವಾಹನ ಸಮೇತ ಸ್ಥಳಕ್ಕೆ ಕರೆಸಿಕೊಳ್ಳಲಾಗಿತ್ತು. ಸಂಜೆ ವೇಳೆಗೆ ಮರದ ಬುಡ ಹಾಗೂ ಮುಖ್ಯ ಕಾಂಡ ಹೊರತಾಗಿ ಬಹುತೇಕ ರೆಂಬೆ ಕೊಂಬೆಗಳನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ದೇವರಾಜ ಉಪ ವಿಭಾಗದ ಎಸಿಪಿ ಕೆ.ರಾಜೇಂದ್ರ, ನಜರ್‌ಬಾದ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ ಸ್ಥಳದಲ್ಲಿದ್ದು ಅಗತ್ಯ ಕ್ರಮ ವಹಿಸಿದರು. ಸಂಭ್ರಮ ಬಾರ್ ಅಂಡ್ ರೆಸ್ಟೋರೆಂಟ್ ಮಾಲೀಕರೂ ಆದ ಮಾಜಿ ಮೇಯರ್ ಸಂದೇಶಸ್ವಾಮಿ ಹಾಗೂ ಇವರ ಪುತ್ರರೂ ಆದ ಪಾಲಿಕೆ ಮಾಜಿ ಸದಸ್ಯ ಸಾತ್ವಿಕ್ ಸಹ ಸ್ಥಳದಲ್ಲಿದ್ದರು.

ಶಿವೈಕ್ಯ ಶಿವಕುಮಾರ ಶ್ರೀಗಳ ಜಯಂತಿ: ಏ.1ರಂದು ಸಿದ್ದಗಂಗಾ ಮಠಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು



ತುಮಕೂರು: ಏ.1ರಂದು ಶಿವೈಕ್ಯ ಶಿವಕುಮಾರ ಶ್ರೀಗಳ ಜನ್ಮ ದಿನೋತ್ಸವದ ಹಿನ್ನೆಲೆ ಸಿದ್ದಗಂಗಾ ಮಠಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಗಮಿಸಲಿದ್ದಾರೆ.

ಮಾ.31ರಂದು ಸಂಜೆ ಬೆಂಗಳೂರಿಗೆ ಆಗಮಿಸಿ, ಅಂದು ರಾಜಭವನದಲ್ಲಿ ತಂಗಲಿದ್ದಾರೆ. ಮಾರನೇ ದಿನ ಏ.1ರಂದು ಬೆಳಗ್ಗೆ ತುಮಕೂರಿನ ಸಿದ್ದಗಂಗಾ ಮಠಕ್ಕೆ ಆಗಮಿಸಲಿದ್ದಾರೆ. ಬಳಿಕ ಸಿದ್ದಗಂಗಾ ಶ್ರೀಗಳ ಗದ್ದಿಗೆ ದರ್ಶನ ಪಡೆದು ಜನ್ಮದಿನೋತ್ಸವದ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಕಾರ್ಯಕ್ರಮದಲ್ಲಿ ಒಟ್ಟು ಒಂದೂವರೆ ಗಂಟೆಗಳ ಕಾಲ ಇರಲಿದ್ದಾರೆ ಎಂದು ಸಿದ್ದಗಂಗಾ ಮಠದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಕೇಂದ್ರ ಸಚಿವ ವಿ ಸೋಮಣ್ಣ ಮಾಹಿತಿ ನೀಡಿದ್ದಾರೆ.

ಪೆಟ್ರೋಲ್–ಡೀಸೆಲ್ ದರ ಏರಿಕೆ ವದಂತಿ

ಬಸ್ ಟಿಕೆಟ್ ದರ ಹೆಚ್ಚಿಸಲ್ಲ



ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಏರಿಕೆಯಾಗುವ ವದಂತಿ ಕೇಳಿಬರುತ್ತಿರುತ್ತದೆ. ಈ ನಡುವೆ ರಾಜ್ಯದಲ್ಲಿ ಬಸ್ ಟಿಕೆಟ್ ದರವನ್ನು ಹೆಚ್ಚಿಸುವುದಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

ರಾಜ್ಯ ಸರ್ಕಾರ ಪ್ರಯಾಣ ದರ ಹೆಚ್ಚಿಸುವ ಮೂಲಕ ಜನರಿಗೆ ಹೊರೆಯಾಗಲ್ಲ. ದರ ಪರಿಷ್ಕರಣೆಯಂತಹ ಯಾವುದೇ ಪ್ರಕ್ರಿಯೆಯನ್ನು ಕೈಗೊಂಡಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಡೀಸೆಲ್ ದರ ಏರಿಕೆಯಾಗುವ ಸಾಧ್ಯತೆ ಇದೆ ಎಂಬ ಕಾರಣಕ್ಕೆ ನಾವು ಟಿಕೆಟ್ ದರವನ್ನು ಹೆಚ್ಚಿಸುವುದಿಲ್ಲ. ಈಗ ದರ ಹೆಚ್ಚಳ ಮಾಡುವ ಅಧಿಕಾರ ನಮಗಿಲ್ಲ, ನಾವು ಹೆಚ್ಚಿಸುತ್ತಿಲ್ಲ ಎಂದು ತಿಳಿಸಿದರು.

ಪ್ರಯಾಣ ದರ ಪರಿಷ್ಕರಣೆಗಾಗಿ ಸಮಿತಿ ರಚಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪ್ರಸ್ತುತ ಅಂತಹ ಯಾವುದೇ ಕ್ರಮವನ್ನು ಸರ್ಕಾರ ಪರಿಗಣಿಸುತ್ತಿಲ್ಲ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ರಾಮಲಿಂಗಾರೆಡ್ಡಿ, ಹಿಂದಿನ ದಿನಗಳಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆಯಾಗಿದ್ದಾಗಲೂ ಕೇಂದ್ರ ಸರ್ಕಾರ ಜನರಿಗೆ ಯಾವುದೇ ಪ್ರಯೋಜನವನ್ನು ತಲುಪಿಸಲಿಲ್ಲ ಎಂದು ಆರೋಪಿಸಿದರು.

ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ 100–130 ಡಾಲರ್ ಇದ್ದ ಕಚ್ಚಾ ತೈಲಕ್ಕೆ ಸಬ್ಸಿಡಿ ನೀಡಲಾಗಿತ್ತು. ಆದರೆ, ಆ ನಂತರದ 10–12 ವರ್ಷಗಳ ಕಾಲ ಕಚ್ಚಾ ತೈಲ ಬೆಲೆ ಕಡಿಮೆಯಾಗಿದ್ದಾಗಲೂ ಕೇಂದ್ರ ಸರ್ಕಾರ ಲಾಭ ಮಾಡಿಕೊಂಡಿತೇ ಹೊರತು ಜನರಿಗೆ ಇದರ ಲಾಭ ಸಿಗಲಿಲ್ಲ ಎಂದು ಹೇಳಿದರು.

ಕಾಂಗ್ರೆಸ್–ರಾಹುಲ್ ಗಾಂಧಿ ಬಿಜೆಪಿಯ ಬಿ–ಟೀಮ್: ಕೇರಳ ಸಿಎಂ ಪಿಣರಾಯಿ ವಿಜಯನ್ ಆರೋಪ



ತಿರುವನಂತಪುರಂ, ಮಾ.21– ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ಬಿಜೆಪಿಯ ಬಿ–ಟೀಮ್ ಎಂದು ಆರೋಪಿಸಿದ್ದಾರೆ.

PTIಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿರುವ ಅವರು, ಕೇಂದ್ರ ತನಿಖಾ ಸಂಸ್ಥೆಗಳು ದೇಶದ ಇತರ ವಿರೋಧ ಪಕ್ಷದ ನಾಯಕರನ್ನು ಗುರಿಯಾಗಿಸುತ್ತಿವೆ. ಆದರೆ ಕೇರಳ ಮುಖ್ಯಮಂತ್ರಿಯನ್ನು ವಿಚಾರಣೆಗೆ ಕರೆದಿಲ್ಲ ಎಂಬ ರಾಹುಲ್ ಗಾಂಧಿಯವರ ಇತ್ತೀಚಿನ ಹೇಳಿಕೆಗೆ ಪ್ರತಿಕ್ರಿಯೆ ನೀಡಿದರು.

ಕಾಂಗ್ರೆಸ್ ಮತ್ತು ಅದರ ನಾಯಕರು ಬಿಜೆಪಿಗೆ ಪರೋಕ್ಷವಾಗಿ ಸಹಕಾರ ನೀಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಬಿ ಟೀಮ್ ಎಂದು ಆರೋಪಿಸಿದ್ದಾರೆ.

ಕಾಂಗ್ರೆಸ್ ತುಷ್ಟೀಕರಣ ರಾಜಕೀಯ ಮಾಡುತ್ತಿದ್ದು, ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದದಲ್ಲಿ ತೊಡಗಿರುವ ಗುಂಪುಗಳ ಬೆಂಬಲವನ್ನು ಪಡೆಯಲು ಪ್ರಯತ್ನಿಸುತ್ತಿದೆ. ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಸರ್ಕಾರ ಯಾವುದೇ ರೀತಿಯ ಸಮುದಾಯವಾದ ರಾಜಕೀಯಕ್ಕೆ ವಿರುದ್ಧವಾಗಿದ್ದು, ಇಂತಹ ಸಂಘಟನೆಗಳ ಬೆಂಬಲವನ್ನು ಬೇಡುವುದಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಇದೇ ವೇಳೆ ಶಬರಿಮಲೆ ಚಿನ್ನ ಕಳ್ಳತನ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ಈ ಪ್ರಕರಣದ ತನಿಖೆಯನ್ನು ಕೇರಳ ಹೈಕೋರ್ಟ್ ಮೇಲ್ವಿಚಾರಣೆ ಮಾಡುತ್ತಿದೆ. ತನಿಖೆಯಲ್ಲಿ ಯಾವುದೇ ತಪ್ಪಿಲ್ಲ ಎಂದು ನ್ಯಾಯಾಲಯವೇ ಹೇಳಿದೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮಾಡುತ್ತಿರುವ ಆರೋಪಗಳು ಅಸತ್ಯವಾಗಿದ್ದು, ಏಪ್ರಿಲ್ 9ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯ ಮೇಲೆ ಇದರಿಂದ ಯಾವುದೇ ಪರಿಣಾಮ ಇರುವುದಿಲ್ಲ ಎಂದರು.

ಇದಲ್ಲದೆ, ಕೇರಳದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳನ್ನು ತರಲಾಗಿದ್ದು, ರಾಜ್ಯದ ಶಿಕ್ಷಣ ಸಂಸ್ಥೆಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ತರುವ ಪ್ರಯತ್ನ ನಡೆಯುತ್ತಿದೆ ಎಂದು ಅವರು ಹೇಳಿದರು.

ಬಳಿಕ ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ ಅವರು, ಕೇಂದ್ರ ಸರ್ಕಾರವು ಕೇರಳದ ವಿರುದ್ಧ ವೈಮನಸ್ಸಿನ ನಿಲುವು ತಾಳುತ್ತಿದೆ ಎಂದು ಆರೋಪಿಸಿದರು,

ಪ್ರಮುಖವಾಗಿ ವಯನಾಡು ಪುನರ್ವಸತಿ ನೆರವು ವಿಷಯದಲ್ಲಿ ಕೇಂದ್ರದಿಂದ ಸಮರ್ಪಕ ಸಹಾಯ ಸಿಕ್ಕಿಲ್ಲ ಎಂದು ಹೇಳಿದರು. ಇದೇ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಅವಪ ಕೇಂದ್ರ ಸರ್ಕಾರ ರಾಜ್ಯಕ್ಕೆ ಬಹಳ ಸಹಾಯ ಮಾಡಿದೆ ಎಂಬ ಹೇಳಿಕೆಯನ್ನು ಅಸಂಬದ್ಧ ಎಂದು ತಿರಸ್ಕರಿಸಿದರು.

ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಕಾಡ್ಗಿಚ್ಚು: 18 ಎಕರೆ ಅರಣ್ಯ ಸುಟ್ಟು ಭಸ್ಮ..!



ಚಿಕ್ಕಮಗಳೂರು: ಪ್ರಸಿದ್ಧ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಕಾಡ್ಗಿಚ್ಚು ಎದುರಾಗಿದ್ದು, ಪರಿಣಾಮ 18 ಎಕರೆ ಅರಣ್ಯ ಪ್ರದೇಶ ಸುಟ್ಟು ಭಸ್ಮವಾಗಿದೆ.

ಕೆರೆಕಟ್ಟೆ ಅರಣ್ಯ ವಲಯದ ಮಾಣಿಕ್ಯ ಬೆಟ್ಟ ಹಾಗೂ ವಾಲಿಕುಂಜ ಗಿರಿ ಪ್ರದೇಶಗಳಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡಿದ್ದು, ಬಳಿಕ ಅದು ವೇಗವಾಗಿ ಪಕ್ಕದ ಪ್ರದೇಶಗಳಿಗೆ ಹರಡಿದೆ. ಪರಿಣಾಮವಾಗಿ ಸುಮಾರು 18 ಎಕರೆ ಅರಣ್ಯ ಪ್ರದೇಶ ಸುಟ್ಟು ಭಸ್ಮವಾಗಿದೆ.

ಶೋಲಾ ಅರಣ್ಯದ ಹುಲ್ಲುಗಾವಲು ಪ್ರದೇಶಗಳಲ್ಲಿ ಕೆಲ ದುಷ್ಕರ್ಮಿಗಳು 25ಕ್ಕೂ ಹೆಚ್ಚು ಸ್ಥಳಗಳಲ್ಲಿ ಬೆಂಕಿ ಹಚ್ಚಿರುವ ಶಂಕೆ ವ್ಯಕ್ತವಾಗಿದ್ದು, ಬೆಂಕಿಯ ಜ್ವಾಲೆಗಳು ದೂರ ದೂರಿನಿಂದಲೂ ಗೋಚರಿಸುತ್ತಿತ್ತು ಎನ್ನಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ನಿರ್ಲಕ್ಷ್ಯ ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಂಕಿ ನಿಯಂತ್ರಣಕ್ಕೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳದಿರುವುದು ಮತ್ತು ಅರಣ್ಯವನ್ನು ರಕ್ಷಿಸುವಲ್ಲಿ ವಿಫಲವಾಗಿರುವುದಾಗಿ ಆರೋಪಿಸಿದ್ದಾರೆ.

ಅಗ್ನಿ ನಿಯಂತ್ರಣಕ್ಕೆ ಸಿಬ್ಬಂದಿಯನ್ನು ನೇಮಿಸಲು ಹಣ ವೆಚ್ಚ ಮಾಡಲಾಗುತ್ತಿದೆಯಾದರೂ, ಸಿಬ್ಬಂದಿಗಳು ಸ್ಥಳದಲ್ಲೇ ಕಾರ್ಯನಿರ್ವಹಿಸದಿರುವುದು ಸ್ಪಷ್ಟವಾಗುತ್ತಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಾದಕ ವಸ್ತು ಸೇವಿಸಿ ಅಸಹಜ ವರ್ತನೆ; ಯುವಕನ ವಿರುದ್ಧ ಪ್ರಕರಣ ದಾಖಲು

ಮೈಸೂರು,ಮಾ.21(ಪಿಎಂ)– ಮಾದಕ ವಸ್ತು ಸೇವಿಸಿ ಸಾರ್ವಜನಿಕ ಸ್ಥಳದಲ್ಲಿ ಅಸಹಜವಾಗಿ ವರ್ತಿಸುತ್ತಿದ್ದ ಯುವಕನ ವಿರುದ್ಧ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಯರಗನಹಳ್ಳಿಯ ಪ್ರಜ್ವಲ್ (25) ವಿರುದ್ಧವೇ ಪ್ರಕರಣ ದಾಖಲಾಗಿರುವುದು. ಶುಕ್ರವಾರ ಮಧ್ಯಾಹ್ನ 1.15ರ ವೇಳೆಯಲ್ಲಿ ಆಲನಹಳ್ಳಿ ಪೊಲೀಸರು ಗಸ್ತಿನಲ್ಲಿದ್ದಾಗ, ಯರಗನಹಳ್ಳಿ ಸರ್ಕಾರಿ ಶಾಲೆ ಸಮೀಪದ ರಸ್ತೆಯಲ್ಲಿ ಈತನು ಜೋರಾಗಿ ಕಿರುಚಾಡುತ್ತಾ ಪ್ರಜ್ಞೆ ಇಲ್ಲದವನಂತೆ ವರ್ತಿಸುತ್ತಿದ್ದ. ಆತನನ್ನು ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ, ವೈದ್ಯಕೀಯ ವರದಿಯಲ್ಲಿ ಆತ ಮಾದಕ ವಸ್ತು ಸೇವನೆ ಮಾಡಿರುವುದು ದೃಢಪಟ್ಟಿದೆ.

ಹೊಸ ಶಾಸಕರಿಗೂ ಸಂಪುಟದಲ್ಲಿ ಅವಕಾಶ ಬೇಕು!

55 ಶಾಸಕರು ಸಭೆ ಮಾಡಿ ಚರ್ಚೆ ಮಾಡಿದ್ದೇವೆ: ಇಕ್ಬಾಲ್ ಹುಸೇನ್




ರಾಮನಗರ: ಈಗಾಗಲೇ ಮೂರ್ನಾಲ್ಕು ಬಾರಿ ಗೆದ್ದ ಶಾಸಕರು ಸಭೆ ಮಾಡಿ, ಸಿಎಂಗೆ ಮನವಿ ಮಾಡಿದ್ದರು. ಹಾಗಾಗಿ ಮೊದಲ ಬಾರಿ ಹಾಗೂ ಎರಡು ಬಾರಿ ಗೆದ್ದ ಶಾಸಕರು ಕೂಡಾ ಸಭೆ ಮಾಡಿದ್ದೇವೆ ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದ್ದಾರೆ.

ಮೊದಲ ಬಾರಿ ಗೆದ್ದ ಶಾಸಕರ ಡಿನ್ನರ್ ಪಾರ್ಟಿ ವಿಚಾರ ಕುರಿತು ರಾಮನಗರದಲ್ಲಿ ಮಾತನಾಡಿದ ಅವರು, ನಮ್ಮ ಬೇಡಿಕೆಗಳನ್ನೂ ಸಿಎಂ, ಡಿಸಿಎಂಗೆ ತಿಳಿಸುವ ನಿಟ್ಟಿನಲ್ಲಿ ಚರ್ಚಿಸಿದ್ದೇವೆ. ಸುಮಾರು 55 ಮಂದಿ ಸೇರಿ ಊಟ ಮಾಡಿ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಡಿಸಿಎಂ ಡಿಕೆಶಿ ಮೊದಲ ಬಾರಿ ಗೆದ್ದಾಗಲೇ ಸಚಿವರಾದರು. ಪ್ರಿಯಾಂಕ್ ಖರ್ಗೆ ಕೂಡ ಮೊದಲ ಬಾರಿ ಗೆದ್ದು ಸಚಿವರಾಗಿದ್ದರು. ಹಾಗಾಗಿ ಈಗಲೂ ಮೊದಲಬಾರಿ ಗೆದ್ದವರಿಗೂ ಅವಕಾಶ ಬೇಕು. ಈ ಎಲ್ಲಾ ವಿಚಾರಗಳನ್ನ ಚರ್ಚೆ ಮಾಡಲಾಗಿದೆ. ನಮ್ಮ ಮನವಿಗೆ ಸಿಎಂ ಸ್ಪಂದಿಸುವ ವಿಶ್ವಾಸ ಇದೆ ಎಂದು ನುಡಿದರು.

ಇನ್ನೂ ರಂಜಾನ್ ಹಿನ್ನೆಲೆ ನಗರದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ ಇಕ್ಬಾಲ್ ಹುಸೇನ್, ನಮಾಜ್ ಮಾಡಿ ಮುಸ್ಲಿಂ ಬಾಂಧವರ ಜೊತೆ ರಂಜಾನ್ ಶುಭಾಶಯ ವಿನಿಮಯ ಮಾಡಿಕೊಂಡರು. ಬಳಿಕ ಮಾತನಾಡಿದ ಅವರು, ರಂಜಾನ್ ಮುಸ್ಲಿಮರ ಪವಿತ್ರ ಹಬ್ಬ. ಒಂದು ತಿಂಗಳ ಉಪವಾಸ ಅಂತ್ಯಗೊಳಿಸಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ್ದೇವೆ. ಜಗತ್ತಿನಲ್ಲಿ ಶಾಂತಿ ನೆಲೆಸಲಿ, ಜನರಿಗೆ ನೆಮ್ಮದಿ ದೊರಕಲಿ ಎಂದು ಪ್ರಾರ್ಥಿಸಿದ್ದೇವೆ. ಇರಾನ್–ಇಸ್ರೇಲ್ ಯುದ್ಧದಿಂದ ಸಾಕಷ್ಟು ಅನಾನುಕೂಲ ಆಗುತ್ತಿದೆ. ಗ್ಯಾಸ್ ಸಿಗದೇ ಹೋಟೆಲ್‌ಗಳು ಮುಚ್ಚುತ್ತಿವೆ. ಗೃಹ ಬಳಕೆ ಸಿಲಿಂಡರ್‌ಗೂ ಜನ ಪರದಾಡುವ ಪರಿಸ್ಥಿತಿ ಇದೆ. ಪೆಟ್ರೋಲ್, ಡೀಸೆಲ್ ದರವೂ ಏರಿಕೆ ಆಗುತ್ತಿದೆ ಇದರಿಂದಾಗಿ ಬೇರೆಬೇರೆ ಉದ್ಯಮದ ಮೇಲೂ ಪರಿಣಾಮ ಬೀರಿದೆ ಎಂದರು.

ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಬಿಡಲು ನಮ್ಮಲ್ಲಿ ಹೆಚ್ಚುವರಿ ಕಚ್ಚಾ ತೈಲ ಲಭ್ಯವಿಲ್ಲ

ಅಮೆರಿಕ ನಿರ್ಬಂಧ ಸಡಿಲಿಕೆ ಬೆನ್ನಲ್ಲೇ ಇರಾನ್ ಮಹತ್ವದ ಘೋಷಣೆ



ಟೆಹ್ರಾನ್, ಮಾ.21–ಮುಂಬೈಯಲ್ಲಿರುವ ಇರಾನ್ ಕಾನ್ಸುಲೇಟ್ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ, ಪ್ರಸ್ತುತ ಇರಾನ್ ಬಳಿ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಪೂರೈಸಲು ಕಚ್ಚಾ ತೈಲ ಹೆಚ್ಚುವರಿ ಸಂಗ್ರಹ ಇಲ್ಲ ಎಂದು ಹೇಳಿದೆ.

ಮಾರ್ಚ್ 20ರವರೆಗೆ ಹಡಗುಗಳಲ್ಲಿ ತುಂಬಿಸಿ ಈಗಾಗಲೇ ಸಮುದ್ರದಲ್ಲಿ ಸಿಲುಕಿರುವ ಇರಾನ್ ಮೂಲದ ಕಚ್ಚಾ ತೈಲದ ಮೇಲಿನ ನಿರ್ಬಂಧಗಳನ್ನು ಸಡಿಲಿಸುವ ಅಮೆರಿಕದ ನಿರ್ಧಾರವನ್ನು ಇರಾನ್‌ನ ತೈಲ ಸಚಿವಾಲಯ ತಿರಸ್ಕರಿಸಿದೆ.

ಪ್ರಸ್ತುತ ಇರಾನ್ ಬಳಿ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಪೂರೈಸಲು ಕಚ್ಚಾ ತೈಲಹೆಚ್ಚುವರಿ ಸಂಗ್ರಹ ಇಲ್ಲ. ಅಮೆರಿಕದ ಖಜಾನೆ ಕಾರ್ಯದರ್ಶಿಯ ಹೇಳಿಕೆಗಳು ಖರೀದಿದಾರರಿಗೆ ಭರವಸೆ ನೀಡಲು ಮತ್ತು ಮಾರುಕಟ್ಟೆಯ ಮನೋಭಾವವನ್ನು ನಿಯಂತ್ರಿಸುವ ಉದ್ದೇಶಿತವಾಗಿವೆ ಎಂದು ತಿಳಿಸಿದೆ.

ಇರಾನ್‌ನ ಈ ನಿರಾಕರಣೆ ಈಗಾಗಲೇ ಅಸ್ಥಿರವಾಗಿರುವ ಮಾರುಕಟ್ಟೆಯನ್ನು ಇನ್ನಷ್ಟು ಆತಂಕಕ್ಕೊಳಪಡಿಸಬಹುದು. ಪಶ್ಚಿಮ ಏಷ್ಯಾದ ಸಂಘರ್ಷ ನಾಲ್ಕನೇ ವಾರಕ್ಕೆ ಕಾಲಿಡುತ್ತಿರುವ ಹಿನ್ನೆಲೆಯಲ್ಲಿ ಕಚ್ಚಾ ತೈಲದ ಬೆಲೆಗಳು ಈಗಾಗಲೇ ಜಾಗತಿಕ ಮಟ್ಟದಲ್ಲಿ ಏರಿಕೆ ಕಂಡುಬಂದಿವೆ.

ನಿರ್ಬಂಧ ಸಡಿಲಿಸಿದ ಅಮೆರಿಕ : ಅಮೆರಿಕ ಏಪ್ರಿಲ್ 19ರವರೆಗೆ ಇರಾನ್ ಮೂಲದ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ನಿರ್ಬಂಧಗಳನ್ನು ತಾತ್ಕಾಲಿಕವಾಗಿ ಸಡಿಲಿಸುವುದಾಗಿ ನಿನ್ನೆ ಘೋಷಿಸಿತ್ತು. ಇದರಲ್ಲಿ ಇರಾನ್ ತೈಲವನ್ನು ಅಮೆರಿಕದಲ್ಲೇ ಮಾರಾಟ ಮಾಡಲು ಅನುಮತಿ ನೀಡಲಾಗಿದೆ.


ಈ ನಿರ್ಧಾರದ ವಿವರಗಳನ್ನು ಅಮೆರಿಕ ಖಜಾನೆ ಇಲಾಖೆಯ ಆಫೀಸ್ ಆಫ್ ಫಾರೆನ್ ಅಸೆಟ್ಸ್ ಕಂಟ್ರೋಲ್ ಪ್ರಕಟಣೆಯಲ್ಲಿ ನೀಡಲಾಗಿದ್ದು, ಮಾರ್ಚ್ 20ರೊಳಗೆ ಹಡಗುಗಳಲ್ಲಿ ಲೋಡ್ ಮಾಡಲಾದ ಇರಾನ್ ಮೂಲದ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ವಿತರಣೆಗೆ ಮತ್ತು ಮಾರಾಟಕ್ಕೆ ಅನುಮತಿ ನೀಡಲಾಗಿದೆ. ಈ ವಿನಾಯಿತಿಗಳು ಏಪ್ರಿಲ್ 19ರವರೆಗೆ ಜಾರಿಯಲ್ಲಿರುತ್ತವೆ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಈ ಅನುಮತಿ ಅಡಿಯಲ್ಲಿ ಇರಾನ್ ಮೂಲದ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಅಮೆರಿಕಕ್ಕೆ ಆಮದು ಮಾಡುವುದಕ್ಕೂ ಅವಕಾಶ ಇದೆ ಎಂದು ಹೇಳಲಾಗಿದೆ.

ಇದಕ್ಕೂ ಮೊದಲು, ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಅವರು ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿ, ಸಮುದ್ರದಲ್ಲಿ ಸಿಲುಕಿರುವ ಇರಾನ್ ಕಚ್ಚಾ ತೈಲದ ಮಾರಾಟಕ್ಕೆ ತಾತ್ಕಾಲಿಕ ಅನುಮತಿ ನೀಡಲಾಗಿದೆ ಎಂದು ತಿಳಿಸಿದ್ದರು. ಇದರ ಉದ್ದೇಶ ಜಾಗತಿಕ ಇಂಧನ ಮಾರುಕಟ್ಟೆಯನ್ನು ಸ್ಥಿರಗೊಳಿಸುವುದು, ಇದನ್ನು ನಿಖರವಾಗಿ ಗುರಿತಪ್ಪದ, ಅಲ್ಪಾವಧಿಯ ಅನುಮತಿ ಎಂದು ಹೇಳಿದ್ದಾರೆ.

ಈ ನಿರ್ಧಾರದ ಹಿಂದಿನ ಕಾರಣವನ್ನು ವಿವರಿಸಿದ ಅವರು, ಪ್ರಸ್ತುತ ನಿರ್ಬಂಧಿತ ಇರಾನ್ ತೈಲವನ್ನು ಚೀನಾ ಕಡಿಮೆ ಬೆಲೆಗೆ ಸಂಗ್ರಹಿಸುತ್ತಿದೆ. ಈ ಸಂಗ್ರಹಿತ ತೈಲವನ್ನು ತಾತ್ಕಾಲಿಕವಾಗಿ ಜಾಗತಿಕ ಮಾರುಕಟ್ಟೆಗೆ ಬಿಡುಗಡೆ ಮಾಡುವುದರಿಂದ ಸುಮಾರು 140 ಮಿಲಿಯನ್ ಬ್ಯಾರೆಲ್ ತೈಲವನ್ನು ಮಾರುಕಟ್ಟೆಗೆ ತರಬಹುದು, ಇದು ಪೂರೈಕೆಯ ಮೇಲಿನ ತಾತ್ಕಾಲಿಕ ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಹೇಳಿದರು.

ಐಪಿಎಲ್ ಉದ್ಘಾಟನಾ ಪಂದ್ಯಕ್ಕೆ ಸಜ್ಜಾಯ್ತು ಚಿನ್ನಸ್ವಾಮಿ ಸ್ಟೇಡಿಯಂ



ಮೈಸೂರು, ಮಾ.21(ವಿವಿಹೆಚ್)– 2026ರ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಉದ್ಘಾಟನಾ ಪಂದ್ಯಕ್ಕೆ ಬೆಂಗಳೂರಿನ ಐತಿಹಾಸಿಕ ಚಿನ್ನಸ್ವಾಮಿ ಸ್ಟೇಡಿಯಂ ಸಜ್ಜಾಗಿದೆ. ಮಾರ್ಚ್ 28ರಂದು ಉದ್ಘಾಟನಾ ಪಂದ್ಯ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಸನ್ ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಹೆಚ್) ನಡುವೆ ಮೊದಲ ಪಂದ್ಯ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ ಹಿಂದೆ ಆರ್‌ಸಿಬಿ ಐಪಿಎಲ್ ಟ್ರೋಫಿ ಗೆದ್ದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಸಂಭವಿಸಿದ್ದ ಕಾಲ್ತುಳಿತದ ಘಟನೆಗಳ ಬಳಿಕ ಫ್ರಾಂಚೈಸಿಯು ಪ್ರೇಕ್ಷಕರ ಸುರಕ್ಷತೆಗಾಗಿ ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ಕ್ರೀಡಾಂಗಣವು 35,000 ಜನರ ಸಾಮರ್ಥ್ಯ ಹೊಂದಿದ್ದರೂ, 28,000 ಪ್ರೇಕ್ಷಕರಿಗೆ ಮಾತ್ರ ಪ್ರವೇಶ ನೀಡಲಾಗುತ್ತದೆ. ಟಿಕೆಟ್ ಮಾರಾಟವು ಬಹುತೇಕ ಆನ್‌ಲೈನ್ ಮೂಲಕ ನಡೆಯಲಿದ್ದು, ಶೀಘ್ರದಲ್ಲೇ ಮಾರಾಟದ ದಿನಾಂಕವನ್ನು ಪ್ರಕಟಿಸಲಾಗುವುದು.

ಜನದಟ್ಟಣೆ ಪತ್ತೆಗೆ ಹಾಗೂ ನಿಯತ್ರಣಕ್ಕಾಗಿ ಆರ್ಟಿಫಿಶಲ್ ಇಂಟಲಿಜೆನ್ಸ್ (ಎಐ) ತಂತ್ರಜ್ಞಾನ ಬಳಸಿಕೊಳ್ಳಲಾಗುತ್ತಿದೆ. ಜನದಟ್ಟಣೆ ಕಂಡಕೂಡಲೇ ಹೋಲ್ಡಿಂಗ್ ಪ್ರದೇಶ ಬಂದ್ ಮಾಡಲಾಗುತ್ತದೆ. ತುರ್ತು ಚಿಕಿತ್ಸೆಗಳಿಗಾಗಿ ಸ್ಟೇಡಿಯಂ ಬಳಿ 8 ಆಂಬುಲೆನ್ಸ್‌ಗಳನ್ನು ನಿಯೋಜಿಸಲಾಗುತ್ತಿದೆ. 25 ಸಾವಿರ ಜನರಿಗೆ ಅಡ್ವಾನ್ಸ್ ಲೈಫ್ ಸಪೋರ್ಟ್ ಆಂಬುಲೆನ್ಸ್, ಹತ್ತು ಸಾವಿರ ಜನರಿಗೆ ಬೇಸಿಕ್ ಲೈಫ್ ಸಪೋರ್ಟ್ ಆಂಬುಲೆನ್ಸ್ ಪ್ರತಿ 500 ಮೀಟರ್‌ಗೆ ಪ್ರಥಮ ಚಿಕಿತ್ಸಾ ಪೆಟ್ಟಿಗೆ ವ್ಯವಸ್ಥೆ ಮಾಡಲಾಗುತ್ತಿದೆ. ಅಲ್ಲದೇ 35 ಸಾವಿರ ಸೀಟ್ ಸಾಮರ್ಥ್ಯವಿದ್ದರೂ ಬಫರ್ ಜೋನ್ ನಿಗದಿ ಮಾಡಲಾಗುತ್ತಿದೆ.

ಇನ್ನು ಆರ್‌ಸಿಬಿ ಪಂದ್ಯಗಳ ಟಿಕೆಟ್‌ಗಳನ್ನು ಅಧಿಕೃತ ವೆಬ್‌ಸೈಟ್ ಮುಖಾಂತರವೇ ಖರೀದಿಸಬೇಕು. ಥರ್ಡ್ ಪಾರ್ಟಿ ಆಪ್ ಸೇರಿದಂತೆ ಇನ್ನಿತರ ಜಾಲತಾಣಗಳಲ್ಲಿ ಟಿಕೆಟ್ ಮಾರಾಟ ಲಭ್ಯವಿಲ್ಲ. ಪಂದ್ಯದ ದಿನದಂದು ಅಭಿಮಾನಿಗಳಿಗೆ ಕ್ವೀನ್ಸ್ ರಸ್ತೆ ಭಾಗದ ಪ್ರವೇಶ ದ್ವಾರಗಳಲ್ಲಿ ಪ್ರವೇಶ ನಿಷೇಧಿಸಲಾಗಿದ್ದು, ಬದಲಾಗಿ ಲಿಂಕ್ ರೋಡ್ ಹಾಗೂ ಕಬ್ಬನ್ ರೋಡ್ ಗೇಟ್‌ಗಳ ಮೂಲಕ ಎಂಟ್ರಿ ಪಡೆಯಬಹುದಾಗಿದೆ.

ಪಂದ್ಯದ ದಿನ ವಾಹನಗಳ ಪಾರ್ಕಿಂಗ್‌ಗಾಗಿ ಗರುಡಾ ಮಾಲ್, ಸೇಂಟ್ ಜೋಸೆಫ್ ಬಾಯ್ಸ್ ಸ್ಕೂಲ್, ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ಹಾಗೂ ಫ್ರೀಡಂ ಪಾರ್ಕ್‌ಗಳಲ್ಲಿ ವಾಹನಗಳನ್ನು ನಿಲ್ಲಿಸಬಹುದಾಗಿದೆ ಎಂದು ಆರ್‌ಸಿಬಿ ಫ್ರಾಂಚೈಸಿ ತಿಳಿಸಿದೆ.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ನಿಮಗೆ ಮದುವೆ ಆಗಿದೆಯಾ?
ಗುಂಡ : ಹೂಂ ಹುಡುಗಿ ಜೊತೆ ಆಗಿದೆ.
ಡಾಕ್ಟರ್ : ಎಲ್ಲರಿಗೂ ಹುಡುಗಿ ಜೊತೆಗೆ ಆಗೋದು...
ಗುಂಡ : ಇಲ್ಲ... ನನ್ನ ತಂಗಿಗೆ ಹುಡುಗನ ಜೊತೆ ಆಗಿದೆ.

ಮೈಸೂರು ಮಿತ್ರ
ಭಾನುವಾರ, ಮಾರ್ಚ್ 22, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬೆಲೆ ಗೊತ್ತಿಲ್ಲದವರ ಬಳಿ ವಜ್ರ ಕೊಟ್ರು
ಕೂಡ ಅದು ಕೇವಲ ಕಲ್ಲು ಮಾತ್ರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರೀತಿಗೊಂದು ಮುತ್ತು, ಹಸಿವಿಗೊಂದು ತುತ್ತು.

ನಿಮ್ಮ ಪತ್ರಗಳು

ಬೆರಳಚ್ಚು ಎಂಬುದು ಪ್ರಜಾಪ್ರಭುತ್ವದ ಅಸ್ತ್ರವೋ ಅಥವಾ ಅಡೆತಡೆಯೋ?

ಮಾನ್ಯರೆ,

ಪಡಿತರ ಮತ್ತು ಪಿಂಚಣಿಗೆ ಬಯೋಮೆಟ್ರಿಕ್ ಕಡ್ಡಾಯವಿರುವಾಗ ಚುನಾವಣೆಯಲ್ಲಿ ಇದಕ್ಕೇಕೆ ವಿನಾಯಿತಿ? ಭಾರತದಂತಹ ವಿಶಾಲ ದೇಶದಲ್ಲಿ. ಶೇ. 20ರಿಂದ 22 ರಷ್ಟು ನಕಲಿ ಮತದಾನ ತಡೆಯಲು ತಂತ್ರಜ್ಞಾನ ಅನಿವಾರ್ಯ. ಆದರೆ ಕೇವಲ ಯಂತ್ರಗಳ ಮೇಲೆ ಅವಲಂಬಿತವಾಗುವುದು ಅಪಾಯಕಾರಿ. ತಾಂತ್ರಿಕ ದೋಷದಿಂದ ಒಬ್ಬನೇ ಒಬ್ಬ ಅರ್ಹ ಮತದಾರನಿಗೆ ಹಕ್ಕು ನಿರಾಕರಣೆಯಾದರೂ ಅದು ಸಂವಿಧಾನಕ್ಕೆ ಮಾಡುವ ದ್ರೋಹ. ಗೌಪ್ಯತೆ ಮತ್ತು ಭದ್ರತೆಯ ನಡುವಿನ ಸಮತೋಲನ ಕಾಯ್ದುಕೊಳ್ಳುವುದು ಮುಖ್ಯ. ಹಸಿವು ನೀಗಿಸಲು ಬಳಸುವ ಬೆರಳಚ್ಚು ಪ್ರಜೆಯು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಸಾಧನವಾಗಬಾರದು. ಡಿಜಿಟಲ್ ಇಂಡಿಯಾದಲ್ಲಿ ಪಾರದರ್ಶಕತೆ ಬೇಕು. ಆದರೆ, ಅದು ಬಡವರ ಮತ್ತು ತಾಂತ್ರಿಕ ಜ್ಞಾನವಿಲ್ಲದವರ ಮತದಾನದ ಹಕ್ಕನ್ನು ಕಸಿದುಕೊಳ್ಳಬಾರದು. ವ್ಯವಸ್ಥೆಯ ಸುಧಾರಣೆ ಹೆಸರಿನಲ್ಲಿ ಪ್ರಜಾಪ್ರಭುತ್ವದ ಮೂಲ ಆಶಯಕ್ಕೆ ಧಕ್ಕೆಯಾಗದಂತೆ ಎಚ್ಚರವಹಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಹೀಗಾಗಿ ಬೆರಳಚ್ಚು ಮತದಾನ ಸಮಯದಲ್ಲಿ ಕಡ್ಡಾಯಗೊಳ್ಳಲಿ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

ವಿದ್ಯುತ್ ಸರಬರಾಜು ಸಮಸ್ಯೆ

ಮಾನ್ಯರೆ,

ಮೈಸೂರಿನ ಬನ್ನಿಮಂಟಪ ಎ ಬಡಾವಣೆಯಲ್ಲಿ ಕೆಎಸ್‌ಆರ್‌ಟಿಸಿ ಕಾರ್ಯಾಗಾರದ ಹತ್ತಿರ ಮಧ್ಯಾಹ್ನದ ಸಮಯದಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ. ಕೆಇಬಿಯ ಸಹಾಯವಾಣಿ ಸಂಖ್ಯೆ ಕಾರ್ಯನಿರ್ವಹಿಸುತ್ತಿಲ್ಲ ಮತ್ತು ಸೇವಾ ಕೇಂದ್ರದವರು ಸರಿಯಾಗಿ ಪ್ರತಿಕ್ರಿಯಿಸುತ್ತಿಲ್ಲ. ಎಲ್ಲಾ ಫೋನ್ ಕರೆಗಳು ಕಾರ್ಯನಿರತವಾಗಿವೆ. ಈ ಸಮಸ್ಯೆ ಪದೇ ಪದೆ ಸಂಭವಿಸುತ್ತಿದೆ. ಸಂಪೂರ್ಣವಾಗಿ ಪರಿಹರಿಸಲಾಗುತ್ತಿಲ್ಲ. ಇದು ಪರೀಕ್ಷೆ ಸಮಯ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಈ ಮೂಲಕ ಮನವಿ.

–ಎಂ. ಅರುಣ್, ಮಹಾರಾಜ ಕಾಲೇಜು, ಮೈಸೂರು.

ಯುವರಾಜ, ಮಹಾರಾಜ ಕಾಲೇಜುಗಳು ಎರಡು ಕಣ್ಣುಗಳು

ಮಾನ್ಯರೆ,

ಮೈಸೂರು ವಿಶ್ವವಿದ್ಯಾಲಯದ ಯುವರಾಜ ಕಾಲೇಜು ಹಾಗೂ ಮಹಾರಾಜ ಕಾಲೇಜು ಎರಡು ಕಣ್ಣುಗಳು ಇದ್ದ ಹಾಗೆ. ನಾನು ಕುಲಪತಿಯಾಗಿದ್ದ ಸಮಯದಲ್ಲಿ ಯುವರಾಜ ಕಾಲೇಜಿಗೆ ಸ್ವಾಯತ್ತತೆ ತರುವಲ್ಲಿ ಶ್ರಮವಹಿಸಿದುದ್ದು ಸರಿಯಷ್ಟೆ. ಆದರೆ ಈಗ ಏಕಾಏಕಿ ಸ್ವಾಯತ್ತತೆ ಕೈಬಿಡುವುದು ಸರಿಯಲ್ಲ ಎಂದು ವಿಶ್ರಾಂತ ಕುಲಪತಿ ಪ್ರೊ ಕೆ.ಎಸ್.ರಂಗಪ್ಪ ಅವರು ಆಕ್ಷೇಪ ವ್ಯಕ್ತಪಡಿಸಿರುವುದು ತುಂಬಾ ಶ್ಲಾಘನೀಯ. 1916ರಲ್ಲಿ ನಮ್ಮ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ್ದ ಮೈಸೂರು ವಿಶ್ವವಿದ್ಯಾಲಯ ದೇಶದಲ್ಲೇ ಪ್ರಖ್ಯಾತಿ ಗಳಿಸಿತ್ತು. ಇತ್ತೀಚೆಗೆ ಯಾವುದೇ ಬದ್ಧತೆ ಇಲ್ಲದ ಕಾರಣಕ್ಕೆ ಕೆಲವು ಕೋರ್ಸ್‌ಗಳನ್ನು ಹಂತ ಹಂತವಾಗಿ ಮುಚ್ಚಲಾಗಿದೆ. ಇದೇ ರೀತಿ ಮುಂದುವರೆದರೆ ಇನ್ನು 5 ವರ್ಷಗಳಲ್ಲಿ ವಿಶ್ವವಿದ್ಯಾಲಯವನ್ನು ಮುಚ್ಚಬೇಕಾದೀತು ಎಂದು ಬೇಸರ ವ್ಯಕ್ತಪಡಿಸಿರುವುದು ಸ್ವಾಗತಾರ್ಹ. ವಿದ್ಯಾರ್ಥಿಗಳು ಪ್ರವೇಶಾತಿಯಲ್ಲಿ ಮೈಸೂರು ವಿವಿಗೆ ಇಂದಿಗೂ ಮೊದಲ ಆದ್ಯತೆ ನೀಡುತ್ತಾ ಬಂದಿದ್ದಾರೆ. ಆದರೆ ಈ ನಡುವೇ ಕೊರತೆ ಇದೇ ಎಂದರೆ ನಂಬಲು ಹೇಗೆ ಸಾಧ್ಯ. ಮೈಸೂರು ವಿವಿಗೆ ಸಂಬಂಧಿಸಿದ ಆಸ್ತಿಯನ್ನು ಕೆಲವರು ತಮ್ಮದೆಂದು ಹೇಳುತ್ತಿರುವುದು ವಿಪರ್ಯಾಸವೇ ಸರಿ. ಈ ಎಲ್ಲಾ ನ್ಯೂನ್ಯತೆಗಳಿಂದ ಹೊರಬರಲು ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರು ಮಧ್ಯ ಪ್ರವೇಶ ಮಾಡಬೇಕು ಎಂದು ಆಗ್ರಹಿಸಿರುವುದು ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಹಳೆಯ ವಯೋಮಿತಿಯನ್ನೇ ಮುಂದುವರಿಸಿ

ಮಾನ್ಯರೇ,

ಒಂದನೇ ತರಗತಿ ಪ್ರವೇಶಕ್ಕೆ ಜೂನ್ 1ಕ್ಕೆ 6 ವರ್ಷ ಕಡ್ಡಾಯಗೊಳಿಸಿರುವ ನಿಯಮವು, ಕೇವಲ ಕೆಲವೇ ದಿನಗಳ ಅಂತರವಿರುವ ಮಕ್ಕಳ ಒಂದು ಪೂರ್ಣ ಶೈಕ್ಷಣಿಕ ವರ್ಷವನ್ನೇ ನಷ್ಟ ಮಾಡುತ್ತಿದೆ. ಪ್ರಸ್ತುತ ಎಲ್.ಕೆ.ಜಿ, ಯು.ಕೆ.ಜಿ ಶಿಕ್ಷಣದ ಹಿನ್ನೆಲೆ ಇರುವುದರಿಂದ, ಈ ಹಿಂದೆ ಇದ್ದ 5 ವರ್ಷ 6 ತಿಂಗಳ ವಯೋಮಿತಿಯೇ ಅತ್ಯಂತ ಸಮತೋಲಿತ ಮತ್ತು ವೈಜ್ಞಾನಿಕವಾಗಿದೆ.

ಈ 'ಸೌಮ್ಯ ನಿಯಮ' ಮರುಸ್ಥಾಪನೆಯಾದಲ್ಲಿ ಸಾವಿರಾರು ಮಕ್ಕಳ ವರ್ಷ ವ್ಯರ್ಥವಾಗುವುದು ತಪ್ಪುತ್ತದೆ ಹಾಗೂ ಗ್ರಾಮೀಣ–ನಗರ ಪ್ರದೇಶದ ಪೋಷಕರಿಗೂ ಇದು ಪೂರಕವಾಗಲಿದೆ. ಆದ್ದರಿಂದ ಸರ್ಕಾರ ಹಠಮಾರಿ ಧೋರಣೆ ಬಿಟ್ಟು, ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಹಳೆಯ ವಯೋಮಿತಿಯನ್ನೇ ಮುಂದುವರಿಸಿ ಗೊಂದಲಕ್ಕೆ ಶಾಶ್ವತ ಪರಿಹಾರ ನೀಡಬೇಕೆಂದು ಮನವಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಸಾರ್ವಜನಿಕ ಉದ್ಯಾನವನದಲ್ಲಿ ವ್ಯಾಯಾಮ ಮಾಡುವ ಯಂತ್ರಗಳನ್ನು ಸರಿಪಡಿಸಿ

ಮಾನ್ಯರೆ,

ಸಾರ್ವಜನಿಕ ಉದ್ಯಾನವನದಲ್ಲಿ ವ್ಯಾಯಾಮ ಮಾಡುವ ಯಂತ್ರಗಳು ಹದಗೆಟ್ಟಿವೆ. ಖಾಸಗಿ ವ್ಯಾಯಮ ಮಾಡುವ ಶಾಲೆಗಳಲ್ಲಿ ಅಂದರೆ ಜಿಮ್‌ನಲ್ಲಿ ಸಿಗುವಂತಹ ಸೌಲಭ್ಯಗಳು ಸಾರ್ವಜನಿಕ ಉದ್ಯಾನವನದಲ್ಲಿ ದೊರೆಯುತ್ತವೆ. ಸಾರ್ವಜನಿಕ ಉದ್ಯಾನವನದಲ್ಲಿ ವ್ಯಾಯಾಮ ಯಂತ್ರಗಳನ್ನು ಅಳವಡಿಸಿದ್ದಾರೆ. ಆದರೆ ಆ ಯಂತ್ರಗಳನ್ನು ಅಳವಡಿಸಿದರೆ ಸಾಕಾಗುವುದಿಲ್ಲ. ಅದನ್ನು ಎರಡು ಅಥವಾ ಮೂರು ತಿಂಗಳಗೊಮ್ಮೆ ಸರಿಪಡಿಸಬೇಕು ಅಥವಾ ಎಲ್ಲಾ ವ್ಯಾಯಾಮ ಯಂತ್ರಗಳನ್ನು ಸರಿ ಇದೆಯೇ ಎಂದು ನೋಡಿಕೊಳ್ಳುವುದು ಬಹಳ ಮುಖ್ಯವಾಗಿದೆ.

–ಪ್ರಶಾಂತ್ ಎಂ, ಪತ್ರಿಕೋದ್ಯಮ ವಿಭಾಗ, ಮಹಾರಾಜ ಕಾಲೇಜು, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಅಕ್ಕನೆಂಬ ಕಲ್ಪವೃಕ್ಷ...

ಅವರೀರ್ವರೂ ಆತ್ಮೀಯ ಗೆಳತಿಯರು. ಬದುಕಿನ ಅನೇಕ ವಸಂತಗಳನ್ನು ಕಂಡ ನಂತರ ಪರಿಚಯವಾದರೂ ಬಲು ಬೇಗ ತಮ್ಮಿಬ್ಬರೊಳಗಿನ ಸ್ನೇಹ ತಂತು ಒಂದೇ ಎಂಬುದನ್ನು ಅರಿತವರು. ಇಬ್ಬರ ಸಂಸಾರದ ಕಷ್ಟ–ಸುಖಗಳನ್ನು ಹಂಚಿಕೊಂಡು ಸಮಾಧಾನಪಡುವರು. ಅವರೇನು ಪ್ರತಿನಿತ್ಯ ಭೇಟಿಯಾಗುತ್ತಿರ ಲಿಲ್ಲ. ಸಮಯ ಸಿಕ್ಕಾಗ ಭೇಟಿ, ಮಾತುಕತೆ. ಸಿಗದಿದ್ದುದಕ್ಕಾಗಿ ದೂರು ಇಲ್ಲ, ಬೇಸರವೂ ಇಲ್ಲ. ಬದುಕಿನ ವಾಸ್ತವವನ್ನು ಒಪ್ಪಿಕೊಂಡಂತೆ ಇದ್ದರು.


ಬದುಕಿನಲ್ಲಿ ಇರುವ ಕಷ್ಟಗಳನ್ನೆಲ್ಲಾ ಕೊಟ್ಟು ಪರೀಕ್ಷೆ ಮಾಡಲೆಂದೇ ಆ ಭಗವಂತನಿಂದ ಆರಿಸಲ್ಪಟ್ಟವಳು ವಯಸ್ಸಿನಲ್ಲಿ ಸ್ವಲ್ಪ ಹಿರಿಯಳಾದಾಕೆ. ನೀನು ಎಷ್ಟೇ ಕಷ್ಟ ಕೊಟ್ಟರೂ ನಾನು ಅದನ್ನು ಎದುರಿಸಿ ಹೀಗೇ ನಗುನಗುತ್ತಲೇ ಇರುತ್ತೇನೆ ಎಂದು ಅವನಿಗೇ ಸವಾಲು ಹಾಕಿದಂತೆ ಇರುತ್ತಿದ್ದಳಾಕೆ. ಆದರೆ ಬದುಕಿನ ಹೊಡೆತಗಳನ್ನು ತೀರಾ ತಡೆಯದಾದಾಗ ಫೋನ್ ಮಾಡಿ, ಬಹಳ ಅಳಬೇಕೆನಿಸುತ್ತಿದೆ ಎಂದು ಹೇಳಿದಾಕ್ಷಣ ಕಿರಿಯವಳು ಓಡಿ ಬರುತ್ತಿದ್ದಳು, ಕಿವಿಯಾಗಲು.

ಹಿರಿಯಳ ಬದುಕು ಕಿರಿಯಳಿಗೆ ಒಂದು ಸ್ಫೂರ್ತಿ. ಅಷ್ಟು ದುಃಖಗಳನ್ನು ಎದುರಿಸಿ, ಆಕೆಯಂತೆ ನಗುನಗುತಾ ಬಾಳುವುದಕಿಂತ ಮತ್ತೇನು ಬೇಕು ಎಂದು ಯೋಚಿಸುವಳು. ತನ್ನ ಹದಿನೈದನೆಯ ವಯಸಿಗೇ ಆಕೆಯನ್ನು ಮದುವೆ ಮಾಡಿ ಕಳುಹಿಸಿದ್ದರು ಹೆತ್ತವರು. ಒಂದು ವರುಷದಲ್ಲಿಯೇ ವಿಧವೆ ಎಂಬ ಪಟ್ಟವನ್ನು ಹೊತ್ತು ತವರಿಗೆ ಹಿಂದಿರುಗಿದ್ದಳು ಆಕೆ. ತಂದೆಗೆ ತಮ್ಮ ತಪ್ಪಿನ ಅರಿವಾಗಿತ್ತು.

ಮಗಳನ್ನು ಓದಿಸಿ, ಅವಳಿಗೆ ತನ್ನ ಕಾಲಮೇಲೆ ತಾನು ನಿಲ್ಲುವಂತೆ ಮಾಡುವುದು ಅವರ ಸಂಕಲ್ಪವಾಯಿತು. ಅದರಲ್ಲಿ ಸಫಲರೂ ಆದರು. ಮಗಳಿಗೆ ಸರಕಾರಿ ಕೆಲಸ ಸಿಕ್ಕಾಗ ಮನೆ ಮಂದಿಗೆಲ್ಲಾ ಸಂತಸ. ಅವಳಿಗೆ ನಾಕು ತಂಗಿಯರು, ಒಬ್ಬ ತಮ್ಮ ಇದ್ದ. ಅಕ್ಕಿಮಂಡಿಯಲ್ಲಿ ಲೆಕ್ಕ ಬರೆಯುತ್ತಿದ್ದ ವಯಸ್ಸಾದ ತಂದೆಯ ಹೆಗಲಿಗೆ ತನ್ನ ಹೆಗಲನ್ನೂ ಸೇರಿಸುವುದನ್ನು ಕಲಿತ ಆಕೆ ಕ್ರಮೇಣ ಸಂಸಾರದ ಜವಾಬ್ದಾರಿಯನ್ನೆಲ್ಲಾ ತಾನೇ ಹೊತ್ತಳು. ಕಿರಿಯರ ಓದು, ಮದುವೆ ಇತ್ಯಾದಿಗಳನ್ನೆಲ್ಲ ತಂದೆಯೊಡನೆ ಸಮರ್ಪಕವಾಗಿ ನೆರವೇರಿಸಿದಳು.

ತಂದೆ ತಾಯಿಯೊಡನೆ ಅವಳ ಬದುಕು ಕಳೆಯುತ್ತಲಿತ್ತು. ನಿಧಾನವಾಗಿ ನಾಟಕ ಕ್ಷೇತ್ರದಲ್ಲಿ ಅವಳ ಆಸಕ್ತಿ ಬೆಳೆಯಿತು. ನಾಟಕಗಳಲ್ಲಿ ಅಭಿನಯಿಸುವುದನ್ನೂ ಹವ್ಯಾಸ ಮಾಡಿಕೊಂಡಳಾಕೆ. ಅವಳಲ್ಲಿ ಮನೆ ಮಾಡಿದ್ದ ಮಾನವೀಯ ಗುಣಗಳು ಅವಳಿಗೆ ಅನೇಕ ಸ್ನೇಹಿತರನ್ನು ಮಾಡಿಕೊಡಲು ನೆರವಾಗಿತ್ತು. ನಾಟಕದ ತಾಲೀಮುಗಳು ನಡೆಯುತ್ತಿದ್ದಾಗ ಅಲ್ಲಿಗೆ ಬರುತ್ತಿದ್ದ ಓರ್ವ ಸುಶಿಕ್ಷಿತ, ಗಂಭೀರ ಸ್ವಭಾವದ ವ್ಯಕ್ತಿ ಈಕೆಯನ್ನು ಮೆಚ್ಚಿ ವರಿಸಲು ಮುಂದಾದಾಗ ಅವಳಿಗೆ ಗಾಬರಿ, ಅಚ್ಚರಿ. ಸಂಪ್ರದಾಯಸ್ಥ ತಂದೆ–ತಾಯಿ ಏನನ್ನುತ್ತಾರೋ ಎಂಬ ಭಯ. ಸಂಸಾರ ಸುಖವನ್ನೇ ಕಾಣದ ಬದುಕು ಅವಳದು. ಮನದಲ್ಲೇ ಆಸೆ ಮೊಳಕೆ ಒಡೆಯಿತು. ಬಹಳ ಸಂಪ್ರದಾಯಸ್ಥರಾದ ತಂದೆ–ತಾಯಿಯರು ಈ ಮದುವೆಗೆ ಒಪ್ಪಿಗೆ ಕೊಟ್ಟಾಗ ಅವರ ವಿಶಾಲ ಮನೋಭಾವಕ್ಕೆ ಮನದಲ್ಲೇ ಕೈ ಮುಗಿದಿದ್ದಳು.

ಹೊಸ ಸಂಸಾರದಲ್ಲಿ ದಿನಗಳು ಉರುಳಿದುದೇ ಗೊತ್ತಾಗಲಿಲ್ಲ. ಗಂಡ ಸದಾ ಓದಿನಲ್ಲಿ ಮುಳುಗಿರುವ ಸ್ವಭಾವದವನು. ಹೀಗಾಗಿ ಇಲ್ಲೂ ಸಂಸಾರದ ಜವಾಬ್ದಾರಿ ಅವಳ ಹೆಗಲಿಗೇ. ಎರಡು ಹೆಣ್ಣು ಮಕ್ಕಳಾದುವು. ಭಗವಂತ ಪರೀಕ್ಷೆ ಮಾಡಲು ಆರಂಭಿಸಿದರೆ, ಅದಕ್ಕೆ ಕೊನೆಯೇ ಇಲ್ಲವೆಂದು ಕಾಣುತ್ತದೆ. ಒಬ್ಬ ಮಗಳಿಗೆ ಬುದ್ಧಿ ಅಷ್ಟಾಗಿ ಚುರುಕಿರಲಿಲ್ಲ. ಇದಕ್ಕೆ ಸಮಾಧಾನ ಮಾಡುವಂತೆ ಮತ್ತೊಬ್ಬಳು ಆಟ, ಓದು ನೃತ್ಯ ಎಲ್ಲದರಲ್ಲೂ ಅತೀ ಜಾಣೆ. ತಾಯಿಗೆ ಇಬ್ಬರೂ ಅತ್ಯಂತ ಆಪ್ತರು. ತನ್ನ ಆಫೀಸಿನ ಕೆಲಸಗಳೊಡನೆ ಚಿಕ್ಕವಳ ಶುಶ್ರೂಷೆಯನ್ನೂ ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದ್ದಳು. ಇಬ್ಬರು ನಾದಿನಿಯರ ಲಗ್ನ ಆಗಬೇಕಿತ್ತು. ಇವಳ ಬದುಕಿನ ಹೋರಾಟವನ್ನು ಅರ್ಥ ಮಾಡಿಕೊಂಡಿದ್ದ ಅತ್ತೆ ಅವಳಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದರು.



> ಅವಳಿಗೂ ಒಂದು ಮನಸ್ಸಿದೆ. ಅದನ್ನು ಚುಚ್ಚಿ ನೋವು ಉಂಟುಮಾಡಬಾರದು ಎನ್ನುವುದನ್ನೂ ಕೆಲವರು ಮರೆತಂತಿತ್ತು. ಅವಳಿಗ್ಯಾವ ಸಂಸಾರವಿದೆ ಎಂಬ ಭಾವ ಇರುವಲ್ಲಿ ಆಕೆ ಒಂದು ಕರೆಯುವ ಹಸುವಾದಳು. ಕಷ್ಟ ಬಂದ ಕೂಡಲೇ ಈ ಅಕ್ಕನ ಬಳಿಗೆ ಧಾವಿಸುತ್ತಿದ್ದ ಒಡಹುಟ್ಟಿದವರು, ಆಕೆಯ ಮನದಲ್ಲಿ ಹುದುಗಿದ್ದ ನೋವಿಗೆ ಸಾಂತ್ವನವನ್ನು ಹೇಳಲೂಯಿಲ್ಲ. ಅದನ್ನು ನಿರೀಕ್ಷೆ ಮಾಡುತ್ತಿದ್ದವಳಿಗೆ ಆಗುತ್ತಿದ್ದ ನಿರಾಶೆಯನ್ನು ಈ ಗೆಳತಿಯಲ್ಲಿ ಹೇಳಿ ಕೊಂಡು ಹಗುರಾಗುತ್ತಿದ್ದಳು. ಅವರೆಲ್ಲರ ಮಕ್ಕಳು ಮಾತ್ರ ದೊಡ್ಡಮ್ಮ ದೊಡ್ಡಮ್ಮ ಎಂದು ಅವಳ ಮೇಲೆ ಪ್ರೀತಿಯ ಮಳೆಯನ್ನೇ ಸುರಿಸುವರು. ಅದೊಂದೇ ಆ ಜೀವಕ್ಕೆ ಸಮಾಧಾನ.

ಮದುವೆ ವಯಸ್ಸಿಗೆ ಬಂದ ಮಗಳ ಲಗ್ನದ ಚಿಂತೆ ಅವಳಿಗೆ ಶುರುವಾಯಿತು. ಇಂತಹ ಹುಡುಗಿಯನ್ನು ಯಾರು ಮದುವೆಯಾಗಲು ಮುಂದೆ ಬರುತ್ತಾರೆ? ಬಂದವರಿಗೆ ಮನೆ ಮಾಡಿಕೊಟ್ಟು, ಅವರ ಸಂಸಾರದ ಜವಾಬ್ದಾರಿಯನ್ನೂ ಹೊರಲು ಆಕೆ ಸಿದ್ಧಳಿದ್ದಳು. ದುಡ್ಡಿನ ಆಸೆಗೆ ಬರುವವರಿಂದ ಎಚ್ಚರವಿದ್ದಳು. ಕೊನೆಗೆ ಒಬ್ಬಾತ ಆ ಹುಡುಗಿಯನ್ನು ಮದುವೆಯಾಗಲು ಮುಂದೆ ಬಂದ. ಈತ ತನ್ನ ಮಗಳನ್ನು ನೋಡಿಕೊಳ್ಳಬಲ್ಲ ಎಂಬ ನಂಬಿಕೆ ಬಂದ ಮೇಲೆ ಮಗಳನ್ನು ಅವನಿಗೆ ಕೊಟ್ಟು ಲಗ್ನ ಮಾಡಿದಳು. ಆದರೆ ಮಗಳ ಆರೋಗ್ಯ ದಿನೇ ದಿನೇ ಕ್ಷೀಣಿಸುತ್ತಾ ಬಂದಿತು. ಹೈಡ್ರೋ ಕೆಪಿಲಸ್ ಎಂದರು ವೈದ್ಯರು. ಒಂದು ದಿನ ನರಳುತ್ತಲೇ ತನ್ನ ಇಹಲೋಕದ ವ್ಯಾಪಾರವನ್ನು ಮುಗಿಸಿದಳು ಹುಡುಗಿ. ಮನೆಯ ಸಮೇತ ಎಲ್ಲವನ್ನೂ ಅಳಿಯನಿಗೇ ನೀಡಿ, ನೀನು ಮತ್ತೊಂದು ಮದುವೆಯಾಗು ಎಂದು ಹೇಳಿ ಕಳುಹಿಸಿದಳು ಈಕೆ. ಮತ್ತೊಬ್ಬ ಮಗಳೇ ಈಗ ಅವಳ ಬದುಕಿನ ಆಶಾಕಿರಣ. ಕಾಲೇಜಿನಲ್ಲಿ ಸದಾ ಉತ್ಸಾಹದ ಚಿಲುಮೆಯಂತೆ ಇರುತ್ತಿದ್ದ ಈ ಹುಡುಗಿ ಎಲ್ಲರ ಅಚ್ಚುಮೆಚ್ಚು. ಭರತನಾಟ್ಯ ಪ್ರವೀಣೆ. ಮನೆಯಲ್ಲಿ ಸದಾ ಅವಳ ಗೆಳತಿಯರ ನಗು, ಹರಟೆಯ ಗದ್ದಲ.


ಆಗಾಗ್ಗೆ ಮಗಳಿಗೆ ಕಾಡುತ್ತಿದ್ದ ಹೊಟ್ಟೆನೋವಿಗೆ ಎಲ್ಲ ವೈದ್ಯರಲ್ಲಿ ಪರೀಕ್ಷೆ ಮಾಡಿಸಿದರೂ ಗುಣ ಆಗಲೊಲ್ಲದು. ಅದು ಬಂದಾಗ ವಿಲವಿಲನೆ ಒದ್ದಾಡುವ ಮಗಳನ್ನು ನೋಡಿ ಅಸಹಾಯಕಳಾದ ಈಕೆಯ ಕಣ್ಣಲ್ಲಿ ನೀರು. ಆಸ್ಪತ್ರೆಗೆ ಅಡ್ಮಿಟ್ ಆದ ಮಗಳು ಮನೆಗೆ ಬರಲೇಯಿಲ್ಲ. ಭಗವಂತನ ಪರೀಕ್ಷೆ ಇನ್ನೂ ಮುಗಿದಿರಲಿಲ್ಲ. ಎರಡೂ ಮಕ್ಕಳನ್ನು ಕಳೆದುಕೊಂಡ ನೋವಿನಲ್ಲಿ, ದುಃಖದಲ್ಲಿ ನರಳುತ್ತಿದ್ದವಳನ್ನು ಕಂಡು ಆ ಮಹಾರಾಯನಿಗೆ ಕರುಣೆ ಬರಲಿಲ್ಲ. ಕೆಲವೇ ದಿನಗಳಲ್ಲಿ ಗಂಡನೂ ತೀರಿಕೊಂಡ. ನಿಂತ ನೆಲ ಕುಸಿದಂತಾದ ಆಕೆಗೆ ಯಾರು ದಿಕ್ಕು? ಅವಳ ಬದುಕಿನಲ್ಲಿ ಇನ್ನೇನು ಉಳಿದಿದೆ? ಎಂದು ಎಲ್ಲರೂ ಉಪಚಾರದ ಮಾತನ್ನು ಆಡಿದವರೇ. ಬದುಕಲೇ ಬೇಕಲ್ಲ? ಮತ್ತೆ ಕೆಲಸಕ್ಕೆ ಹೋಗಲು ಆರಂಭಿಸಿದ್ದಳು. ಮಗಳ ಬದುಕಿಗೆ ನೊಂದ ತಾಯಿ ಮತ್ತು ತಂದೆ ಅವಳೊಬ್ಬಳನ್ನೇ ಬಿಡುವುದು ಬೇಡವೆಂದು ಅವಳೊಡನೆ ಇರಲು ಬಂದರು. ಆಗಿನಿಂದ ತಂದೆ ತಾಯಿಯರ ಹೊಣೆ ಇವಳದೇ ಆಯಿತು. ಮತ್ಯಾವ ಮಕ್ಕಳಿಗೂ ಅದು ಬೇಡದ ಹೊರೆ. ಮಗನಿಗೆ ಮನೆ ಚಿಕ್ಕದು ಎಂಬ ನೆವ. ಜೊತೆಗೆ ಅವಳು ಒಬ್ಬಳೇ ತಾನೇ ಇರುವುದು ಎಂಬ ಭಾವ ಬಲಿಯಿತು ಎಲ್ಲರಲಿ. ತನ್ನ ದುಃಖವನ್ನು ನುಂಗಿ, ತಂಗಿಯರ, ತಮ್ಮನ ಬದುಕು ಹಸನಾಗಿರಲಿ ಎಂದು ಹಾರೈಸುತ್ತಾ ತನ್ನ ದಿನಗಳನ್ನು ನೂಕುವುದನ್ನು ರೂಢಿಸಿಕೊಂಡಳಾಕೆ.

ಆಫೀಸಿನಲ್ಲಿ ಬಂದ ಬೋನಸ್ ಹಣವನ್ನು ತಂಗಿಯರ ಸಂಸಾರದ ಕಷ್ಟ ಸುಖಗಳಿಗಾಗಿ ಖರ್ಚು ಮಾಡಿಬಿಡುವಳು. ಅವರ ಮಕ್ಕಳನ್ನು ತನ್ನ ಮಕ್ಕಳೇ ಎಂಬಂತೆ ಪ್ರೀತಿಸುತ್ತಿದ್ದಳು. ಅವರೆಲ್ಲ ಮನೆಗೆ ಬಂದಾಗ ಸಂಭ್ರಮದಿಂದ ಆದರಿಸುವಳು. ಮನೆ ಕೊಳ್ಳಲು, ಒಡವೆ ಮಾಡಿಸಲು, ಮಕ್ಕಳ ಮದುವೆಗೆ ಎಲ್ಲಕ್ಕೂ ನೆರವಾಗುವ ಈ ಅಕ್ಕನ ಮನದಲ್ಲಿ ಅದೆಷ್ಟು ನೋವುಗಳು ಅಡಗಿವೆ ಎಂಬುದು ಅವರ ಗಮನಕ್ಕೇ ಬರಲಿಲ್ಲವೋ ಏನೋ. ಅವಳಿಗೂ ಒಂದು ಮನಸ್ಸಿದೆ. ಅದನ್ನು ಚುಚ್ಚಿ ನೋವು ಉಂಟುಮಾಡಬಾರದು ಎನ್ನುವುದನ್ನೂ ಕೆಲವರು ಮರೆತಂತಿತ್ತು. ಅವಳಿಗ್ಯಾವ ಸಂಸಾರವಿದೆ ಎಂಬ ಭಾವ ಇರುವಲ್ಲಿ ಆಕೆ ಒಂದು ಕರೆಯುವ ಹಸುವಾದಳು. ಕಷ್ಟ ಬಂದ ಕೂಡಲೇ ಈ ಅಕ್ಕನ ಬಳಿಗೆ ಧಾವಿಸುತ್ತಿದ್ದ ಒಡಹುಟ್ಟಿದವರು, ಆಕೆಯ ಮನದಲ್ಲಿ ಹುದುಗಿದ್ದ ನೋವಿಗೆ ಸಾಂತ್ವನವನ್ನು ಹೇಳಲೂಯಿಲ್ಲ. ಅದನ್ನು ನಿರೀಕ್ಷೆ ಮಾಡುತ್ತಿದ್ದವಳಿಗೆ ಆಗುತ್ತಿದ್ದ ನಿರಾಶೆಯನ್ನು ಈ ಗೆಳತಿಯಲ್ಲಿ ಹೇಳಿಕೊಂಡು ಹಗುರಾಗುತ್ತಿದ್ದಳು. ಅವರೆಲ್ಲರ ಮಕ್ಕಳು ಮಾತ್ರ ದೊಡ್ಡಮ್ಮ ದೊಡ್ಡಮ್ಮ ಎಂದು ಅವಳ ಮೇಲೆ ಪ್ರೀತಿಯ ಮಳೆಯನ್ನೇ ಸುರಿಸುವರು. ಅದೊಂದೇ ಆ ಜೀವಕ್ಕೆ ಸಮಾಧಾನ.

ಬೆಂಗಳೂರಲ್ಲಿ ನೀರಿನ ಬಾಕಿ ಪಾವತಿಗೆ ಏಪ್ರಿಲ್‌ನಲ್ಲಿ ಒಂದು ಬಾರಿ ಪರಿಹಾರ ಯೋಜನೆ

ಬೆಂಗಳೂರು, ಮಾ.21(ಕೆಎಂಶಿ)– ಬೆಂಗಳೂರು ನಗರದ ನಾಗರಿಕರಿಗೆ ಜಲ ಮಂಡಳಿ ಯುಗಾದಿ ಉಡುಗೊರೆಯಾಗಿ ನೀರಿನ ಬಿಲ್ ಬಾಕಿ ಇರುವವರಿಗೆ ಒಂದು ಬಾರಿಯ ಪರಿಹಾರ ಯೋಜನೆಯನ್ನು ಏಪ್ರಿಲ್‌ನಿಂದ ಜಾರಿಗೊಳಿಸಲಿದೆ ಎಂದು ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನೂ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಈ ಸಂಬಂಧ ಮಾಧ್ಯಮ ಪ್ರಕಟಣೆ ನೀಡಿರುವ ಅವರು, ನಗರದ ಜನರಿಗೆ ಅನುಕೂಲ ಮಾಡಿಕೊಡಲು ಬಾಕಿ ಉಳಿಸಿಕೊಂಡಿರುವ ಬಿಲ್‌ನ ಅಸಲು ಪಾವತಿಸಿದಲ್ಲಿ ಬಡ್ಡಿ ಮನ್ನಾ ಮಾಡಲಾಗುವುದು ಎಂದಿದ್ದಾರೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವ್ಯಾಪ್ತಿಯಲ್ಲಿ ಸುಮಾರು 11 ಲಕ್ಷ ನೀರಿನ ಸಂಪರ್ಕಗಳ ಪೈಕಿ, 5.11 ಲಕ್ಷ ಗ್ರಾಹಕರು ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ.



ಡಿ.ಕೆ.ಶಿವಕುಮಾರ್

ಫೆಬ್ರವರಿ 2026ರ ಅಂತ್ಯದವರೆಗಿನ ಮಾಹಿತಿಯಂತೆ, ಒಟ್ಟು ಬಾಕಿ ಮೊತ್ತ ರೂ. 851.33 ಕೋಟಿ ರೂ. ಆಗಿದ್ದು, ಅಸಲು ಮೊತ್ತ 539.43 ಕೋಟಿ ರೂ. ಹಾಗೂ ಬಡ್ಡಿ 311.90 ಕೋಟಿ ರೂ. ಸೇರಿದೆ. ಬಾಕಿ ಸುಲಭ ಪಾವತಿ ಹಾಗೂ ಗ್ರಾಹಕರ ಮೇಲಿನ ಆರ್ಥಿಕ ಹೊರೆ ತಗ್ಗಿಸಲು, ಏಪ್ರಿಲ್ 2026ರಿಂದ ಜೂನ್ 2026 ರವರೆಗೆ (3 ತಿಂಗಳ ಅವಧಿ) ಯೋಜನೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಗ್ರಾಹಕರು ಬಾಕಿಯ ಅಸಲು ಮೊತ್ತ ಸಂಪೂರ್ಣ ಪಾವತಿಸಿದರೆ, ಏಪ್ರಿಲ್ 2026ರವರೆಗಿನ ಸಂಪೂರ್ಣ ಬಡ್ಡಿ ಮನ್ನಾ ಮಾಡಲಾಗುತ್ತದೆ. ಗೃಹ ಬಳಕೆ, ವಾಣಿಜ್ಯ, ಕೈಗಾರಿಕೆ ಸೇರಿದಂತೆ ಎಲ್ಲ ವರ್ಗದ ಗ್ರಾಹಕರಿಗೂ ಯೋಜನೆ ಅನ್ವಯವಾಗಲಿದ್ದು, ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳ ಬಾಕಿಗಳಿಗೂ ಲೆಕ್ಕಪತ್ರ ಸಮನ್ವಯದ ಮೂಲಕ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಪ್ರತಿ ಬಾಕಿದಾರರಿಗೆ ಅವರ ಸಂಖ್ಯೆ, ಅಸಲು ಮೊತ್ತ, ಮನ್ನಾ ಆಗುವ ಬಡ್ಡಿ ಹಾಗೂ ಪಾವತಿಸಬೇಕಾದ ಅಂತಿಮ ಮೊತ್ತದ ವಿವರ ಒದಗಿಸಲಾಗುವುದು. ಗ್ರಾಹಕರು ಕಿಯೋಸ್ಕ್, ಆನ್‌ಲೈನ್ ಪೋರ್ಟಲ್ ಹಾಗೂ ವಿವಿಧ ಡಿಜಿಟಲ್ ಪಾವತಿ ವಿಧಾನಗಳ ಮೂಲಕ ಹಣ ಪಾವತಿಸಬಹುದಾಗಿದೆ. ಸಾರ್ವಜನಿಕರು ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಶಿವಕುಮಾರ್ ಕೋರಿದ್ದಾರೆ.

ಜಯಪುರದಲ್ಲಿ ರಂಜಾನ್ ಸಂಭ್ರಮ...




ಮೈಸೂರು ತಾಲೂಕು ಜಯಪುರದಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಮುಸ್ಲಿಂ ಬಾಂಧವರು ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿ, ಪರಸ್ಪರ ಶುಭಾಶಂಯ ವಿನಿಮಯ ಮಾಡಿಕೊಂಡರು. ಮುಸ್ಲಿಂ ಧರ್ಮ ಗುರುಗಳಾದ ಮಹಮ್ಮದ್ ಶಾಜಿಥ್, ಮುಖಂಡರಾದ ಮಹಮ್ಮದ್ ಆಲಿ(ಬಾಬಣ್ಣ), ಅಬ್ದುಲ್ ಮುತಾಲೀಫ್, ಮೊಹಿಯುದ್ದಿನ್, ಜೈಲಬುದ್ಧಿನ್ ಮತ್ತು ಮುಸ್ಲಿಂ ಬಾಂಧವರು ಹಾಜರಿದ್ದರು.

ನಾಳೆಯಿಂದ ಉಚಿತ ಚರ್ಮರೋಗ ತಪಾಸಣೆ ಶಿಬಿರ

ಮೈಸೂರು, ಮಾ.21–ಮೈಸೂರಿನ ಕಾವೇರಿ ಆಯುರ್ವೇದ ಆಸ್ಪತ್ರೆ ವತಿಯಿಂದ ಮೊಡವೆ ಮತ್ತು ಪಾದದ ಚರ್ಮರೋಗ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ಮಾ.23ರಿಂದ 29ರವರೆಗೆ ಮೈಸೂರಿನ ಕೆಬಿಎಲ್ ಲೇಔಟ್, ದೇವೇಗೌಡ ಸರ್ಕಲ್ ಬಳಿಯಿರುವ ಕಾವೇರಿ ಆಯುರ್ವೇದ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ: 0821-2970619, 9964149531, 9731799317 ಎಂದು ಕಾವೇರಿ ಆಯುರ್ವೇದ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಬ್ರದರ್, ಕೆ.ಜೆ.ಕುಮಾರ್‌ಗೆ ಶ್ರದ್ಧಾಂಜಲಿ

ಮೈಸೂರು, ಮಾ.21(ಜಿಎ)–ಇತ್ತೀಚೆಗೆ ನಿಧನರಾದ ಹಿರಿಯ ಪತ್ರಕರ್ತರಾದ ಕೆ.ವಿ. ಶ್ರೀನಿವಾಸನ್(ಬ್ರದರ್) ಹಾಗೂ ಕೆ.ಜೆ. ಕುಮಾರ್ ಅವರಿಗೆ ಪತ್ರಕರ್ತರ ಭವನದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.



ಹಿರಿಯ ಪತ್ರಕರ್ತರಾದ ಕೆ.ವಿ.ಶ್ರೀನಿವಾಸನ್ (ಬ್ರದರ್) ಹಾಗೂ ಕೆ.ಜೆ.ಕುಮಾರ್ ಅವರಿಗೆ ಪತ್ರಕರ್ತರ ಭವನದಲ್ಲಿ ಶನಿವಾರ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಕೆ.ವಿ.ಶ್ರೀನಿವಾಸನ್ ಹಾಗೂ ಕೆ.ಜೆ. ಕುಮಾರ್ ಮೈಸೂರು ಪತ್ರಿಕೋದ್ಯಮ ಕಂಡ ವಿಶಿಷ್ಟ ವ್ಯಕ್ತಿಗಳಾಗಿದ್ದಾರೆ. ಮೈಸೂರು ಅನೇಕ ಹೊಸ ಪೀಳಿಗೆಯ ಪತ್ರಕರ್ತರನ್ನು ತನ್ನ ಒಡಲಿಗೆ ತುಂಬಿಕೊಳ್ಳುತ್ತಿದೆ. ಆದರೆ ಇದೇ ವೇಳೆ ಈ ರೀತಿಯ ಹಿರಿಯ ಪತ್ರಕರ್ತರನ್ನೂ ಕಳೆದುಕೊಳ್ಳುತ್ತಿರುವುದು ಬೇಸರದ ಸಂಗತಿಯಾಗಿದೆ. ಕೆ.ವಿ. ಶ್ರೀನಿವಾಸನ್ ಓರ್ವ ಸಂತರಂತೆ ಕಾಣುತ್ತಿದ್ದರು. ಎಂದಿಗೂ ಯಾರನ್ನೂ ನೋಯಿಸದ, ಕೇಡು ಬಯಸದ ಪತ್ರಕರ್ತರಾಗಿದ್ದು, ಗಾಂಧೀ ವಾದಿಗಳು ಹೇಗಿರುತ್ತಾರೆಂಬುದನ್ನು ತಿಳಿಯಬೇಕಿದ್ದವರು ಇವರನ್ನು ನೆನೆಸಿಕೊಂಡರೆ ಸಾಕಾಗುವಂತೆ ಜೀವನ ನಡೆಸುತ್ತಿದ್ದರು ಎಂದರು.

ಇದೇ ವೇಳೆ ಕೆ.ಜೆ. ಕುವಾರ್ ಬರವಣಿಗೆ ಕೇವಲ ಸಾಹಿತ್ಯವಲ್ಲ, ಅದೊಂದು ಕಲೆ ಎಂಬುದಕ್ಕೆ ಸಾಕ್ಷಿಯಾಗಿದ್ದರು. ಕನ್ನಡ ಸಿನಿಮಾ ಬರವಣಿಗೆಯನ್ನು ಅವರಷ್ಟು ಉತ್ತಮವಾಗಿ ಬರೆಯುತ್ತಿದ್ದವರು ನಿಜಕ್ಕೂ ತೀರಾ ಅಪರೂಪವೇ ಆಗಿದ್ದಾರೆ. ಸಿನಿಮಾ ಬರವಣಿಗೆ ಹೇಗಿರಬೇಕೆಂಬುದನ್ನು ಹಲವರಿಗೆ ಕಲಿಸಿಕೊಟ್ಟವರೂ ಅವರಾಗಿದ್ದಾರೆಂದು ಸ್ಮರಿಸಿದರು.

ಹಿರಿಯ ಪತ್ರಕರ್ತ ಪ್ರಭುರಾಜನ್ ಮಾತನಾಡಿ, ಶ್ರೀನಿವಾಸನ್ ಹಾಗೂ ತಮ್ಮ ನಡುವಿನ ಒಡನಾಟ ಸುಮಾರು 55 ವರ್ಷಗಳದ್ದಾಗಿದೆ. ಅವರು ಚಿಕ್ಕ ಹುಡುಗರನ್ನೂ ಬ್ರದರ್ ಎಂದೇ ಕರೆಯುತ್ತಿದ್ದ ಕಾರಣ ಬ್ರದರ್ ಎಂದೇ ಪತ್ರಿಕಾ ವಲಯದಲ್ಲಿ ಖ್ಯಾತರಾಗಿದ್ದರು. ಆಕಾಶವಾಣಿಯಲ್ಲಿ ಅವರು ಅನೇಕ ವರ್ಷ ವಿಶಿಷ್ಟ ಸೇವೆ ಸಲ್ಲಿಸಿದ್ದಾರೆ. ಈ ನಡುವೆ ಯಾರಿಂದಲೂ ಒಂದು ಪೈಸೆಯನ್ನೂ ಪಡೆಯದ ಅವರು ತಮ್ಮ ಖರ್ಚು ಕಳೆದು ಉಳಿದುದನ್ನು ಇತರರಿಗೆ ವಿನಿಯೋಗಿಸುತ್ತಿದ್ದರು ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಬಿ. ರಾಘವೇಂದ್ರ ಮಾತನಾಡಿ, ಶ್ರೀನಿವಾಸನ್ ಮೈಸೂರು ಪತ್ರಿಕೋದ್ಯಮದ ಬಗ್ಗೆ ಅಪಾರ ಒಲವು ಹೊಂದಿದ್ದರು. ಹೀಗಾಗಿಯೇ ಪತ್ರಕರ್ತರ ಸಂಘದಲ್ಲಿ ಹಲವರ ಹೆಸರಿನಲ್ಲಿ ಅನೇಕ ವಾರ್ಷಿಕ ಪ್ರಶಸ್ತಿ ಸ್ಥಾಪಿಸಿದ್ದಾರೆ. ಸಂಘದಿಂದ ಮುಂದಿನ ದಿನಗಳಲ್ಲಿ ಅವರ ಹೆಸರಿನಲ್ಲಿ ಯುವ ಪತ್ರಕರ್ತರನ್ನು ಗುರುತಿಸಿ ಪ್ರಶಸ್ತಿ ನೀಡಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ, ಕಾರ್ಯಕಾರಿಣಿ ಸದಸ್ಯ ಎಂ.ಟಿ. ಯೋಗೇಶ್‌ಕುಮಾರ್, ಹಿರಿಯ ಪತ್ರಕರ್ತರಾದ ಕಾಶಿನಾಥ್, ಮೂಗೂರು ನಂಜುಂಡಸ್ವಾಮಿ, ಪ್ರಕಾಶ್ ಬಾಬು, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಮಹಿಳಾ ದಿನಾಚರಣೆ

ಮೈಸೂರು, ಮಾ.21–ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಮಾ.22ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ರೋಟರಿ ಸ್ಕೂಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್ ಗೌಡರು ಉದ್ಘಾಟಿಸಲಿದ್ದು, ಬಳಿಕ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 25 ಮಹಿಳಾ ಸಾಧಕರ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಸಮಾರಂಭದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಜಿ.ರಘು ಆಚಾರ್, ಕೆಪಿಸಿಸಿ ರಾಜ್ಯ ಹಿಂದುಳಿದ ವರ್ಗಗಳ ಉಪಾಧ್ಯಕ್ಷೆ ಪವಿತ್ರ ಪ್ರಭಾಕರ್‌ರೆಡ್ಡಿ, ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ.ರಘು ಆಲನಹಳ್ಳಿ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಮೈಸೂರು ಜಿಲ್ಲಾ ವ್ಯವಸ್ಥಾಪಕಿ ಶೋಭಾ, ಸಮಾಜ ಸೇವಕಿ ನೀಲಾ, ಪಾಲಿಕೆ ಮಾಜಿ ಸದಸ್ಯ ರಮೇಶ್ ರಮಣಿ, ಛಾಯಾದೇವಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಮಹಿಳಾ ಬಂಧುಗಳು, ಸಮುದಾಯದ ಸಂಘ–ಸಂಸ್ಥೆಯ ಎಲ್ಲಾ ಅಧ್ಯಕ್ಷರು, ಪದಾಧಿಕಾರಿಗಳು, ಮುಖಂಡರು ಭಾಗವಹಿಸಬೇಕೆಂದು ವೇದಿಕೆ ಅಧ್ಯಕ್ಷ ಕೆಂಡಗಣ್ಣ ಕೋರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಸೋಮನಾಥ ಜ್ಯೋತಿರ್ಲಿಂಗ ಮಹಾರುದ್ರ ಪೂಜೆ



ಮೈಸೂರು, ಮಾ.21– ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಫ್ ಮೈಸೂರು 45ನೇ ವಾರ್ಷಿಕೋತ್ಸವದ ಅಂಗವಾಗಿ ಗುರುದೇವ್ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ ಮಾರ್ಗದರ್ಶನದಲ್ಲಿ 1000 ವರ್ಷಗಳಷ್ಟು ಹಳೆಯದಾದ ಮೂಲ ಸೋಮನಾಥ ಜ್ಯೋತಿರ್ಲಿಂಗಕ್ಕೆ ಮಹಾರುದ್ರ ಪೂಜೆ ಯನ್ನು ನೆರವೇರಿಸಲಾಯಿತು ನೂರಾರು ಭಕ್ತರು ಜ್ಯೋತಿರ್ಲಿಂಗ ದರ್ಶನ ಪಡೆದರು. ಆ ನಂತರ ಬಂದಂತಹ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು.

ಈ ಸಂದರ್ಭದಲ್ಲಿ ದಿವ್ಯ ಪಾದ ಸ್ವಾಮೀಜಿ, ಅಪೂರ್ವ ಸುರೇಶ್, ರವಿಕುಮಾರ್, ವಾಸುದೇವ್ ನಾಯಕ್, ಗೋಕುಲಮ್, ಶಬರಿನಾಥ, ರೇಣದಿಲೀಪ್, ಗೌತಮ್, ಗಾಯಿತ್ರಿ, ಶೇಖರ್ ಹಾಗೂ ಆಶ್ರಮದ ಭಕ್ತಾದಿಗಳು ಹಾಜರಿದ್ದರು


ಜೆಎಸ್ಎಸ್ ಮಹಿಳಾ ವಿದ್ಯಾರ್ಥಿನಿಲಯದಲ್ಲಿ ರಾಜ್ಯ ಮಟ್ಟದ ಗ್ರಾಮೀಣ ಕ್ರೀಡಾಕೂಟ

ಮೈಸೂರು, ಮಾ.21– ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ, ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್ಎಸ್ ಮಹಿಳಾ ವಿದ್ಯಾರ್ಥಿನಿಲಯಗಳ ಸಮುಚ್ಚಯದ ವತಿಯಿಂದ ವಿವಿಧ ಜಿಲ್ಲೆಗಳ ವಸತಿ ನಿಲಯಗಳ ವಿದ್ಯಾರ್ಥಿನಿಯರಿಗೆ ಮಾ.29 ರಂದು ಬೆಳಗ್ಗೆ 9 ಗಂಟೆಗೆ ರಾಜ್ಯ ಮಟ್ಟದ ಗ್ರಾಮೀಣ ಕ್ರೀಡಾಕೂಟವನ್ನು ಏರ್ಪಡಿಸಲಾಗಿದೆ.

ಕ್ರೀಡಾ ಕೂಟದಲ್ಲಿ ಗ್ರಾಮೀಣ ಆಟಗಳಾದ ಹಗ್ಗ–ಜಗ್ಗಾಟ, ಅಳುಗುಳಿಮಣೆ, ಚೌಕಾಬಾರ, ಲಗೋರಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಕ್ರಿಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಟ್ರೋಫಿ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಮೊ:ಶ್ರೀಮತಿ ಮಮತಾ ಸುರೇಶ್ 9986666244, ಶ್ರೀಮತಿ ರಶ್ಮಿ.ಎ. 9738940998 ಅಥವಾ ಇಮೇಲ್: jsswomenhostel@gmail.com ಗೆ ಸಂಪರ್ಕಿಸುವಂತೆ ಕ್ರೀಡಾಕೂಟದ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬಾ ಸಾಹೇಬರ ಹಿಂದುತ್ವ ಕಥನ 'ನಾನೂ ಕಾಫಿರ' ಕೃತಿ ಇಂದು ಬಿಡುಗಡೆ



ಶ್ರೀ ಸೋಮೇಶ್ವರ ನಾಥ ಸ್ವಾಮೀಜಿ



ಶ್ರೀಮತಿ ಸಹನಾ ವಿಜಯ್‌ಕುಮಾರ್






ಮಾ.ವೆಂಕಟರಾಮ್, ಡಾ.ಸುಧಾಕರ ಹೊಸಳ್ಳಿ

ಮೈಸೂರು, ಮಾ.21– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕ, ಲೇಖಕ ಡಾ.ಸುಧಾಕರ ಹೊಸಳ್ಳಿ ಅವರ 'ನಾನೂ ಕಾಫಿರ' ಬಾಬಾ ಸಾಹೇಬರ ಹಿಂದುತ್ವ ಕಥನ ಪುಸ್ತಕ ಬಿಡುಗಡೆ ಸಮಾರಂಭ ಭಾನುವಾರ (ಮಾ.22) ಬೆಳಗ್ಗೆ 10.30ಕ್ಕೆ ಸ್ಕ್ಯಾನ್ ರೇ ಹೆಲ್ತ್ ಕೇರ್ ಸಭಾಂಗಣದಲ್ಲಿ ನಡೆಯಲಿದೆ.

ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಹಾಗೂ ಸ್ವರಾಷ್ಟ್ರ ಪ್ರಕಾಶನದ ಸಹಯೋಗದಲ್ಲಿ ಈ ಸಮಾರಂಭ ಆಯೋಜಿಸಿದ್ದು, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನಿಧ್ಯದಲ್ಲಿ ಖ್ಯಾತ ಕಾದಂಬರಿಕಾರರಾದ ಶ್ರೀಮತಿ ಸಹನಾ ವಿಜಯ್‌ಕುಮಾರ್ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಕರ್ನಾಟಕ ದಕ್ಷಿಣ ಪ್ರಾಂತದ ನಿಕಟಪೂರ್ವ ಸಂಘ ಚಾಲಕರಾದ ಮಾ.ವೆಂಕಟರಾಮ್, ಲೇಖಕ ಡಾ.ಸುಧಾಕರ ಹೊಸಳ್ಳಿ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಪ್ರಕೃತಿ ಧರ್ಮ, ಸಹಜ ನ್ಯಾಯ ಹಾಗೂ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಕಾಫಿರ ಸಿದ್ಧಾಂತದ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ 'ನಾನೂ ಕಾಫಿರ' ಸಂಶೋಧನಾ ಕೃತಿಯನ್ನು ರಚಿಸಲಾಗಿದೆ ಎಂಬುದು ಲೇಖಕರ ನುಡಿ. ವಿಭಿನ್ನತೆ



ನಡುವೆಯೂ ಸಹಬಾಳ್ವೆಯನ್ನು ನಮ್ಮ ಸಂವಿಧಾನ ಬೋಧಿಸುತ್ತದೆ. ದೇಶ ತುರ್ತು ಪರಿಸ್ಥಿತಿಯಲ್ಲಿದ್ದರೂ ಸಂವಿಧಾನವು 20 ಮತ್ತು 21ನೇ ವಿಧಿಯ ಅನುಸಾರ ನೀಡಿರುವ ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕನ್ನು ನಿರ್ಬಂಧ ಮಾಡುವಂತಿಲ್ಲ ಎಂಬ ನಿಯಮ ವಿಧಿಸಿದೆ. ಆದರೂ ಒಂದು ರಿಲಿಜಿಯನ್ ಒಪ್ಪದವರು ಬದುಕುವಂತಿಲ್ಲ ಎಂದು ಹೇಳುವ ನಿಯಮವೊಂದು ಭೂಮಿ ಮೇಲಿರುವುದೇ ಸೋಜಿಗ. ಇಂತಹ ಪರಿಸ್ಥಿತಿಯಲ್ಲಿ ಸಾಮರಸ್ಯದ ಬದುಕಿಗಾಗಿ ಹೋರಾಟ ನಡೆಸುವುದು ಅನಿವಾರ್ಯ ಎಂದು ಅವರು ಅಭಿಪ್ರಾಯಿಸಿದ್ದಾರೆ.

ಮಾ.28ರಂದು ರಾಜ್ಯಮಟ್ಟದ ಭಜನಾ ಸ್ಪರ್ಧೆ

ಮೈಸೂರು, ಮಾ.21– ಮೈಸೂರಿನ ಮಹಾರತ್ನ ಟ್ರಸ್ಟ್‌ನ ನಾಲ್ಕನೇ ವಾರ್ಷಿಕೋತ್ಸವ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ ಭಜನಾ ಸ್ಪರ್ಧೆಯನ್ನು ಮಾ.28 ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸ್ಪರ್ಧೆಯ ನಿಯಮಗಳು: ಸ್ಪರ್ಧೆಯಲ್ಲಿ 16 ವರ್ಷ ಮೇಲ್ಪಟ್ಟ ಮಹಿಳೆಯರು ಮತ್ತು ಪುರುಷರು ಭಾಗವಹಿಸಬಹುದು. ಗಾಯನದ ಅವಧಿ ಕನಿಷ್ಠ 4 ನಿಮಿಷ, ಗರಿಷ್ಠ 5 ನಿಮಿಷ. ಗಾಯನಕ್ಕೆ ಅಗತ್ಯವಾದ ವಾದ್ಯ ಪರಿಕರಗಳನ್ನು ಸ್ಪರ್ಧಿಗಳೇ ತರಬೇಕು. ಸ್ಪರ್ಧೆಯಲ್ಲಿ ಕನಿಷ್ಠ 5 ಜನ, ಗರಿಷ್ಠ 8 ಜನ ಭಾಗವಹಿಸಬಹುದು. ಭಜನಾ ಸ್ಪರ್ಧೆಯಲ್ಲಿ ಅಂಕಿತನಾಮವುಳ್ಳ ಭಕ್ತಿಗೀತೆಗಳನ್ನೇ ಹಾಡಬೇಕು. ವಿಜೇತ ತಂಡಗಳಿಗೆ ಪ್ರಥಮ ಬಹುಮಾನ 5000 ನಗದು, ಪ್ರಶಸ್ತಿ ಪತ್ರ, ದ್ವಿತೀಯ ಬಹುಮಾನ 3000 ನಗದು ಮತ್ತು ಪ್ರಶಸ್ತಿ ಪತ್ರ, ತೃತೀಯ ಬಹುಮಾನ 2000 ನಗದು ಮತ್ತು ಪ್ರಶಸ್ತಿ ಪತ್ರ ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರತಿ ತಂಡಕ್ಕೆ 500 ರೂ., ಪ್ರವೇಶ ಶುಲ್ಕವಿರುತ್ತದೆ. ಸ್ಪರ್ಧಿಗಳು ಮಾ.27ರೊಳಗೆ ತಮ್ಮ ಹೆಸರನ್ನು ನೋಂದಾಯಿಸಬೇಕು. ಹೆಚ್ಚಿನ ಮಾಹಿತಿಗೆ ಮೊ.ನಂ: 9740287860, 9141537956, 8867000188 ಮೂಲಕ ಸಂಪರ್ಕಿಸುವಂತೆ ಸ್ಪರ್ಧೆಯ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸುತ್ತೂರ ಚಿಗುರು' ಶಾಲಾ ವಾರ್ಷಿಕ ಸಂಚಿಕೆ ಬಿಡುಗಡೆ




ಸುತ್ತೂರು ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ 2025–26 ನೇ ಶೈಕ್ಷಣಿಕ ಸಾಲಿನ ಸುತ್ತೂರ ಚಿಗುರು ಶಾಲಾ ವಾರ್ಷಿಕ ಸಂಚಿಕೆಯನ್ನು ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ. ಉದಯಶಂಕರ್ ಬಿಡುಗಡೆ ಮಾಡಿದರು. ಈ ವೇಳೆ ಸಹಾಯಕ ಆಡಳಿತಾಧಿಕಾರಿ ಜಿ.ಎಲ್. ತ್ರಿಪುರಾಂತಕ, ಸಹಾಯಕ ಸಂಯೋಜನಾಧಿಕಾರಿ ವೀರಭದ್ರಯ್ಯ, ವಿವಿಧ ವಿಭಾಗಗಳ ಮುಖ್ಯಸ್ಥರು, ಶಾಲಾ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೈಸೂರು ಅರಮನೆ ಆವರಣದ ಯುಗಾದಿ ಸಂಗೀತೋತ್ಸವದಲ್ಲಿ ವಿಶೇಷ ಗಾಯನ ಮೋಡಿ

ಶಾಸ್ತ್ರೀಯ, ಸುಗಮ, ಭಕ್ತಿ ಗೀತೆಗಳ ಗಾನಸುಧೆ



ಅರಮನೆ ಅಂಗಳದಲ್ಲಿ ಅಂಕಿತಾ ಕುಂಡು ಹಾಗೂ ಅಶ್ವಿನ್ ಶರ್ಮಾ ಜುಗಲ್ ಬಂದಿ ಪ್ರೇಕ್ಷಕರ ಮೋಡಿ ಮಾಡಿತು.



ಪ್ರೊ.ಸಿ.ಎ.ಶ್ರೀಧರ ಅವರು 'ಕರ್ನಾಟಕ ಶಾಸ್ತ್ರೀಯ ಸಂಗೀತ ವೇಣುತ್ರಯ ಕಚೇರಿ'ಯಲ್ಲಿ ಮೋಡಿ ಮಾಡಿದರು.

ಮೈಸೂರು, ಮಾ.21(ವಿವಿಹೆಚ್)– ಮೈಸೂರು ನಗರದ ಐತಿಹಾಸಿಕ ವೈಭವವನ್ನು ಪ್ರತಿಬಿಂಬಿಸುವ ಮೈಸೂರು ಅರಮನೆ ಆವರಣದಲ್ಲಿ ನಡೆದ ಸಂಗೀತ ರಸಸಂಜೆ ಕಾರ್ಯಕ್ರಮವು ಸಂಗೀತಾಸಕ್ತರ ಮನಸ್ಸನ್ನು ಮಂತ್ರಮುಗ್ಧಗೊಳಿಸಿತು. ಈ ವಿಶೇಷ ಸಂಧ್ಯೆಯಲ್ಲಿ ವಿವಿಧ ಪ್ರಕಾರಗಳ ಸಂಗೀತವನ್ನು ಸಂಯೋಜಿಸಿದ ಗಾಯನ ಕಾರ್ಯಕ್ರಮಗಳು ನಡೆದು, ಪ್ರೇಕ್ಷಕರು ಸಂಗೀತದ ಮೋಡಿಯಲ್ಲಿ ತೇಲುವಂತೆ ಮಾಡಿತು.

ಮೈಸೂರು ಅರಮನೆ ಮಂಡಳಿ ವತಿಯಿಂದ ಅರಮನೆ ಆವರಣದಲ್ಲಿ ಆಯೋಜಿಸಲಾಗಿದ್ದ ಯುಗಾದಿ ಸಂಗೀತೋತ್ಸವ ಶ್ರೀ ಪರಾಭವ ಸಂವತ್ಸರ–2026ರ ಅಂತಿಮ ದಿನವಾದ ಶನಿವಾರ ವಿವಿಧ ಕಲಾ ಪ್ರಕಾರಗಳ ಪ್ರದರ್ಶನಕ್ಕೆ ಪ್ರೇಕ್ಷಕ ಮಹೋದಯರು ಬಹುಪರಾಕ್ ಎಂದರು.

ಝೀ ಕನ್ನಡ ವಾಹಿನಿಯ ಪ್ರಸಿದ್ಧ ಗಾಯಕರು ತಮ್ಮ ಸುಮಧುರ ಕಂಠದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ ಮತ್ತು ಭಕ್ತಿಗೀತೆಗಳನ್ನು ಮೇಳೈಸಿದರು. ವೇದಿಕೆಯಲ್ಲಿ ಮೂಡಿದ ಪ್ರತಿಯೊಂದು ರಾಗವೂ ಶ್ರೋತೃಗಳ ಮನಸ್ಸಿಗೆ ಸ್ಪರ್ಶಿಸಿ, ಅವರಿಂದ ಜೋರಾದ ಚಪ್ಪಾಳೆಗಳನ್ನು ಗಳಿಸಿತು. ವಿಶೇಷವಾಗಿ ಯುವ ಗಾಯಕ–ಗಾಯಕಿಯರಿಂದಲೇ ನಡೆದ ಈ ಪ್ರದರ್ಶನವು ಎಲ್ಲರ ಗಮನ ಸೆಳೆಯಿತು.

ಆದಿ ಶಂಕರಾಚಾರ್ಯರ ರಚಿತ ಕಾಲಭೈರವ ಹಾಡಿನೊಂದಿಗೆ ಪ್ರಾರಂಭವಾದ ರಸಸಂಜೆ ಕಾರ್ಯಕ್ರಮದಲ್ಲಿ ಯುವ ಹಾಡುಗಾರರ ಧ್ವನಿ ಮೋಡಿ ಮಾಡಿತು. ಯುವ ಗಾಯಕಿ ಅಂಕಿತಾ ಕುಂದು ಅವರಿಂದ 'ಕೇಳಿಸದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ' ಗೀತೆ ಮೂಡಿಬಂದರೆ, ಅಶ್ವಿನ್ ಶರ್ಮಾ ಅವರಿಂದ ರಾಬರ್ಟ್ ಚಿತ್ರದ 'ಜೈ ಶ್ರೀ ರಾಮ್' ಎಲ್ಲರಲ್ಲಿ ಭಕ್ತಿ ಭಾವ ಮೂಡಿಸಿತು. ಶಿವಾನಿ 'ಶಿವೋಹಂ' ಗೀತೆ ಪ್ರಸ್ತುತ ಪಡಿಸುವ ಮೂಲಕ ಎಲ್ಲರನ್ನೂ ಶಿವನ ಧ್ಯಾನದಲ್ಲಿ ತೇಲುವಂತೆ ಮಾಡಿದರು.

ಅನಿರುದ್ ಶಾಸ್ತ್ರಿ 'ಧರಣಿ ಮಂಡಲ ಮಧ್ಯದಲಿ' ಗೀತೆ ಹಾಡಿ ಎಲ್ಲರನ್ನು ರಂಜಿಸಿದರು. ಇವರೊಂದಿಗೆ ಸುನೀಲ್, ಅರ್ಚನಾ ಧನಿಗೂಡಿಸಿದರು. ಸತತ ಒಂದೂವರೆ ಗಂಟೆ ತಮ್ಮ ಗಾಯನದ ಮೂಲಕ ನೆರೆದಿದ್ದವರನ್ನು ರಂಜಿಸಿದರು. ಇದಕ್ಕೂ ಮುನ್ನಾ ವಿದೂಷಿ ಚಾಂದಿನಿ ಮನೋಜ್ ಮತ್ತು ತಂಡ ಹಾಗೂ ನೃತ್ಯ ಸಂಸ್ಕೃತಿ ನಾಟ್ಯ ಶಾಲೆ ವತಿಯಿಂದ ಅರ್ಧಂ ಶಿವಮಯಂ ನೃತ್ಯ ರೂಪಕ ಪ್ರದರ್ಶಿಸಿದರು. ಬಳಿಕ ವಿದ್ವಾನ್ ಎಂ.ತ್ಯಾಗರಾಜು ಮತ್ತು ತಂಡದವರಿಂದ ಕರ್ನಾಟಕ ಶೈಲಿಯಲ್ಲಿ 'ಸಂತೂರ್ ವಾದನ' ಕೊನೆಯಲ್ಲಿ ಗಾನಕಲಾಭೂಷಣ ಪ್ರೊ.ಸಿ.ಎ.ಶ್ರೀಧರ, ವಿದೂಷಿ ಸಿ.ಎಸ್.ಕಲ್ಯಾಣಿ ವಿದ್ವಾನ್ ಸಿ.ಎಸ್. ಕೇಶವಚಂದ್ರ ಮತ್ತು ತಂಡದವರಿಂದ 'ಕರ್ನಾಟಕ ಶಾಸ್ತ್ರೀಯ ಸಂಗೀತ ವೇಣುತ್ರಯ ಕಚೇರಿ' ಕಾರ್ಯಕ್ರಮ ಪ್ರಸ್ತುತಪಡಿಸಲಾಯಿತು.

ಮತ್ತೊಂದೆಡೆ, ಅರಮನೆಗೆ ಅಳವಡಿಸಲಾಗಿರುವ ವಿದ್ಯುತ್ ಬೆಳಕು ಕಾರ್ಯಕ್ರಮಕ್ಕೆ ಇನ್ನಷ್ಟು ಮೆರುಗು ನೀಡಿತು. ತಂಪಾದ ಗಾಳಿ ಮತ್ತು ನೈಸರ್ಗಿಕ ವಾತಾವರಣದಲ್ಲಿ ಸಂಗೀತದ ಸ್ವರಗಳು ಹರಿದಾಡುತ್ತಿದ್ದಂತೆ, ಪ್ರೇಕ್ಷಕರು ಕ್ಷಣಕಾಲ ತಮ್ಮ ದಿನನಿತ್ಯದ ಒತ್ತಡವನ್ನು ಮರೆತು ಆನಂದದಲ್ಲಿ ಮುಳುಗಿದರು.

ಸಂಗೀತಾಸಕ್ತರು ಮಾತ್ರವಲ್ಲದೆ ಪ್ರವಾಸಿಗರೂ ಸಹ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮೈಸೂರು ಸಂಸ್ಕೃತಿ ಮತ್ತು ಕಲೆಯನ್ನು ಸವಿದರು. ಕುಟುಂಬ ಸಮೇತರಾಗಿ ಆಗಮಿಸಿದವರು ಈ ಸಂಜೆಯನ್ನು ಸ್ಮರಣೀಯ ಕ್ಷಣವನ್ನಾಗಿ ಮಾಡಿಕೊಂಡರು.

ಇಂದು ಮೈಸೂರಲ್ಲಿ 'ಸೂರ್ಯನ ಕುದುರೆ' ನಾಟಕ

ಮೈಸೂರು, ಮಾ.21(ಜಿಎ)– ಪರಿವರ್ತನ ರಂಗ ಸಮಾಜವು ರಮಾಗೋವಿಂದ ರಂಗಮಂದಿರದಲ್ಲಿ ಮಾ.22 ರಂದು ಸಂಜೆ 7 ಗಂಟೆಗೆ 'ಸೂರ್ಯನ ಕುದುರೆ' ಕನ್ನಡ ನಾಟಕ ಪ್ರದರ್ಶನ ಆಯೋಜಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಮಾಧವಖರೆ ಈ ವಿಷಯ ತಿಳಿಸಿ, ಡಾ.ಯು.ಆರ್.ಅನಂತಮೂರ್ತಿ ಬರೆದ ಕಥೆಯನ್ನು, ಸತ್ಯ ನಾರಾಯಣರಾವ್ ರಂಗ ಪಠ್ಯಕ್ಕೆ ಇಳಿಸಿದ್ದಾರೆ.

ನಾಟಕವನ್ನು ರವಿಕುಮಾರ್ ನಿರ್ದೇಶಿಸಿದ್ದಾರೆ. 8 ಜನ ಕಲಾವಿದರು ಭಾಗವಹಿಸಲಿದ್ದಾರೆ. 100 ರೂ. ಪ್ರವೇಶ ದರ ನಿಗದಿಪಡಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಕರ್ನಲ್ ಬಿ.ಎಸ್. ಸತೀಶ್, ನಿರ್ದೇಶಕ ರವಿಕುಮಾರ್, ನಟರಾದ ರವಿತೇಜ, ಸುಮಾ ಪ್ರಶಾಂತ್, ಐ.ಜಿ.ನರಸಿಂಹನ್ ಉಪಸ್ಥಿತರಿದ್ದರು.

ಸಾಲುಸಾಲು ರಜೆ ಇದ್ದರೂ ಮೈಸೂರಿನತ್ತ ಮುಖ ಮಾಡದ ಪ್ರವಾಸಿಗರು!



ಮೈಸೂರು ಅರಮನೆ ಆವರಣದಲ್ಲಿ ಪರಾಭವ ಸಂವತ್ಸರ–2026ರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಸಾಂಪ್ರದಾಯಿಕ ಕಲಾಪ್ರೇಕ್ಷಕರು.

ಮೈಸೂರು, ಮಾ.21(ಎಸ್‌ಪಿಎನ್)– ಯುಗಾದಿ ಹಾಗೂ ರಂಜಾನ್ ಹಬ್ಬ ಸೇರಿದಂತೆ ಸಾಲು ಸಾಲು ರಜೆಯಿದ್ದರೂ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆಯಲ್ಲಿ ಏರಿಕೆ ಕಂಡಿಲ್ಲ. ಕಾರಣ ಗಲ್ಫ್ ಯುದ್ಧದ ಹಿನ್ನೆಲೆ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆ ಇದೀಗ ತಾನೆ ಮುಗಿದಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕಳೆದ ಬುಧವಾರದಿಂದ ಆರಂಭವಾಗಿರುವ ಹಿನ್ನೆಲೆಯಲ್ಲಿ ಪ್ರವಾಸಿಗರು ಮೈಸೂರಿನತ್ತ ಮುಖಮಾಡುವ ಮನಸ್ಸು ಮಾಡುತ್ತಿಲ್ಲ.

ಮೈಸೂರು ಅರಮನೆಯಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಪರಾಭವ ಸಂವತ್ಸರ–2026ರ ಕಾರ್ಯಕ್ರಮದ ಆಯೋಜನೆ ಇದ್ದಾಗ್ಯೂ ಸಾಂಪ್ರದಾಯಿಕ ಕಲಾ ಪ್ರೇಕ್ಷಕರು ಈ ಕಾರ್ಯಕ್ರಮ ವೀಕ್ಷಣೆಗೆ ಬರುತ್ತಾರೆ. ಆದರೆ, ಕುಟುಂಬ ಸಮೇತ ದೇಶಾದ್ಯಂತ ವಿವಿಧ ರಾಜ್ಯದ ಪ್ರವಾಸಿಗರು ಮೈಸೂರಿಗೆ ಇನ್ನು ಆಗಮಿಸುತ್ತಿಲ್ಲ ಹಾಗೂ ಏಪ್ರಿಲ್ 10ರ ಬಳಿಕ ಪ್ರವಾಸಿಗರು ಪ್ರವಾಸಿತಾಣಗಳತ್ತ ಧಾವಿಸುವ ಭರವಸೆಯಿದೆ ಎನ್ನುತ್ತಾರೆ ಬೀದಿಬದಿ ವ್ಯಾಪಾರಿ ಸುರೇಶ್.

ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದ ಹಿನ್ನೆಲೆಯಲ್ಲಿ ಇಂಧನ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮಧ್ಯಮ ವರ್ಗದ ಪ್ರವಾಸಿಗರು ಬೇಸಿಗೆ ರಜಾ ದಿನದಲ್ಲಿ ಪ್ರವಾಸ ಮಾಡುವುದನ್ನು ಮುಂದೂಡಲೂಬಹುದು. ಒಟ್ಟಿನಲ್ಲಿ ಒಂದಿಲ್ಲೊಂದು ಕಾರಣಕ್ಕೆ ಪ್ರವಾಸೋದ್ಯಮವನ್ನೇ ಅವಲಂಭಿಸಿರುವ ಮೈಸೂರಿನ ವ್ಯಾಪಾರಿಗಳು, ರಸ್ತೆಬದಿ ವ್ಯಾಪಾರಿಗಳು, ಹೋಟೆಲ್ ಮಾಲೀಕರು ಸೇರಿದಂತೆ ಇತರೆ ವ್ಯಾಪಾರಿ ವರ್ಗಕ್ಕೆ ಈ ಬಾರಿಯ ವ್ಯಾಪಾರ ಅಷ್ಟಕಷ್ಟೇ ಎನ್ನುವ ಲಕ್ಷಣಗಳು ಗೋಚರಿಸುತ್ತಿವೆ ಎಂದರು.

ಪ್ರತಿ ವರ್ಷ ಮಮೂಲಿನಂತೆ ಏ.10ರ ನಂತರ ಪ್ರವಾಸಿಗರು ಕುಟುಂಬ ಸಮೇತ ಮೈಸೂರಿಗೆ ಆಗಮಿಸುತ್ತಾರೆ. ಈಗ ನಾನಾ ಕಾರಣಗಳಿಂದಾಗಿ ಸಾಲುಸಾಲು ರಜೆಯಿದ್ದರೂ ಮೈಸೂರಿಗೆ ಪ್ರವಾಸಿಗರ ಆಗಮನದಲ್ಲಿ ವಿರಳವಿದೆ ಎನ್ನುತ್ತಾರೆ ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ.

ನ್ಯಾಯಾಧೀಶರಾಗಿ ಆಯ್ಕೆಯಾಗಿರುವ ರಮ್ಯಾರಿಗೆ ಅಭಿನಂದನೆ

ಮೈಸೂರು, ಮಾ. 21– ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಕಿರಗುಂದ ಗ್ರಾಮದ ರಾಜೇಂದ್ರ ಪ್ರಸಾದ್ (ಜಾನಪದ ಕಲಾವಿದರು) ಪಾರ್ವತಮ್ಮ ದಂಪತಿ ಮಗಳಾದ ರಮ್ಯಾ, ಗ್ರಾಮೀಣ ಕುಟುಂಬದಲ್ಲಿ ಜನಿಸಿ ಬಾಲ್ಯದಿಂದಲೇ ವಿದ್ಯಾಭ್ಯಾಸದತ್ತ ಹೆಚ್ಚಿನ ಆಸಕ್ತಿ ತೋರಿದವರು. ಪ್ರಾಥಮಿಕ ಶಿಕ್ಷಣವನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಿರುಗುಂದ ಮತ್ತು ಪ್ರೌಢಶಿಕ್ಷಣವನ್ನು ಶ್ರೀ ಮೊರಾರ್ಜಿ ದೇಸಾಯಿ ರೆಸಿಡೆನ್ಷಿಯಲ್ ಸ್ಕೂಲ್, ಹೊಸಕೋಟೆ, ಪಿಯುಸಿ ಮೈಸೂರಿನ ಮಹಾರಾಣಿ ಕಾಲೇಜು ಉತ್ತಮ ಸಾಧನೆಯೊಂದಿಗೆ ಪೂರ್ಣಗೊಳಿಸಿದ ಅವರು, ನಂತರ ಕಾನೂನು ಪದವಿಯನ್ನು ಮಹಾಜನ ಕಾನೂನು ಕಾಲೇಜು ಮತ್ತು LLM ಪದವಿಯನ್ನು ಮಾನಸ ಗಂಗೋತ್ರಿ ನಲ್ಲಿ ಮುಗಿಸಿ ತಾವು ನ್ಯಾಯಾಧೀಶರಾಗಬೇಕೆಂಬ ತಮ್ಮ ಗುರಿಯನ್ನು ಸ್ಪಷ್ಟವಾಗಿ ನಿರ್ಧರಿಸಿಕೊಂಡಿದ್ದರು.



ರಮ್ಯಾರನ್ನು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸನ್ಮಾನಿಸಿದರು.

ನ್ಯಾಯಾಧೀಶರಾಗಿ ಆಯ್ಕೆಯಾದ ಸಂದರ್ಭದಲ್ಲಿ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಈ ಸಾಧನೆ ಕೇವಲ ವೈಯಕ್ತಿಕ ಯಶಸ್ಸಲ್ಲ ಸಮಾಜದಲ್ಲಿನ ಎಲ್ಲಾ ಮಹಿಳೆಯರಿಗೂ ಪ್ರೇರಣೆಯಾಗಿದೆ. ಮಹಿಳೆಯರು ಯಾವ ಕ್ಷೇತ್ರದಲ್ಲಾದರೂ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಬಹುದು ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ. ವಿಶೇಷವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿನಿಯರಿಗೆ ಇದು ಒಂದು ಮಾದರಿಯಾಗಿದೆ ಎಂದು ಹೇಳಿದರು. ಶಿಕ್ಷಕರು ಮತ್ತು ಉಪನ್ಯಾಸಕರ ಸಲಹೆ, ಮಾರ್ಗದರ್ಶನ ಈ ಹಂತ ತಲುಪಲು ಸಾಧ್ಯ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಸಿ.ಆರ್.ದಿನೇಶ್ ಮಾತನಾಡಿ, ಇಂತಹ ಸಾಧನೆಗಳು ಸಮಾಜದಲ್ಲಿ ಮಹಿಳಾ ಸಬಲೀಕರಣಕ್ಕೆ ಬಲ ತುಂಬುತ್ತವೆ. ಯುವತಿಯರು ಉನ್ನತ ಹುದ್ದೆಗಳನ್ನು ಅಲಂಕರಿಸುವ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಸಾಧ್ಯ ಎಂದು ಹೇಳಿದರು.

ನ್ಯಾಯಾಂಗ ಕ್ಷೇತ್ರದಲ್ಲಿ ಮಹಿಳೆಯರ ಪ್ರಮಾಣ ಹೆಚ್ಚುತ್ತಿರುವುದು ಸಮಾನತೆಯ ದಿಕ್ಕಿನಲ್ಲಿ ದೊಡ್ಡ ಹೆಜ್ಜೆಯಾಗಿದೆ. ರಮ್ಯಾ ಅವರ ಈ ಸಾಧನೆ ನ್ಯಾಯ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರವನ್ನು ಮತ್ತಷ್ಟು ಬಲ ಪಡಿಸುವಂತಹಾಗಿದೆ ಎಂದು ಹೇಳಿದರು.

ಕಾಲೇಜಿನ ಉಪನ್ಯಾಸಕರಾದ ಡಾ.ಕೆ. ಮಾಲತಿ, ಡಾ.ಟಿ.ಕೆ.ರವಿ, ರೂಪ, ಮೀನಾ, ಬಿ.ಎಸ್ ನಾಗರಾಜ, ರವೀಂದ್ರಕುಮಾರ್, ಸುಭಾಷ್ ಮತ್ತು ಸಿಬ್ಬಂದಿ ವರ್ಗದವರು ಅವರಿಗೆ ಅಭಿನಂದನೆ ಸಲ್ಲಿಸಿ, ಅವರ ಮುಂದಿನ ಸೇವಾ ಅವಧಿ ಯಶಸ್ವಿಯಾಗಲಿ ಎಂದು ಹಾರೈಸಿದ್ದಾರೆ.

ಶಾಲಾ ದಾಖಲಾತಿಗೆ ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ನಜರ್‌ಬಾದ್‌ನ ಪೀಪಲ್ಸ್ ಪಾರ್ಕ್ ಬಳಿಯಿರುವ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ 2026–27ನೇ ಸಾಲಿನ 8, 9 ಹಾಗೂ 10ನೇ ತರಗತಿಯ ಕನ್ನಡ ಹಾಗೂ ಆಂಗ್ಲ ಮಾಧ್ಯಮಗಳ ದಾಖಲಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಶಾಲೆಯು ಬಾಲಕಿಯರಿಗೆ ಮಾತ್ರ ಪ್ರವೇಶಾತಿ ನೀಡುತ್ತಿದ್ದು, ದಾಖಲಾತಿಯು ಸಂಪೂರ್ಣ ಉಚಿತವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊ:9448788102 ಮೂಲಕ ಸಂಪರ್ಕಿಸುವಂತೆ ಶಾಲೆಯ ಉಪ ಪ್ರಾಂಶುಪಾಲ ಬಿ.ಮಲ್ಲಿಕಾರ್ಜುನಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳನ್ನು ರೂಪಿಸುತ್ತವೆ

ಏಮ್ ಹೈ ಕನ್ಸಲ್ಟಿಂಗ್ ಸಂಸ್ಥೆ ಮುಖ್ಯ ಕಾರ್ಯನಿರ್ವಾಹಕ ಎನ್. ರವಿಶಂಕರ್ ಅಭಿಮತ

ಮೈಸೂರು, ಮಾ. 21– ಇಂದಿನ ಆಧುನಿಕ ಸಂದರ್ಭದಲ್ಲಿ ವಿದ್ಯಾರ್ಥಿಗಳು ಕಲಿಕೆಯ ಅವಧಿಯಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಳ್ಳಬೇಕು. ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಹೊಸತನವನ್ನು ರೂಪಿಸಲು ಸಹಾಯಕವಾಗುತ್ತವೆ. ಸೃಜನಶೀಲತೆಯನ್ನು ಬೆಳೆಸುವುದರ ಜೊತೆಗೆ ಅವರಲ್ಲಿ ಕ್ರಿಯಾಶೀಲ ಮನೋಭಾವವು ಮೂಡಲು ಹಾಗೂ ಕೌಶಲ್ಯಗಳನ್ನು ರೂಪಿಸಿಕೊಳ್ಳಲು ಇವು ನೆರವಾಗುತ್ತವೆ ಎಂದು ಏಮ್ ಹೈ ಕನ್ಸಲ್ಟಿಂಗ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಎನ್. ರವಿಶಂಕರ್ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಜೆಎಸ್‌ಎಸ್ ಶೈಕ್ಷಣಿಕ ಹಬ್ಬ ಜ್ಞಾನ ಪರ್ವ 2026ರ ಲಾಂಛನ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದು ವಿಜ್ಞಾನ ಮತ್ತು ತಂತ್ರಜ್ಞಾನವು ಸಮಕಾಲೀನ ಸಂದರ್ಭಕ್ಕೆ ಅನುಗುಣವಾಗಿ ಶರವೇಗದಲ್ಲಿ ಬದಲಾಗುತ್ತಿದೆ. ವಿದ್ಯಾರ್ಥಿಗಳು ಕಾಲೇಜು ಶಿಕ್ಷಣದ ಹಂತದಲ್ಲಿ ಕೇವಲ ಅಂಕಪಟ್ಟಿ ಆಧಾರಿತ ಕಲಿಕೆಗಷ್ಟೇ ಸೀಮಿತವಾದರೆ ಸಾಲದು. ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳ ಜ್ಞಾನವನ್ನು ವಿಸ್ತರಿಸುತ್ತವೆ. ವಿದ್ಯಾರ್ಥಿಗಳು ಇಂದಿನ ಜಗತ್ತಿಗೆ ಅನುಗುಣವಾದ ಅನೇಕ ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕು.



ಜೆಎಸ್‌ಎಸ್ ಶೈಕ್ಷಣಿಕ ಹಬ್ಬ ಜ್ಞಾನ ಪರ್ವ ಲಾಂಛನವನ್ನು ಗಣ್ಯರು ಬಿಡುಗಡೆ ಮಾಡಿದರು.

ಕಲಿಕೆಯ ಹಿಂದೆ ಇರುವ ಉದ್ದೇಶ ಸ್ಪಷ್ಟವಾಗಿರಬೇಕು. ಇಂದಿನ ಹೊಸ ವೃತ್ತಿಗಳು, ಹೊಸ ಹೊಸ ಅವಕಾಶಗಳು ನಮ್ಮಿಂದ ಹೊಸ ಕಲಿಕೆಯನ್ನು ಬೇಡುತ್ತವೆ. ಕಾಲೇಜಿನಲ್ಲಿ ನಡೆಯುವ ಇಂತಹ ಶೈಕ್ಷಣಿಕ ಹಬ್ಬಗಳು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗುತ್ತವೆ. ವಿದ್ಯಾರ್ಥಿಗಳಲ್ಲಿ ಬಹುಮುಖಿ ವ್ಯಕ್ತಿತ್ವದ ಅಗತ್ಯವಿದೆ. ಆಸಕ್ತಿ, ವಿಷಯ ಗ್ರಹಿಕೆ ಹಾಗೂ ಜ್ಞಾನ ಇವು ವಿದ್ಯಾರ್ಥಿಯ ಅಗತ್ಯ ಅಂಶಗಳು. ಅಧ್ಯಯನದ ಜೊತೆಗೆ ಸಾಮಾಜಿಕ ಸ್ಪಂದನೆ, ಸಜ್ಜನರ ಸ್ನೇಹ, ಜ್ಞಾನದ ಪರಿಧಿಯ ವಿಸ್ತರಣೆಗೆ ಇಂತಹ ಕಾರ್ಯಕ್ರಮಗಳು ಅತ್ಯವಶ್ಯಕ ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಹಾಗೂ ಕಲಾವಿದರೂ ಆದ ಶ್ರೀಮತಿ ದೀಪಾ ರವಿಶಂಕರ್ ಮಾತನಾಡಿ, ಈ ಕಾಲೇಜು ವಿದ್ಯಾರ್ಥಿಗಳ ಬಹು ಆಸಕ್ತಿಯ ಕ್ಷೇತ್ರದ ಕಡೆ ಗಮನ ಹರಿಸುತ್ತದೆ. ಇದಕ್ಕೆ ನಾನು ಕೂಡ ನಿದರ್ಶನ. ಅಧ್ಯಯನದ ಸಂದರ್ಭದಲ್ಲಿ ನಾನು ಇದರ ಸದುಪಯೋಗ ಪಡೆದುಕೊಂಡಿದ್ದೇನೆ. ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಹೊರ ಜಗತ್ತಿನ ಅರಿವು ಅತ್ಯಂತ ಅಗತ್ಯವಾದ ಅಂಶಗಳಲ್ಲಿ ಒಂದು. ಕಾಲೇಜು ಇದಕ್ಕೆ ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಕಾಲೇಜಿನ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಕಾಲೇಜಿನಲ್ಲಿ ನಡೆಯುವ ಇಂತಹ ಶೈಕ್ಷಣಿಕ ಹಬ್ಬಗಳು ವಿದ್ಯಾರ್ಥಿಗಳನ್ನು ತಮ್ಮ ಆಸಕ್ತಿಗಳಿಗೆ ಅನುಗುಣವಾಗಿ ರೂಪಿಸಿಕೊಳ್ಳಲು ನೆರವಾಗುತ್ತವೆ ಎಂದರು.

ಗೌರವ ಅತಿಥಿಗಳಾಗಿ ಉಪಸ್ಥಿತರಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಂ. ಪ್ರಭು, ಶೈಕ್ಷಣಿಕ ಜ್ಞಾನಪರ್ವ ಕೇವಲ ಶೈಕ್ಷಣಿಕ ಜ್ಞಾನಕ್ಕಷ್ಟೇ ಪೂರಕವಾದುದಲ್ಲ. ಇದು ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ಪೂರಕವಾಗಿ ಗುರಿಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳು ಜ್ಞಾನಾರ್ಜನೆಯ ಜೊತೆಗೆ ಹೊರ ಜಗತ್ತಿಗೆ ತಮ್ಮನ್ನು ತೆರೆದುಕೊಳ್ಳಲು ಹಾಗೂ ಅರಿವನ್ನು ವಿಸ್ತರಿಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಅಗತ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಮಾತನಾಡಿ, ಕಾಲೇಜಿನಲ್ಲಿ ಇಂದು ಬಿಡುಗಡೆಯಾಗುತ್ತಿರುವ ಈ ಶೈಕ್ಷಣಿಕ ಹಬ್ಬದ ಲಾಂಛನವು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಸಂಸ್ಥೆಯು ಒಳಗೊಂಡಿರುವ ಪ್ರಧಾನ ಧ್ಯೇಯಗಳನ್ನು ಒಳಗೊಂಡಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಆಧಾರಿತವಾದ ಜ್ಞಾನ ಸಾಲದು. ವಿದ್ಯಾರ್ಥಿಗಳು ಹೊರಜಗತ್ತಿನ ಸಮಕಾಲೀನ ಸವಾಲುಗಳು, ಅಗತ್ಯತೆಗಳನ್ನು ಅರಿಯಬೇಕು. ಬಹುಮುಖಿಯಾದ ಅಗತ್ಯ ಜ್ಞಾನ ಸಂಪಾದನೆ ವಿದ್ಯಾರ್ಥಿಗಳ ಗುರಿಯಾಗಬೇಕು. ನಮ್ಮ ಕಾಲೇಜು ಆರಂಭಿಕ ದಿನಗಳಿಂದಲೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇವತ್ತಿನ ಈ ಕಾರ್ಯಕ್ರಮವೂ ಕೂಡ ಇದಕ್ಕೆ ನಿದರ್ಶನವಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ನಮ್ಮ ಕಾಲೇಜಿನ ಹಿರಿಯ ವಿದ್ಯಾರ್ಥಿಗಳಾದ ಎನ್. ರವಿಶಂಕರ್ ಹಾಗೂ ಶ್ರೀಮತಿ ದೀಪಾ ರವಿಶಂಕರ್ ಅವರು ನಿಮಗೆ ಪ್ರೇರಣೆ ಎಂದು ಹೇಳಿದರು.

ಮೈಸೂರು ಮಿತ್ರ ಭಾನುವಾರ 22 ಮಾರ್ಚ್ 2026

ಮಾದನಾಯಕನಹಳ್ಳಿ ಗ್ರಾಮದಲ್ಲಿ ಚಿರತೆ ದಾಳಿಗೆ ಏಳು ಕುರಿಗಳ ಬಲಿ


ಮದ್ದೂರು, ಮಾ.21–ಚಿರತೆ ದಾಳಿ ಮಾಡಿ 7 ಕುರಿಗಳನ್ನು ಬಲಿ ಪಡೆದಿರುವ ಘಟನೆ ತಾಲೂಕಿನ ಮಾದನಾಯಕನಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.



ಗ್ರಾಮದ ಪವಿತ್ರಗುಂಡ ದಂಪತಿಗೆ ಸೇರಿದ್ದ ಕುರಿಗಳಾಗಿದ್ದು, ಗ್ರಾಮದ ಹೊರ ವಲಯದಲ್ಲಿದ್ದ ಕೊಟ್ಟಿಗೆಯಲ್ಲಿ ಕೂಡಿ ಹಾಕಿದ್ದ ಕುರಿಮಂದೆ ಮೇಲೆ ದಾಳಿ ಮಾಡಿ 5 ಕುರಿಗಳು ಸ್ಥಳದಲ್ಲಿಯೇ ಬಲಿಯಾದರೆ, ಇನ್ನೆರೆಡು ಆಡುಗಳನ್ನು ಹೊರಗೆ ಎಳೆ ದೊಯ್ದು ಕೊಂದಿದೆ. ಕೊಟ್ಟಿಗೆಯ ಸುತ್ತ ದೊಡ್ಡ ಕಾಂಪೌಂಡ್ ಹಾಕಿದ್ದರೂ ಚಿರತೆ ಕಾಂಪೌಂಡ್ ಹಾರಿ ಬಂದಿರುವುದು ಆಶ್ಚರ್ಯವೆನಿಸಿದೆ. ಘಟನೆಯಿಂದ ಸುಮಾರು 1.50 ಲಕ್ಷ ರೂ. ನಷ್ಟ ಉಂಟಾಗಿದ್ದು ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವಂತೆ ರೈತ ದಂಪತಿ ಮನವಿ ಮಾಡಿದ್ದಾರೆ.

ಮಾದನಾಯಕನಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಚಿರತೆ ಉಪಟಳ ಹೆಚ್ಚಾಗಿರುವ ಕಾರಣ ರಾತ್ರಿಯ ವೇಳೆಯಲ್ಲಿ ರೈತರು ಜಮೀನುಗಳ ಬಳಿ ಹೋಗಲು ಆತಂಕ ಪಡುವ ಸ್ಥಿತಿ ನಿರ್ಮಾಣವಾಗಿದೆ ಹಾಗೂ ಚಿರತೆಗಳು ಜಾನುವಾರುಗಳ ಮೇಲೆ ದಾಳಿ ಮಾಡುತ್ತಿರುವುದರಿಂದ ರೈತರಿಗೆ ಆರ್ಥಿಕ ಸಂಕಷ್ಟ ಉಂಟಾಗಿದ್ದರೂ ಚಿರತೆ ಹಾವಳಿ ನಿಯಂತ್ರಿಸಲು ಅರಣ್ಯಾಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಗ್ರಾಮಸ್ಥರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಶೀಘ್ರವಾಗಿ ಚಿರತೆ ಉಪಟಳ ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಂಡು ರೈತರಿಗೆ ಹಾಗೂ ಗ್ರಾಮಸ್ಥರಿಗೆ ಅನುಕೂಲ ಕಲ್ಪಿಸಬೇಕೆಂದು ರೈತ ಮುಖಂಡ ದೇವರಾಜು ಆಗ್ರಹ ಪಡಿಸಿದ್ದಾರೆ.

ಚೆಲುವನಾರಾಯಣಸ್ವಾಮಿ ದೀಪಾರಾಧನೆ; ರಮಣೀಯ ದೃಶ್ಯ



ಮೇಲುಕೋಟೆ, ಮಾ.21–ಶ್ರೀಪರಾಭವ ಸಂವತ್ಸರದ ವೈರಮುಡಿ ಬ್ರಹ್ಮೋತ್ಸವಕ್ಕೆ ಮುನ್ನುಡಿಯಾಗಿ ಭವ್ಯವಾಗಿ ಅಲಂಕೃತವಾದ ತೆಪ್ಪೋತ್ಸವ ಮಂಟಪದಲ್ಲಿ ಶ್ರೀಚೆಲುವನಾರಾಯಣಸ್ವಾಮಿಗೆ ಪ್ರಥಮ ತೆಪ್ಪೋತ್ಸವ ಶನಿವಾರ ರಾತ್ರಿ ಸಂಭ್ರಮದಿಂದ ನೆರವೇರಿತು ಕಲ್ಯಾಣಿಯಲ್ಲಿ ನಡೆದ ಚೆಲುವನ ಜಲವಿಹಾರದ ವೈಭವವನ್ನು ನೂರಾರು ಭಕ್ತರು ಕಣ್ತುಂಬಿಕೊಂಡರು

ಪಾಂಡವಪುರ ಖಜಾನೆಯಿಂದ ತಂದ ಅಮೂಲ್ಯ ಮುತ್ತುಮುಡಿ ಹಾಗೂ ಮುತ್ತುಗಳ ಹಾರಗಳೊಂದಿಗೆ ಚೆಲುವನಾರಾಯಣ ಸ್ವಾಮಿಯನ್ನು ಅಲಂಕರಿಸಿ ಸಂಜೆ ವೈಭವದ ಉತ್ಸವ ನೆರವೇರಿಸಲಾಯಿತು. ನಂತರ ತೆಪ್ಪಮಂಟಪದಲ್ಲಿ ಶ್ರೀದೇವಿ–ಭೂದೇವಿ ಸಮೇತ ನಾದ ಚೆಲುವನಾರಾಯಣಸ್ವಾಮಿ ಮತ್ತು ರಾಮಾನುಜಾಚಾರ್ಯರನ್ನು ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು. ಕಲ್ಯಾಣಿಯಲ್ಲಿ ಮೂರು ಸುತ್ತು ಪ್ರದಕ್ಷಿಣೆ ನಡೆಯುವುದರೊಂದಿಗೆ ಪ್ರಥಮ ತೆಪ್ಪೋತ್ಸವ ರಾತ್ರಿ ಮುಕ್ತಾಯವಾಯಿತು.

ದೀಪಾರಾಧನೆಯ ಸೇವೆ: ಹಲವು ವರ್ಷಗಳ ನಂತರ ಚೆಲುವನಾರಾಯಣಸ್ವಾಮಿ ಪ್ರಥಮ ತೆಪ್ಪೋತ್ಸವದ ವೇಳೆ ಕಲ್ಯಾಣಿಯ ಸೋಪಾನಗಳ ಮೇಲೆ ಹಣತೆಗಳನ್ನು ಹಚ್ಚಿ ದೀಪೋತ್ಸವ ನಡೆಸಲಾಯಿತು. ವಿದ್ವಾನ್ ಶ್ರೀರಂಗು ರಾಮಪ್ರಿಯ ನೇತೃತ್ವದಲ್ಲಿ ಕೈಂಕರ್ಯಪರರು ಹಾಗೂ ನಾಗರೀಕರು ಹಣತೆಗಳನ್ನು ಹಚ್ಚಿ ಚೆಲುವನಾರಾಯಣಸ್ವಾಮಿಗೆ ದೀಪಾರಾಧನೆಯ ಸೇವೆ ಮಾಡಿದರು.

ಇಂದು ಮಂಡ್ಯದಲ್ಲಿ ಯುಗಾದಿ ಅಕ್ಷರ ಜಾತ್ರೆ

ಮಂಡ್ಯ, ಮಾ.21– ಯುಗಾದಿ ಹಬ್ಬದ ಪ್ರಯುಕ್ತ ಬೇವು–ಬೆಲ್ಲ–ಸಂಭ್ರಮದ 16ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಮಾ.22ರಂದು ನಗರದಲ್ಲಿ ನಡೆಯಲಿದೆ ಎಂದು ಡಾ.ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ ತಿಳಿಸಿದ್ದಾರೆ.

ನಗರದ ನಗರದ ಕರ್ನಾಟಕ ಸಂಘದ ಆವರಣದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಬೆಳಿಗ್ಗೆ 10.30ಕ್ಕೆ ನಡೆಯಲಿರುವ 16ನೇ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷತೆಯನ್ನು ಖ್ಯಾತ ಸಾಹಿತಿ ಸಂತೋಷ ಕುಮಾರ ಎಸ್.ಕರಹರಿ ವಹಿಸುವರು. ಮೈಸೂರು ವಲಯದ ಬಿಜೆಪಿ ಸಹ ಪ್ರಭಾರಿ ಡಾ.ಈಸಿ.ನಿಂಗರಾಜೇಗೌಡ ಉದ್ಘಾಟಿಸಲಿದ್ದು, ಕವಿ ಹಾಗೂ ಖ್ಯಾತ ವೈದ್ಯ ಡಾ.ಚಂದ್ರಶೇಖರ್ ಯುಗಾದಿ–ಸಂಭ್ರಮ ಕುರಿತು ಪ್ರಧಾನ ಭಾಷಣ ಮಾಡಲಿದ್ದಾರೆ. ಜೀಶಂಪ ಸಾಹಿತ್ಯ ವೇದಿಕೆಯ ಪೋಷಕ ನರೇಶ್ ಕೃತಿ ಬಿಡುಗಡೆ ಮಾಡಲಿದ್ದು, ವಿಮರ್ಶಕ ಮಂಗಲ ಶಿವಣ್ಣ ಕೃತಿಗಳ ಕುರಿತು ಮಾತನಾಡಲಿದ್ದಾರೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ.

ಹೊಸಪೇಟೆ ಮತ್ತು ತೋರಣಗಲ್ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಆರ್.ಯೋಗಾನಂದ ಕೆರಗೋಡು ಕನ್ನಡರತ್ನ ಪ್ರಶಸ್ತಿ ಪ್ರದಾನ ಮಾಡಲಿದ್ದು, ಕರ್ನಾಟಕ ಸೇವಾ ಭೂಷಣ ಪ್ರಶಸ್ತಿ ಪ್ರದಾನವನ್ನು ವೇದಿಕೆಯ ಹಿರಿಯ ಉಪಾಧ್ಯಕ್ಷ ಬನ್ನಂಗಾಡಿ ಸಿದ್ದಲಿಂಗಯ್ಯ ವಿತರಿಸುವರು. ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಯೋಗಾನಂದ ಕೆರಗೋಡು, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪುಸ್ತಕದ ಮನೆ ಅಂಕೇಗೌಡ, ಬಿಜೆಪಿ ಸಹ ಪ್ರಭಾರಿ ಈ.ಸಿ.ನಿಂಗರಾಜೇಗೌಡ, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ನಿವೃತ್ತ ಮುಖ್ಯ ಶಿಕ್ಷಕ ವಿ.ಎಲ್.ಬಸವರಾಜು, ಗೋಸಂರಕ್ಷಕ ಅಕ್ಷಯ್ ಆಳ್ವಾ ಅವರಿಗೆ ನಾಗರಿಕ ಅಭಿನಂದನೆ ಸಲ್ಲಿಸಲಾಗುವುದು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಪತ್ರಕರ್ತ ಚಿನಕುರಳಿ ಲೋಕೇಶ್, ಮಿರ್ಲೆ ರಂಗಸ್ವಾಮಿ, ವಿ.ಕೃಷ್ಣ ಭಾನು, ಎಸ್.ಪಿ.ಜೀವೇಂದ್ರ ಕುಮಾರ ಶಾಸ್ತ್ರಿ, ರಘುಪತಿ ತಾಮ್ಹನ್‌ಕರ್ ಅವರಿಗೆ ಕರ್ನಾಟಕ ಸೇವಾ ಭೂಷಣ ಪ್ರಶಸ್ತಿ, ರಾಜೇಶ್ವರಿ ಜಿ.ರಾಮಾಪುರ, ಸಾವಿತ್ರಿ ಉಮೇಶ್, ಎನ್.ಎನ್. ಕವಿತಾ ನಾಗತೀಹಳ್ಳಿ, ಗೀತಾ ಮಂಜೇಶ್ ರೆಡ್ಡಿ, ಶೃತಿಗೌಡ, ಡಾ.ಬುಜ್ಜಪ್ಪ, ಸೋಸಲೆ ಮಹದೇವಶೆಟ್ಟಿ, ಹೆಚ್.ಜಿ.ಶ್ರೀಧರಮೂರ್ತಿ, ಕೆ.ಜಿ.ಕಾರ್ತಿಕ್, ಕೆ.ಟಿ.ವೀರಪ್ಪ ಅವರುಗಳಿಗೆ ರಾಜ್ಯ ಮಟ್ಟದ ಕನ್ನಡರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಮಧ್ಯಾಹ್ನ ನಡೆಯಲಿರುವ ಕವಿಗೋಷ್ಠಿ ಕಾರ್ಯಕ್ರಮಕ್ಕೆ ಕವಿ ಹಾಗೂ ಕೃಷಿಕ ಬಸವರಾಜು ಐನಾಪುರ ಚಾಲನೆ ನೀಡುವರೆಂದು ಕೃಷ್ಣಸ್ವರ್ಣಸಂದ್ರ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಜಿಲ್ಲೆ ಕೃಷಿ ಭೂಮಿ ಖಾದ್ಯತೈಲ ಉತ್ಪಾದನೆಗೆ ಯೋಗ್ಯ

ಪಾಂಡವಪುರ, ಮಾ:21– ಖಾದ್ಯತೈಲ ಉತ್ಪಾದನೆಗೆ ಮಂಡ್ಯ ಜಿಲ್ಲೆಯ ಕೃಷಿ ಭೂಮಿ ಯೋಗ್ಯವಾಗಿದೆ ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದರು.



ರಾಷ್ಟ್ರೀಯ ಖಾದ್ಯತೈಲ ಅಭಿಯಾನದಡಿ ಜಿಲ್ಲಾಮಟ್ಟದ ಕಾರ್ಯಗಾರವನ್ನು ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತಸಭಾಂಗಣದಲ್ಲಿ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಜಿಲ್ಲಾಡಳಿತ, ಜಿಪಂ, ಕೃಷಿ ಇಲಾಖೆ ಮತ್ತು ಬೆಲ್ಲದ ನಾಡು ರೈತ ಉತ್ಪಾದಕರ ಕಂಪನಿಗಳ ಒಕ್ಕೂಟಗಳ ಸಹಯೋಗದಲ್ಲಿ ನಡೆದ 'ರಾಷ್ಟ್ರೀಯ ಖಾದ್ಯ ತೈಲ ಅಭಿಯಾನದಡಿ ಜಿಲ್ಲಾಮಟ್ಟದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ನಮ್ಮ ರೈತರು ಖಾದ್ಯತೈಲ ಉತ್ಪಾದನೆಯ ಕಡೆಗೆ ಹೆಚ್ಚು ಮುಖಮಾಡಬೇಕಿದೆ. ಸರಕಾರಗಳು ಸಹ ಕೃಷಿ ವಲಯವನ್ನು ಆದ್ಯತೆ ವಲಯವನ್ನಾಗಿ ರೂಪಿಸಿ ರೈತರಿಗೆ ಹೆಚ್ಚಿನ ಮಟ್ಟದಲ್ಲಿ ತಲುಪಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ಜಿಲ್ಲೆಯ ರೈತರು ಪೂರ್ವಿಕರು ಬೆಳೆಯುತ್ತಿದ್ದ ಬೆಳೆಗಳಿಗೆ ಸೀಮಿತಗೊಂಡಿರುವುದರಿಂದ ಕೃಷಿಯಲ್ಲಿ ನಷ್ಟ ಉಂಟಾಗಿ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಖಾದ್ಯತೈಲ ಉತ್ಪಾದನೆ ಮಾಡುವ ಬಗ್ಗೆ ಚಿಂತನೆ ನಡೆಸಬೇಕು, ಭೂಮಿ ಫಲವತ್ತತೆ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು. ಹಾಗಾಗಿ ಜಿಲ್ಲೆಯ ಜನರು ಬೆಳೆ ಮಾದರಿಯನ್ನು ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ಇದರಿಂದ ರೈತರು ಅಧಿಕ ಲಾಭ ಹಾಗೂ ಇಳುವರಿ ಗಳಿಸಲು ಸಾಧ್ಯವಾಗುತ್ತದೆ. ಇದರಿಂದ ರೈತರ ಆರ್ಥಿಕ ಬದುಕು ಸಹ ಬದಲಾವಣೆಗೊಳ್ಳಲಿದೆ ಎಂದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ವಿ.ಎಸ್.ಅಶೋಕ್ ಮಾತನಾಡಿದರು. ಕೃಷಿ ವಿಜ್ಞಾನಿಗಳಾದ ಡಾ.ಸೋಮಶೇಖರ್, ಡಾ.ಸುನೀಲ್ ಅವರಿಂದ ಖಾದ್ಯತೈಲದ ಬಗ್ಗೆ ಅರಿವು ಕಾರ್ಯಗಾರ ನಡೆಸಿದರು. ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಉಪ ನಿರ್ದೇಶಕ ಆರ್.ಮುನೇಗೌಡ, ಡಾ.ಭಾನುಪ್ರಕಾಶ್, ಸಹಾಯಕ ನಿರ್ದೇಶಕ ಮಂಜುನಾಥ್, ಬೆಲ್ಲದ ನಾಡು ರೈತ ಉತ್ಪಾದಕರ ಕಂಪನಿಗಳ ಒಕ್ಕೂಟ ಅಧ್ಯಕ್ಷ ಕಾರಸವಾಡಿ ಮಹದೇವು, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಕೆ.ಎನ್. ಚಂದ್ರಶೇಖರ್, ಹನುಮಂತೇಗೌಡ, ಹರೀಶ್, ಶಂಕರಲಿಂಗೇಗೌಡ, ಪುಟ್ಟಸ್ವಾಮಿ ಸೇರಿದಂತೆ ಹಲವರು ಇದ್ದರು.

ನಾಳೆ ಬಲಿದಾನ ದಿವಸದಲ್ಲಿ ಅನಂತ್‌ಕುಮಾರ್ ಹೆಗಡೆ, ಯತ್ನಾಳ್ ಭಾಗಿ

ಮಂಡ್ಯ, ಮಾ.21– ಹಿಂದುಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಬಲಿದಾನ ದಿವಸ ಕಾರ್ಯಕ್ರಮವನ್ನು ಮಾ.23ರಂದು ಸಂಜೆ 5 ಗಂಟೆಗೆ ಮದ್ದೂರು ಟೌನ್‌ನ ಹಳೆ ಬಸ್ ನಿಲ್ದಾಣದಲ್ಲಿ ಆಯೋಜಿಸಲಾಗಿದೆ ಎಂದು ಒಕ್ಕೂಟದ ಸಂಚಾಲಕ ಕೆ.ಯೋಗಾನಂದ್ ತಿಳಿಸಿದ್ದಾರೆ.

ಕಾರ್ಯಕ್ರಮಕ್ಕೂ ಮುನ್ನ ಸಂಜೆ 4 ಗಂಟೆಗೆ ತಾಲೂಕು ಕೇಂದ್ರದ ಟಿ.ಬಿ ವೃತ್ತದಿಂದ ವೇದಿಕೆಯವರೆಗೆ ಶೋಭಾಯಾತ್ರೆ ಮಾಡಲಾಗುವುದು. ಅಧ್ಯಕ್ಷತೆಯನ್ನು ವಿಶ್ವ ಒಕ್ಕಲಿಗರ ಮಠದ ಪೀಠಾಧಿಪತಿ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ವಹಿಸುವರು. ಸ್ವರ್ಣನೃಸಿಂಹದತ್ತಸಾಯಿ ಪೀಠಿಕಾ ಸೇವಾ ಟ್ರಸ್ಟ್‌ನ ಅರ್ಜುನ ಅವಧೂತರು ಪ್ರಾಸ್ತಾವಿಕವಾಗಿ ಮಾತನಾಡುವರು. ಕೇಂದ್ರದ ಮಾಜಿ ಸಚಿವ ಹಾಗೂ ಕದಂಬ ಸಮೂಹ ಸಂಸ್ಥೆಯ ಮುಖ್ಯಸ್ಥ ಅನಂತಕುಮಾರ ಹೆಗಡೆ, ಶೋಭಾಯಾತ್ರೆಗೆ ಚಾಲನೆ ನೀಡುವರು. ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಮುಖ್ಯ ಭಾಷಣಕಾರರಾಗಿ ಮಾತನಾಡುವರು.



ಬಲಿದಾನ ದಿವಸದ ಪೋಸ್ಟರನ್ನು ಗಣ್ಯರು ಬಿಡುಗಡೆ ಮಾಡಿದರು.

ವಿವೇಕವಂಶಿ ಫೌಂಡೇಷನ್ ಸ್ಥಾಪಕ ಎಸ್.ಬಿ.ನಿತ್ಯಾನಂದ ದಿಕ್ಸೂಚಿ ಭಾಷಣ ಮಾಡುವರು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಕಾರ್ಯಕ್ರಮದಲ್ಲಿ 5 ಸಾವಿರದಿಂದ 10 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ಚೌಡೇನಹಳ್ಳಿ ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಕೆ ಆರ್ ಪೇಟೆ, ಮಾ.21–ತಾಲೂಕಿನ ಅಣೆ ಚೌಡೇನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಉಮಾ ಪೂಜಾರಿ ಮಂಜೇಗೌಡ, ಉಪಾಧ್ಯಕ್ಷರಾಗಿ ದ್ರಾಕ್ಷಾಯಿಣಿ ಕೃಷ್ಣೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಚೌಡೇನಹಳ್ಳಿ ಡೇರಿಗೆ ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷೆ, ಉಪಾಧ್ಯಕ್ಷೆಯನ್ನು ಸದಸ್ಯರು ಅಭಿನಂದಿಸಿದರು.

ಸಂಘದ ಆಡಳಿತ ಮಂಡಳಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗೆ ಇಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಉಮಾ ಮಂಜೇಗೌಡ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ದ್ರಾಕ್ಷಾಯಿಣಿ ಕೃಷ್ಣೇಗೌಡ ಅವರನ್ನು ಹೊರತುಪಡಿಸಿ ಬೇರೆ ಯಾವುದೇ ನಿರ್ದೇಶಕರು ನಾಮಪತ್ರವನ್ನು ಸಲ್ಲಿಸದ ಕಾರಣ ಇವರಿಬ್ಬರೇ ಅವಿರೋಧ ಆಯ್ಕೆಯಾದರು.

ನೂತನ ಅಧ್ಯಕ್ಷೆ ಉಪಾಧ್ಯಕ್ಷೆಯನ್ನು ಸಂಘದ ನಿರ್ದೇಶಕರಾದ ಗಂಗಮ್ಮ ವೆಂಕಟೇಶ್, ಜಯಮ್ಮ ಸಣ್ಣನಂಜೇಗೌಡ, ಲಕ್ಷ್ಮಮ್ಮ ಮಂಜೇಗೌಡ, ಶಶಿಕಲಾ ರಾಮೇಗೌಡ, ಶೋಭಾ ಗೋವಿಂದೇಗೌಡ, ಲತಾ ನಿಂಗರಾಜಯ್ಯ ವೀಣಾ ರಘು, ಮೋಹನ್ ಕುಮಾರಿ ಮಂಜೇಗೌಡ ಹಾಗೂ ನಾಮಿನಿ ಸದಸ್ಯರಾದ ಅಶ್ವಿನಿ ಚಂದ್ರಶೇಖರ್ ಹಾಗೂ ಗ್ರಾಮದ ಮುಖಂಡರಾದ ಗ್ರಾಪಂ ಮಾಜಿ ಅಧ್ಯಕ್ಷ ಶಂಕರ್, ಪಿಎಲ್‌ಡಿ ಮಾಜಿ ನಿರ್ದೇಶಕ ಶಂಭು, ಗ್ರಾಪಂ ಮಾಜಿ ಅಧ್ಯಕ್ಷೆ ಧನಲಕ್ಷ್ಮೀ ಶಂಭು, ಮಾಜಿ ಸದಸ್ಯರಾದ ಶ್ರೀಶೈಲ, ರಾಜೇಗೌಡ, ಸಣ್ಣನಂಜೇಗೌಡ, ಸಿಪಿಸಿ ಕೃಷ್ಣೇಗೌಡ, ಸೊಸೈಟಿ ನಿರ್ದೇಶಕ ಪಾಪೇಗೌಡ, ಪೂಜಾರಿ ಅಣ್ಣೇಗೌಡ, ನಂಜೇಗೌಡ, ಜೆಸಿಬಿ ರವಿ, ಪರಮೇಶ್, ಶಿವರಾಂ, ಕುಮಾರ್, ಮಹಾದೇವಪ್ಪ ನಿಂಗರಾಜಯ್ಯ, ಅಂಗಡಿ ರಾಮೇಗೌಡ, ಶೇಖರ್, ಕಾಳೇಗೌಡ, ಸ್ವಾಮಿ ಮತ್ತು ಹಿರಿಯ–ಕಿರಿಯ ಮುಖಂಡರು ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಿದರು.

ನೂತನ ಅಧ್ಯಕ್ಷೆ ಉಮಾಮಂಜೇಗೌಡ ಮಾತನಾಡಿ, ಸಂಘದ ಎಲ್ಲಾ ನಿರ್ದೇಶಕರು ಹಾಗೂ ಗ್ರಾಮದ ಮುಖಂಡರು ನನ್ನನ್ನು ಸಂಘದ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿರುವುದಕ್ಕೆ ನಾನು ಎಲ್ಲರಿಗೂ ಕೃತಜ್ಞತೆಗಳು ತಿಳಿಸುತ್ತೇನೆ ನನಗೆ ಸಿಕ್ಕಿರುವ ಅಧಿಕಾರದ ಅವಧಿಯಲ್ಲಿ ಸಂಘದ ಅಭಿವೃದ್ಧಿಗೆ ಪ್ರಾಮಾಣಿಕಾಗಿ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಒಂದನೇ ಪುಟದಿಂದ

ಕನ್ನಡ ಹಾಡು ಹಂಚಿಕೊಂಡ ಮೋದಿ

ಪೋಸ್ಟ್ ಧಾರ್ಮಿಕ, ಸಾಂಸ್ಕೃತಿಕ ಮತ್ತು ಕನ್ನಡಾ ಭಿಮಾನಿಗಳ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಇದು ಕನ್ನಡಿ ಗರಿಗೆ ಮತ್ತು ಕನ್ನಡ ಚಿತ್ರರಂಗದ ಅಭಿಮಾನಿಗಳಿಗೆ ಅತ್ಯಂತ ಹೆಮ್ಮೆಯ ವಿಷಯ.

ಸಂಸದ ಯದುವೀರ್ ಒಡೆಯರ್ ಧನ್ಯವಾದ : ಜಗನ್ಮಾತೆ ಚಾಮುಂಡೇಶ್ವರಿಯ ಕುರಿತು ಕನ್ನಡದ ಭಕ್ತಿಗೀತೆಯನ್ನು ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಿಜೆಪಿ ಸಂಸದ ಯದುವೀರ್ ಒಡೆಯರ್ ಅವರು ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಯದುವೀರ್, ಜಗನ್ಮಾತೆ ಚಾಮುಂಡೇಶ್ವರಿಯ ಮೇಲಿನ ಅಚಲವಾದ ಶ್ರದ್ಧೆಯು ಭಕ್ತರಲ್ಲಿ ಅಪಾರವಾದ ಜಾಗೃತಿ ಹಾಗೂ ಅದಮ್ಯವಾದ ಚೈತನ್ಯವನ್ನು ತುಂಬುತ್ತದೆ. ತಾಯಿ ಚಾಮುಂಡೇಶ್ವರಿಯ ಕುರಿತಾದ ಅಮೋಘವಾದ ಗೀತೆಯನ್ನು ಹಂಚಿಕೊಂಡ ಪ್ರಧಾನಮಂತ್ರಿಯವರಿಗೆ ಹೃತ್ಪೂರ್ವಕ ಧನ್ಯವಾದಗಳು ಎಂದು ಹೇಳಿದ್ದಾರೆ.

ಈ ನೂತನ ಪರಾಭವ ನಾಮ ಸಂವತ್ಸರದಲ್ಲಿ ಸಮಸ್ತ ರಾಷ್ಟ್ರದ ಕ್ಷೇಮ ಹಾಗೂ ಅಭ್ಯುದಯಕ್ಕಾಗಿ ಆ ಜಗನ್ಮಾತೆಯಲ್ಲಿ ಪ್ರಾರ್ಥಿಸುತ್ತೇನೆ ಎಂದು ಅವರು ತಿಳಿಸಿದ್ದಾರೆ. ಮೈಸೂರು ಆರಾಧ್ಯ ದೇವತೆ ಚಾಮುಂಡೇಶ್ವರಿ ಕುರಿತಾಗಿ ಪ್ರಧಾನಿ ಮೋದಿ ಹಂಚಿಕೊಂಡಿರುವ ಈ ಭಕ್ತಿಗೀತೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಗಮನ ಸೆಳೆದಿದ್ದು, ಹಲವಾರು ಗಣ್ಯರು ಮತ್ತು ಭಕ್ತರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದಾರೆ.

ಇರಾನ್ ಕ್ಷಿಪಣಿ ದಾಳಿ

ಅಧಿಕಾರಿಗಳು ತಳ್ಳಿಹಾಕಿದ್ದರು ಎಂದು ಅಧಿಕಾರಿಗಳ ಹೇಳಿಕೆ ಉಲ್ಲೇಖಿಸಿ ವಾಲ್ ಸ್ಟ್ರೀಟ್ ಜರ್ನಲ್ ಶುಕ್ರವಾರ ವರದಿ ಮಾಡಿತ್ತು. ವರದಿಗಳ ಪ್ರಕಾರ ಇರಾನ್ ಸುಮಾರ್ 4 ಸಾವಿರ ಕಿ.ಮೀ ವ್ಯಾಪ್ತಿಯ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹಾರಿಸಿದ್ದಂತೂ ನಿಜ. ಆದರೆ ಈ ಕ್ಷಿಪಣಿಗಳು ಇರಾನ್ ಪ್ರದೇಶದಿಂದ ಸುಮಾರು 2,500 ಮೈಲುಗಳು (4,000 ಕಿಲೋಮೀಟರ್) ದೂರದಲ್ಲಿರುವ ಗುರಿಯನ್ನು ತಲುಪಿಲ್ಲ. ಆದರೆ ಈ ಉಡಾವಣೆಯು ಟೆಹ್ರಾನ್ ಹಿಂದೆ ಭಾವಿಸಿದ್ದಕ್ಕಿಂತ ಹೆಚ್ಚಿನ ವ್ಯಾಪ್ತಿಯ ಕ್ಷಿಪಣಿಗಳನ್ನು ಹೊಂದಿದೆ ಎಂದು ಸೂಚಿಸುತ್ತದೆ ಎಂದು ವರದಿ ತಿಳಿಸಿದೆ.

ಇರಾನ್ ಹಾರಿಸಿದ 2 ಕ್ಷಿಪಣಿಗಳ ಪೈಕಿ ಒಂದು ಹಾರಾಟದಲ್ಲಿ ವಿಫಲವಾದರೆ, ಮತ್ತೊಂದನ್ನು ಅಮೆರಿಕ ನೌಕಾಪಡೆಯ ಯುದ್ಧನೌಕೆಯಿಂದ ಹಾರಿಸಿದ ಇಂಟರ್‌ಸೆಪ್ಟರ್ ಗುರಿಯಾಗಿಸಿಕೊಂಡು ದಾಳಿ ಮಾಡಿ ಅದನ್ನು ನಾಶ ಮಾಡಿತು. ಆದರೂ ಕ್ಷಿಪಣಿಯನ್ನು ಹೊಡೆದಿದೆಯೇ ಎಂಬುದು ಸ್ಪಷ್ಟವಾಗಿಲ್ಲ ಎಂದು ದಿ ಜರ್ನಲ್ ವರದಿ ಮಾಡಿದೆ. ಅಂದ ಹಾಗೆ ಚಾಗೋಸ್ ದ್ವೀಪಗಳಲ್ಲಿರುವ ಡಿಯಾಗೋ ಗಾರ್ಸಿಯಾ ಬ್ರಿಟನ್ ಇರಾನ್‌ನಲ್ಲಿ ರಕ್ಷಣಾತ್ಮಕ ಕಾರ್ಯಾಚರಣೆಗಳಿಗೆ ಯುನೈಟೆಡ್ ಸ್ಟೇಟ್ಸ್ ಬಳಸಲು ಅನುಮತಿಸುತ್ತಿರುವ ಎರಡು ನೆಲೆಗಳಲ್ಲಿ ಒಂದಾಗಿದೆ. ಅಮೆರಿಕದ ಪಡೆಗಳು ಅಫ್ಘಾನಿಸ್ತಾನ ಮತ್ತು ಇರಾಕ್‌ನಲ್ಲಿ ಅಮೆರಿಕ ಬಾಂಬ್ ದಾಳಿ ಸೇರಿದಂತೆ ಏಷ್ಯಾ ಕಾರ್ಯಾಚರಣೆಗಳ ಪ್ರಮುಖ ಕೇಂದ್ರವಾದ ಈ ನೆಲೆಯಲ್ಲಿ ಬಾಂಬರ್‌ಗಳು ಮತ್ತು ಇತರ ಉಪಕರಣಗಳನ್ನು ಇರಿಸಿವೆ.

ಅಂತೆಯೇ 1960ರ ದಶಕದಿಂದ ಚಾಗೋಸ್ ದ್ವೀಪಗಳನ್ನು ಮಾರಿಷಸ್‌ಗೆ ಹಿಂತಿರುಗಿಸಲು ಬ್ರಿಟನ್ ಒಪ್ಪಿಕೊಂಡಿದೆ ಮತ್ತು ದ್ವೀಪಗಳಲ್ಲಿ ಅತಿ ದೊಡ್ಡದಾದ ಡಿಯಾಗೋ ಗಾರ್ಸಿಯಾದಲ್ಲಿನ ನೆಲೆಗೆ ಗುತ್ತಿಗೆಯನ್ನು ಕಾಯ್ದುಕೊಂಡಿದೆ.

ಪ್ರತಿಕ್ರಿಯೆಗೆ ಪೆಂಟಗನ್ ನಿರಾಕರಣೆ : ಇನ್ನು ಈ ದಾಳಿಯನ್ನು ಪೆಂಟಗನ್ ನಿರಾಕರಿಸಿದ್ದು, ಅಂತಹ ಯಾವುದೇ ದಾಳಿ ನಡೆದಿಲ್ಲ ಎಂದು ಸ್ಪಷ್ಟಪಡಿಸಿದೆ. ಆದರೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನ ಈ ನಿರ್ಧಾರವನ್ನು ಖಂಡಿಸಿದ್ದಾರೆ.

ಸಿದ್ದರಾಮಯ್ಯ–ಜಮೀರ್ ಸಂಬಂಧ ಹಳಸಿತೆ...!?

ಜಮೀರ್, ಕುಣಿಗಲ್ ಕ್ಷೇತ್ರದ ಶಾಸಕ ಡಾ.ರಂಗನಾಥ್ ನಿವಾಸದಲ್ಲಿ ನಡೆದ ರಂಜಾನ್ ಇಫ್ತಿಹಾರ್ ಕೂಟದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರು. ಅಲ್ಪಸಂಖ್ಯಾತ ಸಮುದಾಯದ ನಾಯಕರ ಜೊತೆ ಶಿವಕುಮಾರ್ ಅವರನ್ನು ಭೇಟಿ ಮಾಡಿ ಪಕ್ಷ ಮತ್ತು ಸರ್ಕಾರದ ವಿದ್ಯಮಾನಗಳ ಬಗ್ಗೆ ಸಮಾಲೋಚನೆ ನಡೆಸುತ್ತಿರುವುದು ಗಮನ ಸೆಳೆಯುತ್ತಿದೆ. ರಂಜಾನ್ ಆಚರಣೆ ವೇಳೆ ಸಿದ್ದರಾಮಯ್ಯ ಜೊತೆ ನಗರದ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡುತ್ತಿದ್ದರು. ಆದರೆ, ಈ ಬಾರಿ ಶಿವಾಜಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಸ್ಜೀದ್–ಇ–ಖಾದ್ರಿಯಾದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡರು.

ಜಮೀರ್ ವಿರೋಧಿ ಪಾಳಯದಲ್ಲಿ ಗುರುತಿಸಿಕೊಂಡಿರುವ ಶಿವಾಜಿನಗರ ಕ್ಷೇತ್ರದ ಶಾಸಕ ರಿಜ್ವಾನ್ ಹರ್ಷದ್ ಜೊತೆ ಸಿದ್ದರಾಮಯ್ಯ ಸಾಮೂಹಿಕ ಪ್ರಾರ್ಥನೆ ಮಾಡಿದರು. ಶಿವಕುಮಾರ್ ಜೊತೆ ಪವಿತ್ರ ರಂಜಾನ್ ಉಪವಾಸ ಅಂತ್ಯಗೊಳಿಸುವ ಮೂಲಕ ಗಮನ ಸೆಳೆದ ಜಮೀರ್ ನಂತರ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ತಮ್ಮ ಪುತ್ರನೊಂದಿಗೆ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡರು.

ಸೇನಾ ಕಾರ್ಯಾಚರಣೆ ಶೀಘ್ರ ಸ್ಥಗಿತ: ಅಮೆರಿಕ

ಅಧ್ಯಕ್ಷರ ಮನವಿಯನ್ನು ಮಿತ್ರರಾಷ್ಟ್ರಗಳೇ ನಿರಾಕರಿಸಿದ್ದಾರೆ. ಆದರೆ ಆದಷ್ಟು ಬೇಗ ಶಾಂತ ಪರಿಸ್ಥಿತಿ ಮರುಕಳಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಈ ಮಧ್ಯೆ ಪ್ರಮುಖ ಜಲಮಾರ್ಗವಾಗಿರುವ ಹಾರ್ಮುಜ್ ಜಲಸಂಧಿಯನ್ನು ಮುಚ್ಚಿದ ಇರಾನ್ ಕ್ರಮವನ್ನು ಯುಎಇ, ಬಹ್ರೇನ್ ಸೇರಿದಂತೆ 22 ರಾಷ್ಟ್ರಗಳು ಖಂಡಿಸಿವೆ. ಈ ಕುರಿತು ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಿದ್ದು, ಇತ್ತೀಚಿನ ಕೊಲ್ಲಿಯಲ್ಲಿ ನಿರಾಯುಧ ವಾಣಿಜ್ಯ ಹಡಗುಗಳ ಮೇಲೆ ಇರಾನ್ ದಾಳಿ, ತೈಲ ಮತ್ತು ಅನಿಲ ಸ್ಥಾವರಗಳು ಸೇರಿದಂತೆ ನಾಗರಿಕ ಮೂಲಸೌಕರ್ಯಗಳ ಮೇಲಿನ ದಾಳಿ ಹಾಗೂ ಹಾರ್ಮುಜ್ ಜಲಸಂಧಿಯನ್ನು ಮುಚ್ಚುವಿಕೆಯನ್ನು ತೀವ್ರವಾಗಿ ಖಂಡಿಸುತ್ತೇವೆ. ಹಾರ್ಮುಜ್ ಜಲಸಂಧಿಯ ಮೂಲಕ ಸುರಕ್ಷಿತ ಸಂಚಾರವನ್ನು ಖಚಿತಪಡಿಸುವ ಸೂಕ್ತ ಪ್ರಯತ್ನಗಳಿಗೆ ಕೈ ಜೋಡಿಸುತ್ತೇವೆ. ಇದಕ್ಕಾಗಿ ಪೂರ್ವ ಸಿದ್ಧತಾ ಯೋಜನೆಯಲ್ಲಿ ತೊಡಗಿರುವ ರಾಷ್ಟ್ರಗಳ ಬದ್ಧತೆಯನ್ನು ನಾವು ಸ್ವಾಗತಿಸುತ್ತೇವೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಫೆ.28 ರಂದು ಅಮೆರಿಕ ಹಾಗೂ ಇಸ್ರೇಲ್ ಜಂಟಿ ವೈಮಾನಿಕ ದಾಳಿಯಿಂದ ಆರಂಭವಾದ ಈ ಸಂಘರ್ಷ ಮಧ್ಯಪ್ರಾಚ್ಯ ಪ್ರದೇಶಾದಾದ್ಯಂತ ವ್ಯಾಪಿಸಿದ್ದು, ಇಂಧನ ಮಾರುಕಟ್ಟೆ ಮೇಲೆ ತೀವ್ರ ಪರಿಣಾಮ ಬೀರಿದೆ. ಇರಾನ್ ಹಾರ್ಮುಜ್ ಜಲಸಂಧಿಯನ್ನು ಬಂದ್ ಮಾಡುವುದರೊಂದಿಗೆ ತೈಲ ಬೆಲೆ ಏರಿಕೆಯಾಗಿದೆ. ಮತ್ತೊಂದೆಡೆ ಹಿಜ್ಬುಲ್ಲಾ ಸಂಘಟನೆಯನ್ನು ಗುರಿಯಾಗಿಸಿಕೊಂಡು ಇಸ್ರೇಲ್ ದಾಳಿಯನ್ನು ತೀವ್ರಗೊಳಿಸಿದೆ. ಸದ್ಯ ಅಮೆರಿಕ ಅಧಿಕಾರಿ, ಶೀಘ್ರ ಶಾಂತ ಪರಿಸ್ಥಿತಿ ಮರುಕಳಿಸುವ ಮಾತುಗಳನ್ನಾಡಿರುವುದು ಮಧ್ಯಪ್ರಾಚ್ಯ ಸಂಘರ್ಷಕ್ಕೆ ವಿರಾಮ ಸಿಗುವ ಭರವಸೆ ದೊರೆತಿದೆ.

ಉಮೇಶ್ ಮೇಟಿಗೆ ಟಿಕೆಟ್!

ಯಲಿದೆ. ಸೋಮವಾರ ಮೊದಲು ದಾವಣಗೆರೆಯಲ್ಲಿ ಅಭ್ಯರ್ಥಿ ನಾಮಪತ್ರ ಸಲ್ಲಿಸಲಿದ್ದು, ಈ ವೇಳೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಭಾಗಿಯಾಗಲಿದ್ದಾರೆ. ದಾವಣಗೆರೆಯ ಕಾರ್ಯಕ್ರಮ ಮುಗಿಸಿ ಸಿಎಂ ಮತ್ತು ಡಿಸಿಎಂ ನೇರವಾಗಿ ಬಾಗಲಕೋಟೆಗೆ ತೆರಳಲಿದ್ದಾರೆ. ಮಧ್ಯಾಹ್ನದ ವೇಳೆಗೆ ಬಾಗಲಕೋಟೆ ಅಭ್ಯರ್ಥಿಯ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಅವರು ಸಾಥ್ ನೀಡಲಿದ್ದಾರೆ.

ಹಿಂದೆ ಸರಿದ ಮಹಾನಗರ ಪಾಲಿಕೆ

ಪಾರಂಪರಿಕ ಕಟ್ಟಡಗಳ ಬಳಿಯೇ ಟಾಂಗಾ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪಾರಂಪರಕ ತಜ್ಞರೂ ಆಕ್ಷೇಪಿಸಿದ್ದರು.

ಪುರಭವನದ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಪಾದಚಾರಿ ಮಾರ್ಗದ ಮೇಲೆ ಟಾಂಗ ನಿಲ್ದಾಣ ಹಾಗೂ ಟಿಕೆಟ್ ಕೌಂಟರ್ ನಿರ್ಮಾಣಕ್ಕೆ ಮೈಸೂರು ಮಹಾನಗರ ಪಾಲಿಕೆ ಅನುಮತಿಸಿ, ಎನ್‌ಓಸಿ ಸಹ ನೀಡಿತ್ತು. ಇದೀಗ ಎಚ್ಚೆತ್ತುಕೊಂಡ ಮೈಸೂರು ಮಹಾನಗರ ಪಾಲಿಕೆ, ಚಾಮರಾಜ ವೃತ್ತದ ಬಳಿ ಟಾಂಗಾ ನಿಲ್ದಾಣ ಸ್ಥಾಪನೆಯಿಂದ ಹಿಂದೆ ಸರಿದಿದ್ದು, ಟಾಂಗಾ ನಿಲ್ದಾಣಕ್ಕೆ ಹಾಕಲಾಗಿದ್ದ ಅಡಿಪಾಯ ತೆರವುಗೊಳಿಸಲಾಗಿದೆ. ಕಳೆದ ಒಂದು ವಾರದಿಂದ ಬ್ಯಾರಿಕೇಡ್ ಇಟ್ಟು ಬಂದ್ ಮಾಡಲಾಗಿದ್ದ ಪಾದಚಾರಿ ಮಾರ್ಗವನ್ನು ಜನರ ಓಡಾಟಕ್ಕೆ ಅನುವು ಮಾಡಿಕೊಡಲು ಸೂಚಿಸಲಾಗಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟು; ಭಾರತಕ್ಕೆ ಕರೆಂಟ್ ಶಾಕ್ ಎದುರಾಗುತ್ತಾ

ನವದೆಹಲಿ: ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದಂತೆ ಭಾರತದ ವಿವಿಧ ಪ್ರದೇಶಗಳಲ್ಲಿ ಎಲ್‌ಪಿಜಿ ಸಿಲಿಂಡರ್ ಅಭಾವ ಹೆಚ್ಚಾಗುತ್ತಿದೆ. ಈ ಮಧ್ಯೆ ವಿದ್ಯುತ್ ಸರಬರಾಜಿನ ಮೇಲೂ ಗಮನಾರ್ಹವಾಗಿ ಪರಿಣಾಮ ಬೀರುವ ಆತಂಕ ತಲೆದೋರಿದ್ದು, ಈ ಬಗ್ಗೆ ವಿದ್ಯುತ್ ಕಾರ್ಯದರ್ಶಿ ಪಂಕಜ್ ಅಗರ್ವಾಲ್ ಪ್ರತಿಕ್ರಿಯಿಸಿದ್ದಾರೆ.

ಭಾರತವು ಅನಿಲ ಆಧಾರಿತ ವಿದ್ಯುತ್ ಉತ್ಪಾದನೆಯ ಮೇಲೆ ಬಹಳ ಕಡಿಮೆ ಅವಲಂಬಿತವಾಗಿದೆ. ಆದ್ದರಿಂದ, ಮಧ್ಯಪ್ರಾಚ್ಯ ಬಿಕ್ಕಟ್ಟು ದೇಶದ ವಿದ್ಯುತ್ ಸರಬರಾಜಿನ ಮೇಲೆ ಕನಿಷ್ಠ ಪರಿಣಾಮ ಬೀರುತ್ತದೆ. ಬೇಡಿಕೆಗಳನ್ನ ಪೂರೈಸಲು ನಾವು ಹೆಚ್ಚು ಕಚ್ಚಾತೈಲ ಬಳಸುವುದಿಲ್ಲ. ಸುಮಾರು ಎರಡೂವರೆ ಗಿಗಾವ್ಯಾಟ್‌ಗಳು ನಮ್ಮಲ್ಲಿ ಈಗಾಗಲೇ ಸಂಗ್ರಹ ಇದೆ. ಇದು ಆಫ್‌ಗ್ರಿಡ್ ಆಗಿದ್ದು, ಸ್ಥಿರವಾಗಿ ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ ಮಧ್ಯಪ್ರಾಚ್ಯದ ಬಿಕ್ಕಟ್ಟು ವಿದ್ಯುತ್ ಸರಬರಾಜಿನ ಮೇಲೆ ಪರಿಣಾಮ ಬೀರುವುದಿಲ್ಲ ಎಂದಿದ್ದಾರೆ.

ಚೀನಾಗೆ ತೆರಳುತ್ತಿದ್ದ ಟ್ಯಾಂಕರ್ ಯೂಟರ್ನ್ ಮಂಗಳೂರಿಗೆ ಬರ್ತಿದೆ 7.7 ಲಕ್ಷ ಬ್ಯಾರೆಲ್ ಕಚ್ಚಾ ತೈಲವಿರುವ ಹಡಗು

ಮಂಗಳೂರು: ಚೀನಾಕ್ಕೆ ತೆರಳುತ್ತಿದ್ದ ರಷ್ಯಾದ ಕಚ್ಚಾ ತೈಲ ತುಂಬಿದ ಟ್ಯಾಂಕರ್ ದಕ್ಷಿಣ ಚೀನಾ ಸಮುದ್ರದಲ್ಲಿ ಯೂಟರ್ನ್ ಹೊಡೆದು ಮಂಗಳೂರಿನತ್ತ ಬರುತ್ತಿದೆ. 7.7 ಲಕ್ಷ ಬ್ಯಾರೆಲ್ ಕಚ್ಚಾ ತೈಲವಿರುವ ಹಡಗು ನವಮಂಗಳೂರಿಗೆ ಆಗಮಿಸಲಿದೆ.

ಟ್ರ್ಯಾಕಿಂಗ್ ದತ್ತಾಂಶದ ಪ್ರಕಾರ, ಜನವರಿ 18 ರಂದು ಬಾಲ್ಟಿಕ್ ಸಮುದ್ರದ ಬಂದರಿನಿಂದ ಯುರಲ್ಸ್ ಕಚ್ಚಾತೈಲವನ್ನು ಅಕ್ವಾ ಟೈಟಾನ್ ಹಡಗಿಗೆ ಲೋಡ್ ಮಾಡಲಾಗಿತ್ತು. ಈಗ ಈ ಹಡಗು ದಕ್ಷಿಣ ಚೀನಾ ಸಮುದ್ರದಲ್ಲಿ ಯೂಟರ್ನ್ ಹೊಡೆದಿದೆ. ಮಾ.22 ರಂದು ಭಾರತದ ನವಮಂಗಳೂರಿಗೆ ಆಗಮಿಸಲಿದ್ದು, ಎಂಆರ್‌ಪಿಎಲ್‌ಗೆ ಆಳ ಸಮುದ್ರದಲ್ಲಿರುವ ಪೈಪ್ ಲೈನ್ ಮೂಲಕ ತೈಲ ಪೂರಕೆಯಾಗಲಿದೆ.

ಜೀನಿಯಸ್ ಮಕ್ಕಳ ಬೇಸಿಗೆ ಶಿಬಿರ, ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಮಾ.21–ಜೀನಿಯಸ್ ಅಕಾಡಮಿ, ಕೆ.ಆರ್ ನಗರ ಮೈಸೂರು ಜಿಲ್ಲೆ, ಇವರು ನಗರ ಮತ್ತು ಗ್ರಾಮೀಣ ಪ್ರದೇಶಕ್ಕೆ ಬರುವ ಶಾಲಾ ವಿದ್ಯಾರ್ಥಿಗಳಿಗೆ (1 ರಿಂದ 10 ನೇ ತರಗತಿಗಳಿಗೆ ಮಾತ್ರ) ಜೀನಿಯಸ್ ಬೇಸಿಗೆ ಮಕ್ಕಳ ಶಿಬಿರ ಕಂಪ್ಯೂಟರ್ ತರಬೇತಿಯನ್ನು ಆಯೋಜಿಸಲಾಗಿದೆ.

ತರಬೇತಿಯಲ್ಲಿ ಸಂಬಂಧಪಟ್ಟ ವಿಷಯದ ಜೊತೆಗೆ ಜೀನಿಯಸ್ ಜೀವನ ಕೌಶಲ್ಯ ಬದುಕಿಗೊಂದು ಆಶಾಕಿರಣ ತರಬೇತಿ ಹಾಗೂ ಕಂಪ್ಯೂಟರ್ ತರಬೇತಿ ನೀಡಲಾಗುವುದು. AI, ChartGPT, Typing ಉಚಿತ ತರಬೇತಿ ಹಾಗೂ ಮಕ್ಕಳ ಸೃಜನಶೀಲತೆ, ಆಸ್ತಕಿಗೆ ಅನುಗುಣವಾಗಿ ತರಬೇತಿ ನೀಡಲಾಗುವುದು.

ಆಸಕ್ತ ವಿದ್ಯಾರ್ಥಿಗಳು ತಮ್ಮ ಹೆಸರು, ವಿಳಾಸ, ವಿವರಗಳೊಂದಿಗೆ ನೋಂದಾಯಿಸಿ, ಹೆಚ್ಚಿನ ವಿವರಗಳಿಗೆ ಸಂಸ್ಥೆಯ ದೂರವಾಣಿ ಸಂಖ್ಯೆ : 9945942109 ಅನ್ನು ಸಂಪರ್ಕಿಸಬಹುದು.

ಪುನೀತ್ ಹುಟ್ಟುಹಬ್ಬ ಆಚರಣೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಪುನೀತ್ ಅವರ 51ನೇ ಹುಟ್ಟು ಹಬ್ಬವನ್ನು ಪಾರ್ವತಮ್ಮ ರಾಜಕುಮಾರ್ ಅವರ ಸಹೋದರ ಎಸ್.ಎ.ಶ್ರೀನಿವಾಸ ಅವರ ನೇತೃತ್ವದಲ್ಲಿ ವಿಜೃಂಭಣೆಯಿಂದ ಆಚರಿಸಿ, ಸಾರ್ವಜನಿಕರಿಗೆ ಊಟದ ವ್ಯವಸ್ಥೆ ಏರ್ಪಡಿಸಲಾಗಿತ್ತು.

ವರಕೂಡು ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದಲ್ಲಿ 48 ದಿನಗಳ ಪೂಜಾ ಮಹೋತ್ಸವ

ಮೈಸೂರು,ಮಾ.21–ಮೈಸೂರು ತಾಲೂಕು, ವರುಣಾ ಹೋಬಳಿಯ ವರಕೋಡು ಗ್ರಾಮದಲ್ಲಿರುವ ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದ ಸಂಪ್ರೋಕ್ಷಣ, ಪುನರ್ ಪ್ರತಿಷ್ಠಾಪನೆ, ಕುಂಭಾಭಿಷೇಕ ಹಾಗೂ ಮಹಾದ್ವಾರದ 48 ದಿನಗಳ ಪೂಜಾ ಮಹೋತ್ಸವ ಹಿನ್ನೆಲೆ. ದುದ್ದಗೆರೆ ಗ್ರಾಮಸ್ಥರಿಂದ ಮಾ.23 ರಂದು ವರಕೋಡು ಗ್ರಾಮದ ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ.

ಬೀರೇಶ್ವರಸ್ವಾಮಿಗೆ ಬೆಳಗ್ಗೆ 5 ರಿಂದ 7 ರವರೆಗೆ ವಿಶೇಷ ಪೂಜೆ, ಅಭಿಷೇಕ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಪ್ರಸಾದ ವಿನಿಯೋಗ ಇರಲಿದೆ. ಪೂಜಾ ಮಹೋತ್ಸವದಲ್ಲಿ ದುದ್ದಗೆರೆ, ವರಕೋಡು, ಮೂಡಲಹುಂಡಿ, ಬಡಗಲಹುಂಡಿ, ಕೆಂಪೇಗೌಡನಹುಂಡಿ, ಹೊಸಹುಂಡಿ ಸೇರಿದಂತೆ ಬೀರೇಶ್ವರಸ್ವಾಮಿಯ ಗಡಿ ಗ್ರಾಮಗಳ ಯಜಮಾನರುಮ ಗ್ರಾಮಸ್ಥರು ಭಾಗಿಯಾಗಲಿದ್ದಾರೆ.

ಗುಬ್ಬಚ್ಚಿ ದಿನ ಆಚರಣೆ



ಮೈಸೂರಿನ ಮಹಾರಾಜ ಕಾಲೇಜು ಮೈದಾನದ ಮುಂಭಾಗ ಕೆಎಂಪಿಕೆ ಟ್ರಸ್ಟ್ ವತಿಯಿಂದ ವಿಶ್ವ ಗುಬ್ಬಚ್ಚಿ ದಿನಾಚರಣೆ ಅಂಗವಾಗಿ ಗುಬ್ಬಚ್ಚಿ ಹಬ್ಬ ಆಚರಿಸಲಾಯಿತು. ಪಕ್ಷಿಗಳಿಗೆ ನೀರಿನ ಬೌಲು ಅಳವಡಿಸಿ ನೀರು ಹಾಗೂ ಆಹಾರ ಹಾಕುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಬಿಜೆಪಿ ಮುಖಂಡ ಎಲ್.ಆರ್. ಮಹದೇವಸ್ವಾಮಿ, ಮುಡಾ ಮಾಜಿ ಸದಸ್ಯರಾದ ಲಕ್ಷ್ಮೀದೇವಿ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ರೇಣುಕಾ ರಾಜ್, ಮಾಜಿನಗರ ಪಾಲಿಕಾ ಸದಸ್ಯರಾದ ಜಗದೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಎಸ್ ಎನ್ ರಾಜೇಶ್, ಬೈರತಿ ಲಿಂಗರಾಜು, ಚಕ್ರಪಾಣಿ, ಸುಚಿಂದ್ರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹಿರಿಯ ಸಹಕಾರಿ ಲಲಿತಾ ಜಿ.ಟಿ.ದೇವೇಗೌಡರಿಗೆ ಮಾ.25ಕ್ಕೆ ಮಂಡ್ಯದಲ್ಲಿ ಸಹಕಾರಿ ಪ್ರಶಸ್ತಿ ಪ್ರದಾನ

ಮೈಸೂರು,ಮಾ.21(ಎಂಟಿವೈ)– ಮಂಡ್ಯದ ಕರ್ನಾಟಕ ಸಂಘ, ಸಹಕಾರಿ ಕ್ಷೇತ್ರದ ಧುರೀಣರಾಗಿರುವ ಕೆ.ಲಲಿತಾ ಜಿ.ಟಿ.ದೇವೇಗೌಡ ಅವರನ್ನು ಈ ಸಾಲಿನ ಜಿ.ಎಸ್.ಬೊಮ್ಮೇಗೌಡ ಸಹಕಾರ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಮಾ.25ರಂದು ಮಂಡ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಮಂಡ್ಯದ ಕೆ.ವಿ.ಶಂಕರೇಗೌಡ ಶತಮಾನೋತ್ಸವ ಭವನದಲ್ಲಿ ಮಾ.25 ರಂದು ಬೆಳಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ವಿಶ್ರಾಂತ ನಿರ್ದೇಶಕ ಕೆ.ಟಿ. ವೀರಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ವಹಿಸಲಿದ್ದು, ಮಾಜಿ ಶಾಸಕ ಕೆ.ಬಿ.ಶಿವಕುಮಾರ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.


ಲಲಿತಾ ಜಿ.ಟಿ.ದೇವೇಗೌಡ

ಲಲಿತಾ ಅವರು ಮಹಿಳಾ ಸಹಕಾರಿಯಾಗಿ ಮೈಸೂರು ಜಿಲ್ಲೆಯಲ್ಲಿ ಮಹಿಳೆಯರನ್ನು ಸಂಘಟಿಸಿ, ಮಹಿಳಾ ವಿವಿಧೋದ್ದೇಶ ಸಹಕಾರ ಸಂಘವನ್ನು ಸ್ಥಾಪಿಸಿ ತನ್ಮೂಲಕ ರಾಜ್ಯದಲ್ಲಿ ಮಹಿಳಾ ಸಂಘಗಳ ಸ್ಥಾಪನೆಗೆ ಮತ್ತು ಅಭಿವೃದ್ಧಿಗೆ ಕಾರಣ ಕರ್ತರಾಗಿದ್ದಾರೆ. ಕೆ.ಲಲಿತಾ ಅವರು 2010ರಲ್ಲಿ ಜಿ.ಪಂ. ಸದಸ್ಯರಾಗಿ, ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಹುಣಸೂರು ಪಟ್ಟಣದಲ್ಲಿ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡಕ್ಕೆ ಕಾರಣರಾದ ಇವರು 2014–15ನೇ ಸಾಲಿನಲ್ಲಿ ರಾಜ್ಯಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಮೈಸೂರು ವಿಭಾಗದ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. 2019–20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳಕ್ಕೆ ಮೈಸೂರು ವಿಭಾಗದಿಂದ ಆಯ್ಕೆಗೊಂಡು 2019ರಲ್ಲಿ ಈ ಸಂಘದ ಅಧ್ಯಕ್ಷರಾಗಿಯೂ ಅವಿರೋಧವಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದಾರೆ. ಕೆ.ಲಲಿತಾ ಅವರಿಗೆ ಅತ್ಯುತ್ತಮ ಸಹಕಾರ ಮಹಿಳಾ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ, ಸನ್ಮಾನಕ್ಕೆ ಭಾಜನರಾಗಿದ್ದಾರೆ. ಇದೀಗ ಲಲಿತಾ ಅವರ ಸೇವೆಯನ್ನು ಪರಿಗಣಿಸಿ 2026ನೇ ಸಾಲಿಗೆ ಕರ್ನಾಟಕ ಸಂಘ ಕೊಡ ಮಾಡುವ ಜಿ.ಎಸ್.ಬೊಮ್ಮೇಗೌಡ ಸಹಕಾರ ಪ್ರಶಸ್ತಿಯನ್ನು 25ಸಾವಿರ ರೂ.ನಗದು ಹಾಗೂ ಪ್ರಶಸ್ತಿ ಫಲಕದೊಂದಿಗೆ ನೀಡಿ ಗೌರವಿಸಲಾಗುತ್ತದೆ.

ವಸಂತನಗರಕ್ಕೆ ಉಂಡುವಾಡಿ ಯೋಜನೆಯಿಂದ ಮೂರ್ನಾಲ್ಕು ತಿಂಗಳಲ್ಲಿ 24 ಗಂಟೆ ನೀರು ಪೂರೈಕೆ

ಶಾಸಕ ಜಿ.ಟಿ.ದೇವೇಗೌಡರ ಭರವಸೆ

ಮೈಸೂರು,ಮಾ.21(ಎಂಟಿವೈ)–ಉಂಡುವಾಡಿ ಯೋಜನೆ ಪೂರ್ಣಗೊಂಡ ಬಳಿಕ ಚಾಮುಂಡೇಶ್ವರಿ ಕ್ಷೇತ್ರದ ವಸಂತನಗರಕ್ಕೆ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಶಾಸಕ ಜಿ.ಟಿ.ದೇವೇಗೌಡ ಭರವಸೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿರುವ ಶಾಸಕರ ಕಚೇರಿಗೆ ವಸಂತನಗರದ ನಿವಾಸಿಗಳ ನಿಯೋಗ ಆಗಮಿಸಿ, ಬಡಾವಣೆಗೆ ಮೂಲ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಶ್ರಮಿಸಿದ ಶಾಸಕ ಜಿ.ಟಿ.ದೇವೇಗೌಡ ಅವರಿಗೆ ಸನ್ಮಾನಿಸಿದರು. ಈ ವೇಳೆ ಸನ್ಮಾನ ಸ್ವೀಕರಿಸಿ ಮಾತನಾಡಿದ ಜಿಟಿಡಿ ಅವರು, ಹಲವು ವರ್ಷಗಳಿಂದ ಕುಡಿಯುವ ನೀರು ಪೂರೈಕೆ ಇಲ್ಲದೆ ಪರದಾಡುತ್ತಿದ್ದ ವಸಂತನಗರಕ್ಕೆ ಇದೀಗ ಕಾವೇರಿ ನೀರು ಸರಬರಾಜಾಗುತ್ತಿದೆ. ಇದರಿಂದ ಬಡಾವಣೆಯ ನಿವಾಸಿಗಳಲ್ಲಿ ನಿಟ್ಟುಸಿರು ಬಿಡುವಂತಾಗಿದೆ. ಅವಿರತ ಶ್ರಮದ ಫಲವಾಗಿ ವಸಂತನಗರ ಬಡಾವಣೆಗೆ ನೀರು ಪೂರೈಕೆಯಾಗುತ್ತಿದೆ. ಉಂಡುವಾಡಿ ಯೋಜನೆ ಪೂರ್ಣಗೊಂಡ ಬಳಿಕ ಮೂರ್ನಾಲ್ಕು ತಿಂಗಳಲ್ಲಿ ದಿನದ 24 ಗಂಟೆಯೂ ನೀರು ಪೂರೈಕೆಯಾಗಲಿದೆ ಎಂದು ಹೇಳಿದರು.


ಮೈಸೂರಿನ ವಸಂತನಗರದ ನಿವಾಸಿಗಳ ನಿಯೋಗ ಶಾಸಕ ಜಿ.ಟಿ.ದೇವೇಗೌಡರನ್ನು ಅಭಿನಂದಿಸಿತು.

ಈ ಹಿಂದೆ ಬಡಾವಣೆಯ ಜನ ಬೋರ್‌ವೆಲ್ ನೀರು, ಟ್ಯಾಂಕರ್ ನೀರನ್ನೇ ಅವಲಂಭಿಸಿದ್ದರು. ಈ ಬಗ್ಗೆ ಹಿಂದಿನ ಮುಡಾ ಸಭೆಯಲ್ಲಿ ಪ್ರಸ್ತಾಪಿಸಿ ನಗರಪಾಲಿಕೆ ಮೂಲಕ ನೀರು ಹರಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ಅದರಂತೆ, ಮೈಸೂರು ನಗರಪಾಲಿಕೆಯಿಂದ ಈ ಪ್ರದೇಶಗಳಿಗೆ ನೀರು ಬಿಡಲು ಹೆಚ್ಚಿನ ಎಂಎಲ್‌ಡಿ ನೀರು ಪೂರೈಸುವಂತೆ ಸೂಚನೆ ನೀಡಲಾಗಿದೆ. ಹೀಗಾಗಿ, ವಸಂತನಗರದಲ್ಲಿ ಇರುವ ಪೈಪ್‌ಲೈನ್ ಮೂಲಕ ಹಾದು ಹೋಗಿರುವ ಟ್ಯಾಂಕ್‌ಗಳಿಗೆ ನೀರು ಹರಿಸಲಾಗುತ್ತಿದೆ. ಇದರಿಂದಾಗಿ ಮೊದಲನೇ ಹಂತವಾಗಿ ಎರಡು ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. ಶೀಘ್ರದಲ್ಲೇ ದಿನಕ್ಕೆ ಒಂದು ಬಾರಿ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಮೂರ್ನಾಲ್ಕು ತಿಂಗಳಲ್ಲಿ ಉಂಡುವಾಡಿ ಯೋಜನೆ ಮುಗಿಯುತ್ತಿದ್ದಂತೆ ಪ್ರತಿನಿತ್ಯ ನೀರು ಪೂರೈಕೆಯಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಸಂತನಗರದ ಮುಖಂಡರು ಉಪಸ್ಥಿತರಿದ್ದರು.

ಸಂಘ ಜೀವಿಯಾದ ಪ್ರೊ.ಭೈರವಮೂರ್ತಿ ಸರಳ ಸಾಹಿತಿ


ಮೈಸೂರಿನ ಸುಯೋಗ್ ಆಸ್ಪತ್ರೆ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಚಿಗುರು ಸಾಹಿತ್ಯ ಬಳಗದ ವತಿಯಿಂದ ಹಿರಿಯ ವಿದ್ವಾಂಸ ಪ್ರೊ.ಕೆ.ಭೈರವಮೂರ್ತಿ ಬದುಕು ಬರಹ–ಒಂದು ಅವಲೋಕನ ಕಾರ್ಯಕ್ರಮ ನಡೆಸಲಾಯಿತು.

ಪ್ರೊ.ಕೆ.ಭೈರವಮೂರ್ತಿ ಬದುಕು– ಬರಹ ಒಂದು ಅವಲೋಕನ

ಮೈಸೂರು, ಮಾ.21(ಜಿಎ)–ಪ್ರೊ.ಕೆ. ಭೈರವಮೂರ್ತಿ ಸಂಘ ಜೀವಿಯಾಗಿ ಬದುಕಿ ಆದರ್ಶಗಳನ್ನು ಬಳುವಳಿಯಾಗಿ ನೀಡಿದ ಸರಳ ಸಾಹಿತಿ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸ್ಮರಿಸಿದರು.

ಮೈಸೂರಿನ ಸುಯೋಗ್ ಆಸ್ಪತ್ರೆ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಚಿಗುರು ಸಾಹಿತ್ಯ ಬಳಗದ ವತಿಯಿಂದ ತ.ಸು.ಶಾಮರಾವ್ ಸ್ಮರಣಾರ್ಥ ಆಯೋಜಿಸಿದ್ದ ಹಿರಿಯ ವಿದ್ವಾಂಸ ಪ್ರೊ.ಕೆ.ಭೈರವಮೂರ್ತಿ ಬದುಕು ಬರಹ– ಒಂದು ಅವಲೋಕನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸೃಜನಶೀಲ ಸಾಹಿತಿಗಳಲ್ಲಿ ಒಬ್ಬರಾದ ಡಾ.ಭೈರವಮೂರ್ತಿ ಅವರು, ಪ್ರಗತಿಪರ ಚಿಂತನಾಶೀಲರಾಗಿದ್ದರು. ಸಾಧು ಸ್ವಭಾವ, ಸರಳ ಜೀವಿಯಾದ ಅವರು, ಸಾಹಿತ್ಯ ಕ್ಷೇತ್ರಕ್ಕೆ ಅಮೂಲಾಗ್ರ ಕೊಡುಗೆ ನೀಡಿದ್ದಾರೆ. ಅವರೊಂದಿಗೆ ವೈಯಕ್ತಿಕವಾಗಿ ಒಡನಾಟ ಇದ್ದು, ಪರಸ್ಪರ ಚರ್ಚಿಸುತ್ತಿದ್ದೆವು ಎಂದು ಸ್ಮರಿಸಿದರು.

ಬಳಿಕ ಹಿರಿಯ ವಿದ್ವಾಂಸ ಪ್ರೊ.ಕೆ. ಭೈರವಮೂರ್ತಿ ಬದುಕು ಬರಹ ಕುರಿತು ಹಿರಿಯ ಸಂಸ್ಕೃತ ವಿದುಷಿ ಡಾ.ಕೆ.ಲೀಲಾ ಪ್ರಕಾಶ್ ಮಾತನಾಡಿದರು.

ಶ್ರದ್ಧಾಂಜಲಿ: ಇತ್ತೀಚೆಗೆ ನಿಧನರಾದ ಸಾಹಿತಿ ಚಂಪಾ ಶಿವಣ್ಣ ಹಾಗೂ ಎಸ್.ಎಂ.ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಅವರಿಗೆ ಮೌನಾಚರಣೆ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಮ.ನ.ಲತಾ ಮೋಹನ್, ಉಪಾಧ್ಯಕ್ಷ ಎನ್.ಅನಂತ, ಚಿಗುರು ಸಾಹಿತ್ಯ ಬಳಗದ ಸಂಚಾಲಕ ಎಂ.ವಿ.ನಾಗೇಂದ್ರ ಬಾಬು, ಕಾರ್ಯದರ್ಶಿ ನಾಗೇಂದ್ರ ಹೆಬ್ಬಾರ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಉಚಿತ ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ

ಮೈಸೂರು: ಅಮೃತಾಂಶು ಟ್ರಸ್ಟ್, ಮಣಿಪಾಲ್ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಹಾಗೂ ಕೆ.ಆರ್. ಆಸ್ಪತ್ರೆ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರವನ್ನು ಮಾ.23ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಚಾಮುಂಡಿಪುರಂನ ಮೇದರಕೇರಿ 5ನೇ ಮೇನ್ ಪಾಂಚಜನ್ಯ ಕಟ್ಟಡದಲ್ಲಿ ಹಮ್ಮಿಕೊಳ್ಳಲಾಗಿದೆ. ಕಣ್ಣಿನ ಪೊರೆ, ಹತ್ತಿರ ಮತ್ತು ದೂರದೃಷ್ಟಿ, ಗ್ಲುಕೋಮಾ, ವಾರೆಗಣ್ಣು, ಕಣ್ಣಿನಲ್ಲಿ ಬಿರುಕು, ನೀರು ಸೋರುವಿಕೆ, ರಾತ್ರಿ ಕುರುಡುತನ ಸಮಸ್ಯೆಗಳಿಗೆ ಪರೀಕ್ಷೆ ನಡೆಸಲಾಗುವುದು. ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ ಶಿಬಿರಾರ್ಥಿಗಳಿಗೆ ಉಚಿತವಾಗಿ ಬಿಪಿ, ಶುಗರ್ ಮತ್ತು ಇಸಿಜಿ ತಪಾಸಣೆ ಮಾಡಲಾಗುವುದು. ಶಿಬಿರಕ್ಕೆ ಬರುವವರು ತಮ್ಮ ಬಿಪಿಎಲ್ ಕಾರ್ಡ್‌ನ ಜೆರಾಕ್ಸ್‌ಗಳನ್ನು ತರಬೇಕು. ಮಾಹಿತಿಗೆ ಮೊ: 99452 70646, 9742634110, 8867259815.

ಪಿಎಚ್.ಡಿ ಪದವಿ

ಮೈಸೂರು: ಡಾ.ಬಾಲಸುಬ್ರಮಣಿಯನ್ ಅವರ ಮಾರ್ಗದರ್ಶನದಲ್ಲಿ, ಮಂಜುನಾಥ್ ಜಿ. ಅವರು ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಶ್ರೀ ಮಾಯಕಾರ ಗುರುಕುಲದ ವಾರ್ಷಿಕೋತ್ಸವ; ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ


ಮೈಸೂರು ನಗರದ ರೋಟರಿ ಸಭಾಂಗಣದಲ್ಲಿ ಶ್ರೀ ಮಾಯಕಾರ ಗುರುಕುಲದ 14ನೇ ವಾರ್ಷಿಕೋತ್ಸವ ಹಾಗೂ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆ ಸಮಾರಂಭ ನೆರವೇರಿತು.

ಮೈಸೂರು: ನಗರದ ರೋಟರಿ ಸಭಾಂಗಣದಲ್ಲಿ ಶ್ರೀ ಮಾಯಕಾರ ಗುರುಕುಲದ 14ನೇ ವರ್ಷದ ವಾರ್ಷಿಕೋತ್ಸವ ಹಾಗೂ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಸಮಾರಂಭ ನೆರವೇರಿತು.

ಕಾರ್ಯಕ್ರಮವನ್ನು ಗುಪ್ತ ಆಫ್‌ಸೆಟ್ ಪ್ರಿಂಟರ್ ಮಾಲೀಕರಾದ ರಾಮನಾಥ ಗುಪ್ತ, ಶಿವಮೊಗ್ಗದ ಶ್ರೀವತ್ಸ ಹೀಲರ್, ಬೆಂಗಳೂರಿನ ರಾಮಾನುಜಂ ಪುರೋಹಿತರು, ವಾಸ್ತು ತಜ್ಞರಾದ ಶ್ರೀಧರ್, ಗಾಯಕ ಅಜ್ಜಪ್ಪ, ಜ್ಯೋತಿಷಿಗಳು, ಕಾವೇರಿ ಕಾಲೇಜಿನ ತೀರ್ಥೆಗೌಡರು ಹಾಗೂ ಪ್ರಾಂಶುಪಾಲರಾದ ಶ್ರೀಮತಿ ರೂಪಶ್ರೀ ದೀಪ ಪ್ರಜ್ವಲನೆ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸ್ಥಾಪಕರಾದ ವಿದ್ವಾನ್ ಮೂಗೂರು ಮಧುದೀಕ್ಷಿತ್ ಗುರೂಜಿ ಅವರು, ಜ್ಯೋತಿಷ್ಯ ಮತ್ತು ವಾಸ್ತು ಶಾಸ್ತ್ರಗಳ ಮಹತ್ವವನ್ನು ವಿವರಿಸಿ, ಇವು ಮಾನವ ಜೀವನಕ್ಕೆ ವೈಜ್ಞಾನಿಕ ಹಾಗೂ ಆಧ್ಯಾತ್ಮಿಕ ಮಾರ್ಗದರ್ಶನ ನೀಡುವ ಶಾಸ್ತ್ರಗಳಾಗಿವೆ ಎಂದು ಹೇಳಿದರು.

ಯಶಸ್ವಿಯಾಗಿ ಸಮಾರಂಭದಲ್ಲಿ ಜ್ಯೋತಿಷ್ಯ ಸರ್ಟಿಫಿಕೇಟ್, ಡಿಪ್ಲೊಮಾ ಹಾಗೂ ಅಡ್ವಾನ್ಸ್ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಜೊತೆಗೆ ಪಂಚಪಕ್ಷಿ ಶಾಸ್ತ್ರ ಮತ್ತು ಜ್ಯೋತಿಷ್ಯ ಪಂಡಿತ ಅಧ್ಯಯನ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ವಿದ್ಯಾರ್ಥಿಗಳ ಸಾಧನೆಗೆ ಅಭಿನಂದನೆ ಸಲ್ಲಿಸಿ, ಅವರು ಮುಂದಿನ ದಿನಗಳಲ್ಲಿ ಸಮಾಜಕ್ಕೆ ಉಪಯುಕ್ತ ಸೇವೆ ಸಲ್ಲಿಸಲಿ ಎಂದು ಹಾರೈಸಲಾಯಿತು.

ಕಾರ್ಯಕ್ರಮದಲ್ಲಿ ಗುರುಕುಲದ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಗಣ್ಯರು ಉಪಸ್ಥಿತರಿದ್ದರು. ಸುಮಾರು 160 ವಿದ್ಯಾರ್ಥಿಗಳು ಭಾಗವಹಿಸಿದ್ದ ಈ ಸಮಾರಂಭವು ಸಾಂಸ್ಕೃತಿಕ ಹಾಗೂ ವಿದ್ಯಾಮಯ ವಾತಾವರಣದಲ್ಲಿ ಭರ್ಜರಿಯಾಗಿ ನಡೆಯಿತು.

ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಮೈಸೂರು, ಮಾ.21–ವೀರಶೈವ/ಲಿಂಗಾಯತ ಧರ್ಮ, ಸಾಹಿತ್ಯ, ಇತಿಹಾಸ, ಕಲೆ ಹಾಗೂ ಸಂಸ್ಕೃತಿಗೆ ಸಂಬಂಧಿಸಿದಂತೆ 2025ನೇ ಸಾಲಿನಲ್ಲಿ ಪ್ರಕಟವಾಗಿರುವ ಕೃತಿಗಳನ್ನು ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ ನೀಡಲಾಗುವ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಗೆ ಆಹ್ವಾನಿಸಲಾಗಿದೆ. ಲೇಖಕರು ಹಾಗೂ ಪ್ರಕಾಶಕರು ಪ್ರಕಟಿತ ಕೃತಿಗಳನ್ನು ಪ್ರಶಸ್ತಿ ಸಮಿತಿಯ ಅವಗಾಹನೆಗಾಗಿ ನಿರ್ದೇಶಕರು, ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570004 ವಿಳಾಸಕ್ಕೆ 31 ಮಾರ್ಚ್ 2026ರ ಒಳಗಾಗಿ ಕಳುಹಿಸಲು ಕೋರಿದೆ. ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಯನ್ನು 1983ರಿಂದ ಪ್ರತಿ ವರ್ಷ ಉತ್ತಮ ಕೃತಿಗಳಿಗೆ ನೀಡಲಾಗುತ್ತಿದೆ. ಇಲ್ಲಿಯವರೆಗೆ 37 ಕೃತಿಗಳಿಗೆ ಪ್ರಶಸ್ತಿ ನೀಡಲಾಗಿದೆ. ಪ್ರಶಸ್ತಿಯು ಪ್ರಶಸ್ತಿಫಲಕ, ಸ್ವಸ್ತಿವಾಚನ, ಫಲತಾಂಬೂಲ ಹಾಗೂ 25,000 ರೂ. ಗಳ ಗೌರವಧನವನ್ನು ಒಳಗೊಂಡಿರುತ್ತದೆ.

ನಾಳೆಯಿಂದ ಕ್ಯಾನ್ಸರ್ ಕೇರ್ ಶಿಬಿರ

ಮೈಸೂರು,ಮಾ.21–ಮೈಸೂರಿನ ಆಲನಹಳ್ಳಿಯ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮಾ.23ರಿಂದ 31 ರವರೆಗೆ ಕ್ಯಾನ್ಸರ್ ಕೇರ್ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಹಸಿವಾಗದಿರುವುದು, ನಿದ್ರಾಹೀನತೆ, ಅಜೀರ್ಣ, ಮಲಬದ್ಧತೆ, ತೂಕ ಇಳಿಕೆ, ದೌರ್ಬಲ್ಯ, ನೋವು, ರಕ್ತಹೀನತೆಯಿಂದ ಬಳುತ್ತಿರುವವರು ಹಾಗೂ ಕಿಮೋಥೆರಪಿ ಮತ್ತು ರೇಡಿಯೇಷನ್ ಚಿಕಿತ್ಸೆಯಿಂದಾಗುವ ಅಡ್ಡ ಪರಿಣಾಮಗಳಿಂದ ಬಳಲುತ್ತಿರುವವರು ಈ ಶಿಬಿರದ ಪ್ರಯೋಜನ ಪಡೆಯಬಹುದು. ಶಿಬಿರದಲ್ಲಿ ಅನುಭವಿ ವೈದ್ಯರಿಂದ ತಪಾಸಣೆ ಹಾಗೂ ಉಚಿತ ಔಷಧಗಳನ್ನು ನೀಡಲಾಗುತ್ತದೆ. ಶಿಬಿರವು ಬೆಳಗ್ಗೆ 9.30 ರಿಂದ ಸಂಜೆ 4.30ರವರೆಗೆ ನಡೆಯಲಿದೆ. ಮಾಹಿತಿಗೆ ಮೊ: 9606208682, 9538367282 ಸಂಪರ್ಕಿಸಬಹುದು.

ಪಿಎನ್‌ಜಿ ಸಂಪರ್ಕ ಪಡೆದವರು ಎಲ್‌ಪಿಜಿ ಸಿಲಿಂಡರ್ ವಾಪಸ್‌ಗೆ ಸೂಚನೆ

ಮೈಸೂರು, ಮಾ.21(ಎಂಕೆ)–ಪಿಎನ್‌ಜಿ(ಪೈಪ್ಡ್ ನ್ಯಾಚುರಲ್ ಗ್ಯಾಸ್) ಸಂಪರ್ಕ ಪಡೆದಿರುವ ಗ್ರಾಹಕರು, ತಮ್ಮಲ್ಲಿರುವ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ವಾಪಸ್ ನೀಡುವಂತೆ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ತೈಲ ಕಂಪನಿಗಳಿಂದ ಸೂಚಿಸಲಾಗಿದೆ ಎಂದು ಎಲ್‌ಪಿಜಿ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್ ತಿಳಿಸಿದ್ದಾರೆ.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಇರಾನ್–ಇಸ್ರೇಲ್ ಮತ್ತು ಅಮೆರಿಕ ನಡುವಿನ ಯುದ್ಧದಿಂದಾಗಿ ಉಂಟಾಗಿರುವ ಎಲ್‌ಪಿಜಿ ಸಿಲಿಂಡರ್ ವ್ಯತ್ಯಯ ಸರಿದೂಗಿಸುವ ನಿಟ್ಟಿನಲ್ಲಿ ಗೇಲ್ (ಇಂಡಿಯಾ) ಲಿಮಿಟೆಡ್ (GAIL-Gas Authority of India Limited) ನೀಡುವ ದತ್ತಾಂಶ ಆಧರಿಸಿ, ಪಿಎನ್‌ಜಿ ಸಂಪರ್ಕ ಪಡೆದಿರುವ ಗ್ರಾಹಕರು ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ವಾಪಸ್ ನೀಡುವಂತೆ ತಿಳಿಸಲಾಗಿದೆ ಎಂದಿದ್ದಾರೆ.

ಅಲ್ಲದೆ ಪ್ರತಿನಿತ್ಯ ತೈಲ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್, ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಹಾಗೂ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನಿಂದ ರಾಜ್ಯಕ್ಕೆ ಪ್ರತಿದಿನ 10 ಸಾವಿರ ವಾಣಿಜ್ಯ ಸಿಲಿಂಡರ್ ಪೂರೈಕೆಗೆ ನಿರ್ಧರಿಸಲಾಗಿದ್ದು, ರಾಜ್ಯ ಸರ್ಕಾರ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಮೂಲಕ ಅಗತ್ಯವಿರುವಲ್ಲಿಗೆ ವಾಣಿಜ್ಯ ಗ್ಯಾಸ್ ಸಿಲಿಂಡರ್ ಪೂರೈಕೆ ಮಾಡಲು ನಿರ್ಣಯ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಪಿಎನ್‌ಜಿ ಕೊರತೆ ಇಲ್ಲ: ದೇಶದಲ್ಲಿಯೇ ಶೇ.50 ರಷ್ಟು ಪಿಎನ್‌ಜಿ ಉತ್ಪಾದನೆ ಮಾಡುವುದರಿಂದ ಹಾಗೂ ಉಳಿದ ಶೇ.50ರಷ್ಟನ್ನು ರಷ್ಯಾ ಮತ್ತಿತರ ದೇಶಗಳಿಂದ ಆಮದು ಮಾಡಿಕೊಳ್ಳುವುದರಿಂದ ಯಾವುದೇ ಕೊರತೆ ಇಲ್ಲ. ಹಾಗೆಯೇ ಡೀಸೆಲ್ ಮತ್ತು ಪೆಟ್ರೋಲ್ ಪೂರೈಕೆಯಲ್ಲೂ ಕೊರತೆಯಾಗದಂತೆ ತೈಲ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದ್ದಾರೆ.

ಮೈಸೂರಿನಲ್ಲಿ ಹೂಟಗಳ್ಳಿ ಸೇರಿದಂತೆ ಕೆಲ ಭಾಗದಲ್ಲಿ ಪಿಎನ್‌ಜಿ ಪೂರೈಕೆಯಾಗುತ್ತಿದ್ದು, ಪಿಎನ್‌ಜಿ ಗ್ರಾಹಕರು ತಮ್ಮ ಬಳಿ ಇರುವ ಎಲ್‌ಪಿಜಿ ಸಂಪರ್ಕ ವಾಪಸ್ ಮಾಡಿದರೆ, ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ಪೂರೈಕೆಯನ್ನು ಯಾವುದೇ ಸಮಸ್ಯೆಯಾಗದಂತೆ ನಿರ್ವಹಣೆಗೆ ಸಹಕಾರಿಯಾಗುತ್ತದೆ ಎಂದು ಮೇಹುಲ್ ಪಟೇಲ್ ಹೇಳಿದ್ದಾರೆ.



> ಮುಖ್ಯವಾಗಿ ವಾಣಿಜ್ಯ ಸಿಲಿಂಡರ್ ಪೂರೈಕೆಯನ್ನು ತೈಲ ಕಂಪನಿಗಳಲ್ಲಿ ನೋಂದಣಿಯಾಗಿರುವ ಏಜೆನ್ಸಿಗಳ ಮೂಲಕ ವಿತರಣೆ ಮಾಡಲಿದ್ದು, ಸರ್ಕಾರ ಸೂಚಿಸಿದವರಿಗೆ ಮಾತ್ರವೇ ವಾಣಿಜ್ಯ ಸಿಲಿಂಡರ್ ವಿತರಿಸಲಾಗುವುದು. ಸರ್ಕಾರ ಸೂಚನೆ ಮೀರಿ ಅನಧಿಕೃತವಾಗಿ ವಾಣಿಜ್ಯ ಸಿಲಿಂಡರ್ ವಿತರಿಸಿದರೆ ಏಜೆನ್ಸಿ ಮಾಲೀಕರ ವಿರುದ್ಧ ಕ್ರಮ ಜರುಗಿಸಲಾಗುವುದು.
>
> –ಮೇಹುಲ್ ಪಟೇಲ್

ಇ–ಕೆವೈಸಿ ಕಡ್ಡಾಯ

ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಗ್ರಾಹಕರು ಇ–ಕೆವೈಸಿ(ದಾಖಲೆಗಳ ಪರಿಶೀಲನೆ) ಹಾಗೂ ಸೇಫ್ಟಿ ಇನ್‌ಸ್ಪೆಕ್ಷನ್ (ಸುರಕ್ಷತಾ ತಪಾಸಣೆ)ಯನ್ನು ಕಡ್ಡಾಯವಾಗಿ ಮಾಡಿಸಿಕೊಳ್ಳಬೇಕು. ಇಲ್ಲದಿದ್ದರೆ ಗ್ಯಾಸ್ ಸಿಲಿಂಡರ್ ಬುಕಿಂಗ್ ಮಾಡಲು ಸಾಧ್ಯವಿಲ್ಲ. ಗ್ಯಾಸ್ ಏಜೆನ್ಸಿ ಕಚೇರಿ ಹಾಗೂ ಗ್ಯಾಸ್ ವಿತರಣೆ ಮಾಡುವ ಸಿಬ್ಬಂದಿ ಮೂಲಕವೂ ಇ–ಕೆವೈಸಿ ಮಾಡಿಸಿಕೊಳ್ಳಬಹುದಾಗಿದೆ.

ತುಮಕೂರಲ್ಲಿ ವೀಡಿಯೋ ಮಾಡಿಟ್ಟು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಕಚೇರಿಯಲ್ಲೇ ನೇಣಿಗೆ ಶರಣು

ತುಮಕೂರು: ಜಿಲ್ಲೆಯ ಪಾವಗಡ ಪಟ್ಟಣದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ (59) ಕಚೇರಿಯಲ್ಲೇ ನೇಣಿಗೆ ಶರಣಾಗಿದ್ದಾರೆ. ಸಾವಿಗೆ ಮುಂಚೆ ತಮ್ಮ ಸಾವಿಗೆ ಜಂಟಿ ನಿರ್ದೇಶಕ ಕಾರಣವೆಂದು ಹೇಳಿ ಮಾಡಿರುವ ವಿಡಿಯೊ ವೈರಲ್ ಆಗಿದೆ.

ಮಲ್ಲಿಕಾರ್ಜುನ ಆತ್ಮಹತ್ಯೆಗೆ ಮುನ್ನ ಮಾಡಿರುವ ವಿಡಿಯೋದಲ್ಲಿ ತಮ್ಮ ಸಾವಿಗೆ ಜಂಟಿ ನಿರ್ದೇಶಕ ಕೃಷ್ಣಪ್ಪ ಕಾರಣ ಎಂದು ಆರೋಪಿಸಿದ್ದಾರೆ. ನನ್ನ ತಾಯಿ, ಪತ್ನಿ ಮತ್ತು ಮಕ್ಕಳು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ. ಆದರೆ ಮೇಲಧಿಕಾರಿ ನೀಡಿದ ಕಿರುಕುಳದಿಂದ ಈ ನಿರ್ಧಾರಕ್ಕೆ ಬಂದಿದ್ದೇನೆ ಎಂದು ವಿಡಿಯೋದಲ್ಲಿ ತಿಳಿಸಿದ್ದಾರೆ. ಕೃಷ್ಣಪ್ಪ ಅವರಿಗೆ ದೇವರು ಹಾಗೂ ಕಾನೂನು ಶಿಕ್ಷೆ ನೀಡಲಿದೆ ಎಂದೂ ಹೇಳಿದ್ದಾರೆ.


ಮಲ್ಲಿಕಾರ್ಜುನ

ಡೆತ್ ನೋಟ್ ವಶಕ್ಕೆ ಪಡೆದಿರುವ ಪೊಲೀಸರು: ಮಲ್ಲಿಕಾರ್ಜುನ ಮೂಲತಃ ಪಾವಗಡ ತಾಲೂಕಿನವರಾಗಿದ್ದು, ಕಳೆದ 3 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಇನ್ನೂ ಕೆಲವೇ ದಿನಗಳಲ್ಲಿ ಅವರ ಸೇವಾ ಅವಧಿ ಮುಕ್ತಾಯಗೊಳ್ಳಬೇಕಿತ್ತು. ಆದರೆ ಜಂಟಿ ನಿರ್ದೇಶಕ ನೀಡಿದ ಕಿರುಕುಳದಿಂದ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎನ್ನಲಾಗಿದೆ. ಘಟನೆ ನಡೆದ ದಿನ ಸಂಜೆ, ಕಚೇರಿಯ ಎಲ್ಲಾ ಸಿಬ್ಬಂದಿ ತೆರಳಿದ ನಂತರ ಅವರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವುದು ತಿಳಿದುಬಂದಿದೆ.

ದೇಶ – ವಿದೇಶ

ಕೇರಳದಲ್ಲಿ ಬಿಎಲ್‌ಓ ಆತ್ಮಹತ್ಯೆ; ಕಾರ್ಯದೊತ್ತಡ ಕಾರಣವೆಂದ ಕುಟುಂಬ

ಕಾಸರಗೋಡು: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಬೂತ್ ಮಟ್ಟದ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಶಾಲಾ ಶಿಕ್ಷಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೊರ್ಗಲ್ ಪುಥುರ್ ನಿವಾಸಿ ಸವದ್ ಆತ್ಮಹತ್ಯೆ ಮಾಡಿಕೊಂಡವರು. ಚೇರ್ಕಲ್ ಸರ್ಕಾರಿ ಪ್ರೌಢ ಶಾಲೆ ಶಿಕ್ಷಕರಾಗಿದ್ದ ಇವರು, ಚುನಾವಣೆ ಹಿನ್ನೆಲೆ ತಾತ್ಕಾಲಿಕವಾಗಿ ಬೂತ್ ಅಧಿಕಾರಿಯಾಗಿ ನಿಯೋಜನೆಗೊಂಡಿದ್ದರು. ಮೊರ್ಗಲ್ ಸೇತುವೆ ಬಳಿ ಇವರು ಬೈಕ್ ಪಾರ್ಕ್ ಮಾಡಿ ಬಳಿಕ ನದಿಗೆ ಹಾರಿದ್ದರು. ತಕ್ಷಣವೇ ಸ್ಥಳೀಯರು ಕಾಸರಗೋಡು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ. ಪತ್ತೆಯಾಗಿರುವ ಡೆತ್‌ನೋಟ್‌ನಲ್ಲಿ ವೈಯಕ್ತಿಕ ಸಮಸ್ಯೆಗಳ ಬಗ್ಗೆ ಅದರಲ್ಲಿ ಉಲ್ಲೇಖಿಸಲಾಗಿದೆ. ಕೆಲಸದ ಒತ್ತಡ ಸಂಬಂಧ ಏನನ್ನೂ ಪ್ರಸ್ತಾಪಿಸಿಲ್ಲ ಎಂದು ಚುನಾವಣಾಧಿಕಾರಿ ಬಿನು ಜೋಸೆಫ್ ಹೇಳಿದ್ದಾರೆ. ಆದರೆ, ಅಧಿಕಾರಿಗಳ ಹೇಳಿಕೆಯನ್ನು ಕುಟುಂಬಸ್ಥರು ತಳ್ಳಿಹಾಕಿದ್ದಾರೆ. ಜೊತೆಗೆ ಸವದ್ ಸಾವು ಆತ್ಮಹತ್ಯೆಯಲ್ಲ, ಅದು ಸಾಂಸ್ಥಿಕ ವೈಫಲ್ಯ ಎಂದು ದೂರಿದ್ದಾರೆ. ಹೆಚ್ಚುವರಿಯಾಗಿ ಬಿಎಲ್‌ಒ ಜವಾಬ್ದಾರಿ ನೀಡಿದ್ದರಿಂದ ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು ಎಂದು ಕುಟುಂಬ ಆರೋಪಿಸಿದೆ. ಈ ಸಂಬಂಧ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.



ಮಗುಚಿದ ಸ್ಪೀಡ್ ಬೋಟ್: ಐವರು ನಾಪತ್ತೆ, ಸಿಂಘಾನಿಯಾ ಪಾರು

ಮಾಲ್ಡೀವ್ಸ್: ಇಲ್ಲಿನ ಫೆಲಿದೊ ದ್ವೀಪದಲ್ಲಿ ಸ್ಪೀಡ್ ಬೋಟ್ ಮಗುಚಿದ ಪರಿಣಾಮ ರೇಮಂಡ್ ಗ್ರೂಪ್‌ನ ಮುಖ್ಯಸ್ಥ ಗೌತಮ್ ಸಿಂಘಾನಿಯಾ ಅವರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಈ ಅವಘಡದಲ್ಲಿ ಭಾರತ ಮೂಲದ ಇಬ್ಬರು ನಾಪತ್ತೆಯಾಗಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಬ್ರಿಟನ್ ಮತ್ತು ರಷ್ಯಾ ಮೂಲದ ಇಬ್ಬರು ಮಹಿಳೆಯರು ಐವರು ಭಾರತೀಯರು ಸೇರಿ 7 ಮಂದಿ ಬೋಟ್‌ನಲ್ಲಿದ್ದರು. ಬೋಟ್ ಮಗುಚಿ ಸಮುದ್ರಕ್ಕೆ ಬಿದ್ದಾಗ ರಷ್ಯಾ ಮಹಿಳೆ ಮತ್ತು ನಾಲ್ವರು ಭಾರತೀಯರು ನೀರಿಗೆ ಧುಮುಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಿಂಘಾನಿಯಾ ಅವರನ್ನು ರಕ್ಷಿಸಲಾಗಿದ್ದು, ಸದ್ಯ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ನಾಪತ್ತೆಯಾಗಿರುವ ಭಾರತೀಯರ ಪತ್ತೆಗೆ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಖಾಸಗಿ ಶಾಲೆ ಶುಲ್ಕ ಪಾರದರ್ಶಕತೆಗೆ ಹರಿಯಾಣ ಸರ್ಕಾರ ಆದೇಶ

ಚಂಡೀಗಢ: ಖಾಸಗಿ ಶಾಲೆಗಳು ಮನಬಂದಂತೆ ಶುಲ್ಕ ಏರಿಕೆ ಮಾಡುವ ಪ್ರವೃತ್ತಿಗೆ ಕಡಿವಾಣ ಹಾಕಲು ಮುಂದಾಗಿರುವ ಹರಿಯಾಣ ಸರ್ಕಾರವು, 2026–27ನೇ ಶೈಕ್ಷಣಿಕ ಸಾಲಿಗೆ 'ಫಾರ್ಮ್–6' ಸಲ್ಲಿಕೆಯನ್ನು ಕಡ್ಡಾಯಗೊಳಿಸಿ ಮಹತ್ವದ ಆದೇಶ ಹೊರಡಿಸಿದೆ. ರಾಜ್ಯದ ಪ್ರೌಢಶಿಕ್ಷಣ ನಿರ್ದೇಶನಾಲಯವು ಈ ಕುರಿತು ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಈ ಫಾರ್ಮ್ ಸಲ್ಲಿಸಿದ ಶಾಲೆಗಳಿಗೆ ಶುಲ್ಕ ಹೆಚ್ಚಿಸಲು ಯಾವುದೇ ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸುವುದರ ಜೊತೆಗೆ ನಿಯಮ ಉಲ್ಲಂಘಿಸುವ ಶಾಲೆಗಳ ಎಂಐಎಸ್ ಖಾತೆಗಳನ್ನು ಸ್ಥಗಿತಗೊಳಿಸುವ ಎಚ್ಚರಿಕೆಯನ್ನೂ ನೀಡಿದೆ. ಪಾರದರ್ಶಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಶಾಲಾ ಶುಲ್ಕವನ್ನು ಕಡ್ಡಾಯ ಮತ್ತು ಐಚ್ಛಿಕ ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ನೋಂದಣಿ ಶುಲ್ಕ, 1, 6, 9 ಮತ್ತು 11ನೇ ತರಗತಿಗಳ ಪ್ರವೇಶಾತಿ ಶುಲ್ಕ ಹಾಗೂ ಮಂಡಳಿ ಪರೀಕ್ಷಾ ಶುಲ್ಕಗಳನ್ನು ಕಡ್ಡಾಯ ವಿಭಾಗದಲ್ಲಿ ಮತ್ತು ಸಾರಿಗೆ, ಹಾಸ್ಟೆಲ್ ಹಾಗೂ ಮೆಸ್ ಸೌಲಭ್ಯಗಳನ್ನು ಐಚ್ಛಿಕವಾಗಿ ಇರಿಸಲಾಗಿದೆ. ತಾವು ಸಲ್ಲಿಸಿದ ವಿವರಗಳ ಪಟ್ಟಿಯನ್ನು ಶಾಲೆಯ ನೋಟಿಸ್ ಬೋರ್ಡ್ ಹಾಗೂ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕು. ಶಾಲೆಗಳು ಫಾರ್ಮ್–6ನಲ್ಲಿ ಘೋಷಿಸಿದ ಯಾವುದೇ ಹೆಚ್ಚುವರಿ ಹಣವನ್ನು ಪೋಷಕರಿಂದ ವಸೂಲಿ ಮಾಡುವಂತಿಲ್ಲ.

ಆಟೋ ಬಿಡಿಭಾಗ ಕಾರ್ಖಾನೆಯಲ್ಲಿ ಬೆಂಕಿ ಅವಘಡ; 10 ಮಂದಿ ಸಾವು

ದಕ್ಷಿಣ ಕೊರಿಯಾ: ಇಲ್ಲಿನ ಪ್ರಮುಖ ನಗರ ಡೇಜಿಯಾನ್‌ನಲ್ಲಿರುವ ಆಟೋ ಬಿಡಿಭಾಗಗಳ ಕಾರ್ಖಾನೆಯಲ್ಲಿ ಭಾರಿ ಅಗ್ನಿ ಅವಘಡ ಸಂಭವಿಸಿದ ಪರಿಣಾಮ 10 ಜನ ಸಾವನ್ನಪ್ಪಿ, 59ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಅಲ್ಲದೆ ನಾಲ್ವರು ಕಾಣೆಯಾಗಿದ್ದಾರೆ.



ಅಗ್ನಿಶಾಮಕ ದಳ, ಪೊಲೀಸರು ಮತ್ತು ತುರ್ತು ಸಿಬ್ಬಂದಿ ಸೇರಿದಂತೆ 500ಕ್ಕೂ ಹೆಚ್ಚು ರಕ್ಷಣಾ ಕಾರ್ಯಕರ್ತರು ಕಾರ್ಯಾಚರಣೆ ಕೈಗೊಂಡಿದ್ದು, ಸುಟ್ಟ ಅವಶೇಷಗಳಿಂದ ಶನಿವಾರ 10 ಶವಗಳನ್ನು ಹೊರತೆಗೆದಿದ್ದಾರೆ. ನಗರದ ಡೇಡಿಯೋಕ್ ಜಿಲ್ಲೆಯ ಅಗ್ನಿಶಾಮಕ ದಳದ ಮುಖ್ಯಸ್ಥ ನಾಮ್ ಡಿಯುಕ್–ವೂ, ಬೆಂಕಿಯು ಕಾರ್ಖಾನೆಯ ಕಟ್ಟಡವನ್ನು ನಾಶಪಡಿಸಿದೆ. ಶುಕ್ರವಾರ ತಡರಾತ್ರಿ ಅಧಿಕಾರಿಗಳು ಕಟ್ಟಡವನ್ನು ತಂಪಾಗಿಸಲು ಮಾನವರಹಿತ ಅಗ್ನಿಶಾಮಕ ರೋಬೋಟ್‌ಗಳನ್ನು ನಿಯೋಜಿಸಿ ಸುರಕ್ಷತಾ ಪರಿಶೀಲನೆ ನಡೆಸಿದ ನಂತರ ಕಾಣೆಯಾದ ಕಾರ್ಮಿಕರಿಗಾಗಿ ಹುಡುಕಾಟ ಪ್ರಾರಂಭಿಸಲಾಯಿತು. ಬೆಂಕಿ ಹೊತ್ತಿಕೊಳ್ಳಲು ತಕ್ಷಣಕ್ಕೆ ಯಾವುದೇ ಕಾರಣ ತಿಳಿದು ಬಂದಿಲ್ಲ. ವಿಮಾನ, ಮಾನವರಹಿತ ನೀರಿನ ಫಿರಂಗಿ ವಾಹನ ಮತ್ತು ತಲುಪಲು ಕಷ್ಟವಾಗುವ ಪ್ರದೇಶಗಳಿಗೆ 2 ಅಗ್ನಿಶಾಮಕ ರೋಬೋಟ್‌ಗಳು ಸೇರಿದಂತೆ ಸುಮಾರು 120 ವಾಹನಗಳು ಮತ್ತು ಉಪಕರಣಗಳ ತುಣುಕುಗಳನ್ನು ನೂರಾರು ಸಿಬ್ಬಂದಿಯನ್ನು ರಕ್ಷಣಾ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ.

ಆಂಧ್ರದಲ್ಲಿ ಬಸ್ ಬೆಂಕಿಗಾಹುತಿ; ಪ್ರಯಾಣಿಕರು ಪ್ರಾಣಾಪಾಯದಿಂದ ಪಾರು

ಭುವನೇಶ್ವರ: ಭುವನೇಶ್ವರದಿಂದ ಮಲ್ಕಂಗಿರಿಗೆ ತೆರಳುತ್ತಿದ್ದ ಖಾಸಗಿ ಬಸ್‌ಗೆ ಶುಕ್ರವಾರ ತಡರಾತ್ರಿ ಬೆಂಕಿ ಹೊತ್ತಿಕೊಂಡಿದ್ದು, ಚಾಲಕನ ಸಮಯ ಪ್ರಜ್ಞೆಯಿಂದ ಎಲ್ಲಾ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಒಡಿಶಾ ಗಡಿಯ ಬಳಿ ಇರುವ ಆಂಧ್ರಪ್ರದೇಶದ ರಾಮಭದ್ರಪುರಂ ಬಳಿ ಈ ಘಟನೆ ನಡೆದಿದ್ದು, ಈ ಬಸ್‌ನಲ್ಲಿ ಮಲ್ಕಂಗಿರಿ ಚಿತ್ರಕೊಂಡ ಕಾಂಗ್ರೆಸ್ ಶಾಸಕ ಮಂಗು ಖಿಲ್ ಸೇರಿದಂತೆ ಅನೇಕ ಪ್ರಯಾಣಿಕರಿದ್ದರು. ರಾಮಭದ್ರಪುರಂ ಬಳಿ ಬಸ್‌ನಲ್ಲಿ ಶಾರ್ಟ್ ಸರ್ಕ್ಯೂಟ್ ಉಂಟಾಗಿ, ಕೆಲ ಹೊತ್ತಿನಲ್ಲೇ ಬೆಂಕಿ ಆವರಿಸಿದೆ. ಕೂಡಲೇ ಚಾಲಕ ಬಸ್ ನಿಲ್ಲಿಸಿ, ಮಲಗಿದ್ದ ಪ್ರಯಾಣಿಕರನ್ನು ಎಚ್ಚರಗೊಳಿಸಿ ಕೆಳಗೆ ಇಳಿಸಿದ್ದಾರೆ. ಬಳಿಕ ಬೆಂಕಿ ಜ್ವಾಲೆ ಎಲ್ಲೆಡೆ ಆವರಿಸಿ, ಬಸ್ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿದೆ. ಚಾಲಕ ಪ್ರಯಾಣಿಕರನ್ನು ಕೆಳಗಿಳಿಸುವುದು ಸ್ವಲ್ಪ ತಡವಾಗಿದ್ದರೂ ಸಾವು–ನೋವು ಸಂಭವಿಸುವ ಸಾಧ್ಯತೆ ಇತ್ತು. ಕಾಂಗ್ರೆಸ್ ಶಾಸಕ ಮಂಗು ಖಿಲ್ ಸಾಮಾಜಿಕ ಮಾಧ್ಯಮದಲ್ಲಿ ಈ ಬಗ್ಗೆ ಪೋಸ್ಟ್ ಮಾಡಿದ್ದು, ಘಟನೆಯಲ್ಲಿ ಬಸ್ ಸಂಪೂರ್ಣವಾಗಿ ಸುಟ್ಟುಹೋಗಿದೆ. ಅದೃಷ್ಟವಶಾತ್ ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ ಎಂದು ತಿಳಿಸಿದ್ದಾರೆ. ಸಮಯಪ್ರಜ್ಞೆ ಮೆರೆದ ಚಾಲಕನ ಬಗ್ಗೆ ಭಾರೀ ಪ್ರಶಂಸೆ ವ್ಯಕ್ತವಾಗಿದೆ.



ಸಾವಿನಲ್ಲಿ ರಾಜಕಾರಣ ಮಾಡುತ್ತಿರುವ ಬಿಜೆಪಿ

ಶಾಸಕ ಪೊನ್ನಣ್ಣ ಆಕ್ರೋಶ


ಶಾಸಕ ಎ.ಎಸ್.ಪೊನ್ನಣ್ಣ ಶನಿವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮಡಿಕೇರಿ, ಮಾ.21–ಕೊಡಗಿನ ಕಾಡಾನೆ–ಮಾನವ ಸಂಘರ್ಷ ತಡೆಯುವ ಜವಾಬ್ದಾರಿ ರಾಜ್ಯದಷ್ಟೇ ಕೇಂದ್ರ ಸರಕಾರಕ್ಕೂ ಇದೆ. ಕೇಂದ್ರದಿಂದ ಸಮಸ್ಯೆ ಬಗೆಹರಿಕೆಗೆ ಎಷ್ಟು ಅನುದಾನ ಒದಗಿಸಿದೆ ಎಂಬುದನ್ನು ಇದೀಗ ಕಾಂಗ್ರೆಸ್ ವಿರುದ್ಧ ಆರೋಪ ಮಾಡುತ್ತಿರುವ ಬಿಜೆಪಿ ಬಹಿರಂಗ ಪಡಿಸಲಿ ಎಂದು ಶಾಸಕ ಎ.ಎಸ್.ಪೊನ್ನಣ್ಣ ಆಗ್ರಹಿಸಿದ್ದಾರೆ.

ಕಾಡಾನೆಗಳ ಹಾವಳಿಯಿಂದ ಯಾರೂ ತೊಂದರೆಗೆ ಒಳಗಾಗಬಾರದು. ಹೀಗಿದ್ದರೂ ಸಿದ್ದಾಪುರ, ಕುಶಾಲನಗರ, ಬೆಟ್ಟತ್ತೂರಿನಲ್ಲಿ ಮೂವರು ಸಾವನ್ನಪ್ಪಿರುವ ದುರ್ಘಟನೆ ನಡೆದಿದೆ. ಇದನ್ನೆ ಬಳಸಿಕೊಂಡ ಬಿಜೆಪಿ ಪ್ರತಿಭಟನೆ ಮತ್ತು ರಸ್ತೆ ತಡೆ ಮಾಡುವ ಮೂಲಕ ಜನರ ಸಾವಿನಲ್ಲಿ ರಾಜಕಾರಣ ಮಾಡುತ್ತಿದೆ ಎಂದು ತೀವ್ರ ಆಕ್ರೋಶ ವ್ಯಕ್ತ ಪಡಿಸಿದರು. ಬಿಜೆಪಿಯ ಧೋರಣೆಗಳನ್ನು ಗಮನಿಸಿದರೆ ಅವರು ಜನರ ಸಾವಿಗೆ ಕಾಯುತ್ತಿರುವ ಶಂಕೆ ವ್ಯಕ್ತವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಾವೇ ಸಂಭವಿಸಿಲ್ಲವೆ?: ಜಿಲ್ಲೆಯಲ್ಲಿ 25 ವರ್ಷಗಳ ಕಾಲ ಅಧಿಕಾರದಲ್ಲಿದ್ದ ಬಿಜೆಪಿಯ ಅವಧಿಯಲ್ಲಿ ಕಾಡಾನೆಗಳ ಹಾವಳಿಯಿಂದ ಜೀವ ಹಾನಿಯೇ ಸಂಭವಿಸಿಲ್ಲವೆ ಎಂದು ಪ್ರಶ್ನಿಸಿದ ಪೊನ್ನಣ್ಣ ಅಂಕಿ ಅಂಶಗಳನ್ನು ಮುಂದಿಟ್ಟರು. 2020–21ನೇ ಸಾಲಿನಲ್ಲಿ 13 ಮಂದಿ, 2022–23ನೇ ಸಾಲಿನಲ್ಲಿ 15 ಮಂದಿ ಸಾವನ್ನಪ್ಪಿದ್ದಾರೆ. ಆ ಸಂದರ್ಭ ಯಾರು ಇಲ್ಲಿ ಶಾಸಕರಾಗಿದ್ದರು? ಯಾರು ಅರಣ್ಯ ಸಚಿವರಾಗಿದ್ದರು? ಎಂದು ಪ್ರಶ್ನಿಸಿದರಲ್ಲದೇ ಅವರನ್ನು ಯಾವ ಆಸ್ಪತ್ರೆಗೆ, ಯಾವ ಝೂಗೆ ಕಳುಹಿಸಬೇಕೆಂದು ಎಂದು ಸುದ್ದಿಗೋಷ್ಠಿ ಯಲ್ಲಿ ವ್ಯಂಗ್ಯವಾಡಿದರು.

2023–24ನೇ ಸಾಲಿನಲ್ಲಿ ಕಾಡಾನೆ ದಾಳಿಯಿಂದ 10 ಮಂದಿ, 2024–25ನೇ ಸಾಲಿನಲ್ಲಿ 8 ಮಂದಿ ಹಾಗೂ ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ 12 ಜೀವಹಾನಿ ಪ್ರಕರಣಗಳು ಸಂಭವಿಸಿವೆ. ಸಮಸ್ಯೆಯನ್ನು ಎಲ್ಲರೂ ಒಗ್ಗೂಡಿ ವೈಜ್ಞಾನಿಕವಾಗಿ ಬಗೆಹರಿಸುವ ನಿಟ್ಟಿನಲ್ಲಿ ಮುಂದುವರಿಯಬೇಕಾಗಿದೆ. ಈ ನಡುವೆ ಸಿದ್ದಾಪುರದಲ್ಲಿ ಕಾಡಾನೆ ದಾಳಿಗೆ ಸಿಲುಕಿ ಸತ್ತ ವ್ಯಕ್ತಿಯ ಮೃತದೇಹವನ್ನು ಮುಂದಿಟ್ಟು ಪ್ರತಿಭಟನೆಗೆ ಬಿಜೆಪಿ ಮುಂದಾಗಿತ್ತು ಎಂದು ಬೇಸರ ವ್ಯಕ್ತಪಡಿಸಿದರು.

ಕೇಂದ್ರದ ಬಿಡಿಗಾಸು ಇಲ್ಲ: ಕಾಡಾನೆ ಮತ್ತು ಮಾನವ ಸಂಘರ್ಷ ತಡೆ ಕೇವಲ ರಾಜ್ಯ ಸರ್ಕಾರದ ಜವಾಬ್ದಾರಿಯಲ್ಲ. ಇದರಲ್ಲಿ ಕೇಂದ್ರದ ಪಾತ್ರವೂ ಇದೆ. ಪ್ರಾಜೆಕ್ಟ್ ಎಲಿಫೆಂಟ್, ಪ್ರಾಜೆಕ್ಟ್ ಟೈಗರ್ ಯೋಜನೆಗಳು ಕೇಂದ್ರ ಸರ್ಕಾರದ್ದಾಗಿದೆ. ಇವುಗಳ ಬಗ್ಗೆ ಗಮನ ಹರಿಸಲು ಕೇಂದ್ರದ ಅರಣ್ಯ ಸಚಿವರು ಇದ್ದಾರೆ. 12 ವರ್ಷಗಳ ಅವಧಿಯಲ್ಲಿ ಕೇಂದ್ರ ಪ್ರಾಯೋಜಿತ ಯೋಜನೆಗಳಡಿ ಕರ್ನಾಟಕಕ್ಕೆ ಎಷ್ಟು ಅನುದಾನ ಬಂದಿದೆ ಎನ್ನುವುದನ್ನು ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ ಬಹಿರಂಗಪಡಿಸಲಿ ಎಂದು ಸವಾಲೊಡ್ಡಿದರು.

ಬಜೆಟ್‌ನಿಂದ ಹಲವು ಸೌಲಭ್ಯ: ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲಿ ಕೊಡಗಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದ್ದು, ಆದಿವಾಸಿಗಳು ಮತ್ತು ಕೊಡವ ಸಮುದಾಯದ ಅಭಿವೃದ್ಧಿಗೆ ನಿಗಮವನ್ನು ಸ್ಥಾಪಿಸಿದೆ. ಕಾರ್ಮಿಕರಿಗೆ ಅನುಕೂಲವಾಗುವ ಶ್ರಮಿಕ ವಸತಿ ಶಾಲೆ ನಿರ್ಮಾಣಕ್ಕೆ ಅನುವು ಮಾಡಿಕೊಡಲಾಗಿದೆ. ವಿ.ಬಾಡಗದಲ್ಲಿ ಕ್ರೀಡಾ ತರಬೇತಿ ಕೇಂದ್ರದ ಸ್ಥಾಪನೆಗೆ ಒತ್ತು ನೀಡಲಾಗಿದೆ ಎಂದು ತಿಳಿಸಿದರು. ರಸ್ತೆಗಳ ಜಿಲ್ಲಾ ಮತ್ತು ರಾಜ್ಯ ದರ್ಜೆ ರಸ್ತೆಗಳ ಅಭಿವೃದ್ಧಿಗೂ ಅನುದಾನ ಮೀಸಲಿಡಲಾಗಿದೆ. ಇದರಿಂದ ಮುಂಬರುವ ದಿನಗಳಲ್ಲಿ ರಸ್ತೆಗಳ ಅಭಿವೃದ್ಧಿಯೂ ಸಾಧ್ಯವಾಗಲಿದೆ ಎಂದು ಹೇಳಿದರು.

ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಎಸ್. ಅರುಣ್ ಮಾಚಯ್ಯ, ಮಾಜಿ ಎಂಎಲ್‌ಸಿ ಶಾಂತೆಯಂಡ ವೀಣಾ ಅಚ್ಚಯ್ಯ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಧರ್ಮಜ ಉತ್ತಪ್ಪ, ಕೊಲ್ಲೀರ ಗಿರೀಶ್, ಪಕ್ಷದ ಪ್ರಮುಖರಾದ ಟಿ.ಪಿ.ರಮೇಶ್, ತೆನ್ನಿರ ಮೈನ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಹೆಬ್ಬಾಲೆಯಲ್ಲಿ ಅದ್ಧೂರಿಯಾಗಿ ನಡೆದ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ


ಶ್ರೀ ಆಂಜನೇಯ ಸ್ವಾಮಿ ವಾರ್ಷಿಕ ಉತ್ಸವ ಶ್ರದ್ಧಾಭಕ್ತಿಯೊಂದಿಗೆ ನಡೆಯಿತು.

ಕುಶಾಲನಗರ, ಮಾ.21–ಸಮೀಪದ ಹೆಬ್ಬಾಲೆ ಬಳಿಯ ಹನುಮಂತಪುರ ಗ್ರಾಮದ ಪವಿತ್ರ ಕಾವೇರಿ ನದಿ ದಂಡೆ ಮೇಲಿರುವ ಇತಿಹಾಸ ಪ್ರಸಿದ್ಧ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ವಾರ್ಷಿಕ ಬ್ರಹ್ಮ ರಥೋತ್ಸವ ಶನಿವಾರ ಶ್ರದ್ಧಾಭಕ್ತಿಯೊಂದಿಗೆ ಅದ್ಧೂರಿಯಾಗಿ ನಡೆಯಿತು.

ಶ್ರೀ ಆಂಜನೇಯ ಸ್ವಾಮಿ ದೇವಾಲಯ ಹಾಗೂ ಸರ್ಪೂರಿ ಶ್ರೀ ದಂಡಿನಮ್ಮ ದೇವಾಲಯದಲ್ಲಿ ವಿಶೇಷ ಪೂಜಾಮಹೋತ್ಸವ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ಜರುಗಿತು. ಪ್ರತಿ ವರ್ಷದಂತೆ ಈ ಬಾರಿಯು ಜರುಗಿದ ವಾರ್ಷಿಕ ಬ್ರಹ್ಮ ರಥೋತ್ಸವದಲ್ಲಿ ನೂರಾರು ಭಕ್ತರು ಭಾಗಿಯಾಗಿ ತೇರನ್ನು ದೇವಸ್ಥಾನ ಬಳಿಯಿಂದ ಕಾವೇರಿ ನದಿ ದಂಡೆವರೆಗೆ ಎಳೆಯುವ ಮೂಲಕ ದೇವರ ಕೃಪೆಗೆ ಪಾತ್ರರಾದರು.


ಬೆಟ್ಟದಪುರ ಕನ್ನಡ ಮಠದ ಶ್ರೀ ಚಿಕ್ಕವೀರದೇಶಿಕೇಂದ್ರ ಸ್ವಾಮೀಜಿ ಅಲಂಕೃತ ರಥಕ್ಕೆ ಪೂಜೆ ಸಲ್ಲಿಸಿದ ಬಳಿಕ ಮಧ್ಯಾಹ್ನ 12 ಗಂಟೆಗೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಇದಕ್ಕೂ ಮೊದಲು ದೇವಾಲಯದ ಆವರಣದಲ್ಲಿ ಸೀತಾರಾಘವ ಕಲ್ಯಾಣೋತ್ಸವ ನಡೆಯಿತು. ನಂತರ ಇದೇ ಪ್ರಥಮ ಬಾರಿಗೆ ದೇವಾಲಯ ಸಮಿತಿ ಅಧ್ಯಕ್ಷ ಹೆಚ್.ಶಿಂಗ್ರಿಶೆಟ್ಟಿ ಅವರು ರೂ.3 ಲಕ್ಷ ರೂ. ವೆಚ್ಚದಲ್ಲಿ ಶಿಲ್ಪಿ ಪ್ರವೀಣ್ ಮೂಲಕ ಚಿಕ್ಕ ಹೊಸ ರಥ ನಿರ್ಮಿಸಿ ಕೊಟ್ಟಿದ್ದು, ಅದರಲ್ಲೇ ರಾಮ, ಲಕ್ಷ್ಮಣ, ಸೀತೆ ಹಾಗೂ ಆಂಜನೇಯ ಸ್ವಾಮಿ ವಿಗ್ರಹ ಪ್ರತಿಷ್ಠಾಪಿಸಿ ಮಂಗಳವಾದ್ಯಗಳೊಂದಿಗೆ ದೇವಾಲಯದ ಆವರಣದಲ್ಲಿ ಮೆರವಣಿಗೆ ನಡೆಸಲಾಯಿತು.

ಅರ್ಚಕ ವೆಂಕಟಸ್ವಾಮಿ ನೇತೃತ್ವದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ನಡೆದವು. ವೀರಭದ್ರೇಶ್ವರ ವೀರಗಾಸೆ ಕುಣಿತ ರಥೋತ್ಸವಕ್ಕೆ ಮೆರುಗು ನೀಡಿತು. ಮೆರವಣಿಗೆಯುದ್ದಕ್ಕೂ ರಥಕ್ಕೆ ಈಡುಗಾಯಿಯೊಂದಿಗೆ ಹೂ, ಬಾಳೆಹಣ್ಣನ್ನು ಎಸೆದು ಭಕ್ತಿ ಮೆರೆದರು. ರಥೋತ್ಸವದಲ್ಲಿ ಮೈಸೂರು, ಹಾಸನ, ಕೊಡಗು ಜಿಲ್ಲೆಗಳ ಗಡಿಗ್ರಾಮದ ಜನರು ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ನೂರಾರು ಜನರು ಪಾಲ್ಗೊಂಡಿದ್ದರು.

ದೇವಾಲಯ ಆವರಣದಲ್ಲಿ ಸೇರಿದ್ದ ಜಾತ್ರೆ ಗ್ರಾಮೀಣ ಸಂಸ್ಕೃತಿಯನ್ನು ಪ್ರತಿಬಿಂಬಿಸಿತು. ಮಹಿಳೆಯರು ಬಳೆಗಳನ್ನು ಕೊಂಡುಕೊಂಡು ಸಂಭ್ರಮಿಸಿದರು. ರಥೋತ್ಸವಕ್ಕೆ ಆಗಮಿಸಿದ್ದ ಅಪಾರ ಭಕ್ತರು ಸರದಿ ಸಾಲಿನಲ್ಲಿ ತೆರಳಿ ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿ ದೇವರ ಕೃಪೆಗೆ ಪಾತ್ರರಾದರು. ದೇವಾಲಯ ಸಮಿತಿ ಹಾಗೂ ದಾನಿಗಳ ಸಹಕಾರದಿಂದ ನೆರೆದಿದ್ದ ಭಕ್ತರಿಗೆ ಅನ್ನಸಂತರ್ಪಣೆ ನೆರವೇರಿಸಲಾಯಿತು.

ಸಮಿತಿ ಕಾರ್ಯಾಧ್ಯಕ್ಷ ಎಸ್.ಎಸ್. ಶಂಕರಪ್ಪ ಕಾರ್ಯದರ್ಶಿ ಎಂ.ಕೆ.ಶಿವ ರಾಮು, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತೀಶ್ ವೆಂಕಟೇಶ್, ಮೋಹನ್ ರಾಜ್, ಮಂಜುನಾಥ್, ವಿಶ್ವನಾಥ್ ಮತ್ತಿತರರು ಪಾಲ್ಗೊಂಡಿದ್ದರು.

ಕಾರು–ಬೈಕುಗಳ ನಡುವೆ ಡಿಕ್ಕಿ: ಸವಾರರಿಬ್ಬರ ಸಾವು



ಮಡಿಕೇರಿ, ಮಾ.21–ಕಾರು ಮತ್ತು ಎರಡು ಬೈಕ್‌ಗಳ ನಡುವೆ ಭೀಕರ ಅಪಘಾತ ಸಂಭವಿಸಿದ ಪರಿಣಾಮ ಸವಾರರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಗೋಣಿಕೊಪ್ಪ–ತಿತಿಮತಿ–ಮೈಸೂರು ರಸ್ತೆಯಲ್ಲಿ ನಡೆದಿದೆ. ನಂಜನಗೂಡು ನಿವಾಸಿ ಶಿವಕುಮಾರ್(25) ಹಾಗೂ ಕೇರಳ ಪಾಲಕ್ಕಾಡ್ ನಿವಾಸಿ ಮೊಹಮದ್ ಶಿಹಾಬ್ (27) ಮೃತ ಯುವಕರಾಗಿದ್ದಾರೆ. ಅಪಘಾತದ ತೀವ್ರತೆಗೆ ಮೂರು ವಾಹನಗಳು ತೀವ್ರ ಜಖಂಗೊಂಡಿವೆ.

ಐಷಾರಾಮಿ ಕಾರು(ಕೆಎ.03, ಎನ್‌ಹೆಚ್–1179) ಮೈಸೂರು–ತಿತಿಮತಿ ಮಾರ್ಗವಾಗಿ ಗೋಣಿಕೊಪ್ಪ ಕಡೆಗೆ ಆಗಮಿಸುತ್ತಿತ್ತು. ಇದೇ ಮಾರ್ಗವಾಗಿ ನಂಜನಗೂಡು ನಿವಾಸಿ ಶಿವಕುಮಾರ್ ಮತ್ತು ಕೇರಳ ಪಾಲಕ್ಕಾಡ್ ನಿವಾಸಿ ಮೊಹಮದ್ ಶಿಹಾಬ್ ಅವರು ಇತರ 6 ಮಂದಿ ಸ್ನೇಹಿತರ ಜೊತೆಯಲ್ಲಿ ಪ್ರತ್ಯೇಕ ಬೈಕ್‌ಗಳಲ್ಲಿ ಮೈಸೂರು ಕಡೆಗೆ ತೆರಳುತ್ತಿದ್ದರು.

ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಗೋಣಿಕೊಪ್ಪ–ತಿತಿಮತಿ ಹೆದ್ದಾರಿಯ ದೇವರಪುರ ಬಳಿ ಕಾರು ಮೊದಲಿಗೆ ಶಿವಕುಮಾರ್ ಅವರ ಬೈಕ್(ಕೆಎ09, 8507)ಗೆ ಡಿಕ್ಕಿ ಹೊಡೆದಿದ್ದ ಕಾರು ಬಳಿಕ ಚಾಲಕನ ನಿಯಂತ್ರಣ ಕಳೆದುಕೊಂಡು ಮೊಹಮದ್ ಶಿಹಾಬ್ ಬೈಕ್‌ಗೆ ಡಿಕ್ಕಿಯಾಗಿದೆ. ಪರಿಣಾಮ ಎರಡೂ ಬೈಕ್‌ಗಳಲ್ಲಿದ್ದ ಸವಾರರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಆಗಮಿಸಿದ ಗೋಣಿಕೊಪ್ಪ ಪೊಲೀಸರು ಸ್ಥಳ ಮಹಜರು ನಡೆಸಿ ಮೃತ ದೇಹಗಳನ್ನು ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದ ಶವಾಗಾರಕ್ಕೆ ಸ್ಥಳಾಂತರಿಸಿ ವಾಹನಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ವಂಚಿತ ಇಬ್ಬರು ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಸಮ್ಮತಿ

ಮಡಿಕೇರಿ, ಮಾ.21–ಈ ಬಾರಿಯ 10ನೇ ತರಗತಿ ಪರೀಕ್ಷೆ ಬರೆಯಲು ವಂಚಿತರಾಗಿದ್ದ ಇಬ್ಬರು ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ ಎಂದು ಬೆಟ್ಟಗೇರಿಯ ಉದಯ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷ ತಳೂರು ಎ.ಕಿಶೋರ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಶಿಕ್ಷಣ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಇಬ್ಬರು ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರವನ್ನು ನಿರಾಕರಣೆ ಮಾಡಿರುವುದರ ಬಗ್ಗೆ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಪತ್ರವನ್ನು ಬರೆಯಲಾಗಿದೆ. ಅಲ್ಲದೆ ರಾಜ್ಯ ಉಚ್ಚ ನ್ಯಾಯಾಲಯ ಆದೇಶ ನೀಡಿದ್ದರೂ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ಶಿಕ್ಷಣ ಇಲಾಖೆ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲು ಮಾಡಲಾಗುವುದು. ಆಡಳಿತ ಮಂಡಳಿಯು ಈಗಾಗಲೇ ಇಬ್ಬರು ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷೆ ಬರೆಯಲು ಪ್ರವೇಶ ಪತ್ರ ಇಲ್ಲದಿರುವುದಕ್ಕೆ ಶಿಕ್ಷಣ ಇಲಾಖೆಯ ಬೇಜವಾಬ್ದಾರಿತನವೇ ಮುಖ್ಯ ಕಾರಣವಾಗಿದೆ. ಶಿಕ್ಷಣ ಇಲಾಖೆಯ ಉಪನಿರ್ದೇಶಕರು ವಿದ್ಯಾರ್ಥಿಗಳ ಪ್ರವೇಶ ಪತ್ರ ನಿರಾಕರಣೆಗೆ ಆಡಳಿತ ಮಂಡಳಿಯವರು ಹೊಣೆ ಹೊರಬೇಕು ಎಂದು ಹೇಳಿಕೆ ನೀಡಿರುವುದು ಖಂಡನೀಯ. ಶಾಲೆಯ ಎಸ್‌ಟಿಯಸ್ ಮತ್ತು ಎಸ್‌ಎಸ್ ಎಲ್‌ಸಿ ಪೋರ್ಟಲ್‌ನ್ನು ದಾಖಲು ಮಾಡುವುದು ಆಡಳಿತ ಮಂಡಳಿಯ ಕೆಲಸ ಆಗಿರುವುದಿಲ್ಲ. ಇದನ್ನು ಕ್ಷೇತ್ರ ಶಿಕ್ಷಣ ಅಧಿಕಾರಿಗಳು ಮಾಡಬೇಕಾಗುತ್ತದೆ ಎಂದರು.

ನಮ್ಮ ಸಂಸ್ಥೆಯಿಂದ ಅನುಮತಿಗಾಗಿ ಹಲವು ಬಾರಿ ದಾಖಲಾತಿಯೊಂದಿಗೆ ಮನವಿ ಸಲ್ಲಿಸಿದ್ದರು ಭೂ ಪರಿವರ್ತನೆಯಾಗಿಲ್ಲ ಎಂದು ಸಬೂಬು ಹೇಳಿ ವಿದ್ಯಾರ್ಥಿಗಳಿಗೆ ತೊಂದರೆ ಮಾಡುವುದು ಸರಿಯಲ್ಲ. ಬೆಂಗಳೂರಿನಿಂದ ಶಿಕ್ಷಣ ಮಂಡಳಿ ಕರೆ ಮಾಡಿ ಲಾಗಿನ್ ಓಪನ್ ಮಾಡಲು ತಿಳಿಸಿದರೂ ದೂರವಾಣಿಯನ್ನು ಸ್ವೀಕರಿಸದೆ ಶಿಕ್ಷಣ ಅಧಿಕಾರಿಗಳು ನಿರ್ಲಕ್ಷಿಸಿದ್ದಾರೆ. ಅನುಮತಿಗಾಗಿ ಶಿಕ್ಷಣ ಇಲಾಖೆ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೊಡಿದ್ದು ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದು ಹೇಳಿದ್ದಾರೆ.

ವಿದ್ಯಾರ್ಥಿಗಳಿಗೆ ಅನುಮತಿ ಕೊಡಿಸಿದ ಶಾಸಕ ಪೊನ್ನಣ್ಣ



ಮಡಿಕೇರಿ: ತಾಲೂಕಿನ ಬೆಟ್ಟಗೇರಿಯ ಉದಯ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡಿದ ಇಬ್ಬರು ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಅನುಮತಿ ಕೊಡಿಸುವಲ್ಲಿ ಶಾಸಕ ಪೊನ್ನಣ್ಣ ಯಶಸ್ವಿಯಾಗಿದ್ದಾರೆ.

ವಿದ್ಯಾರ್ಥಿಗಳಿಬ್ಬರಿಗೆ ಪರೀಕ್ಷೆಗೆ ಅವಕಾಶ ನಿರಾಕರಿಸಿದ್ದನ್ನು ಅರಿತ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಪ್ರೌಢ ಶಿಕ್ಷಣ ಇಲಾಖೆ ಉನ್ನತಾಧಿಕಾರಿಗಳ ಜೊತೆಯಲ್ಲಿ ಸುದೀರ್ಘ ಚರ್ಚೆ ನಡೆಸಿ ತಾಂತ್ರಿಕ ಕಾರಣ ಮತ್ತು ಶಾಲೆಯ ಅನುಮತಿ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡು, ಮಕ್ಕಳ ವಿದ್ಯಾಭ್ಯಾಸದ ಭವಿಷ್ಯಕ್ಕೆ ತೊಡಕಾಗಬಾರದು ಎಂದು ಸೋಮವಾರದಿಂದ ಎಂದಿನಂತೆ ಇಬ್ಬರು ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುವು ಮಾಡಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ಪೋಷಕರೊಂದಿಗೆ ಮಡಿಕೇರಿಯಲ್ಲಿ ಶಾಸಕರನ್ನು ಭೇಟಿಯಾಗಿ ಅವರಿಗೆ ಧನ್ಯವಾದ ಸಲ್ಲಿಸಿದರು.

ನಾಪೋಕ್ಲು ಶಕ್ತಿ ಕೇಂದ್ರಕ್ಕೆ ಪದಾಧಿಕಾರಿಗಳ ಆಯ್ಕೆ

ನಾಪೋಕ್ಲು, ಮಾ.21–ಇಲ್ಲಿಯ ಬಿಜೆಪಿ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷರನ್ನಾಗಿ ಮುಕ್ಕಾಟಿರ. ಎಮ್.ವಿನಯ್ ಅವರು ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿಯಾಗಿ ನಿಡುಮಂಡ ಕೃತಿ, ಸದಸ್ಯರಾಗಿ ಕಾಂಡಂಡ ಪ್ರತಿಜಾ ಅಚ್ಚಪ್ಪ, ತೀಯರ ಸುಕುಮಾರ, ಪೇರೂರು ವಿಶ್ವಪ್ಪ ಅಯ್ಕೆ ಆಗಿದ್ದಾರೆ.

ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಎ.ಕೆ.ಮನು ಮುತ್ತಪ್ಪ ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜಗದೀಶ, ತಾಲೂಕು ಭಾಜಪ ಉಪಾಧ್ಯಕ್ಷ ಮನು ಮಹೇಶ, ಬಲ್ಲಮಾವಟಿ ಶಕ್ತಿ ಕೇಂದ್ರದ ಪ್ರಮುಖ ಕರವಂಡ ಲವ ನಾಣಯ್ಯ ಸಹ ಪ್ರಮುಖ್ ದೀಪಕ್, ನಾಪೋಕ್ಲು ಸಹ ಪ್ರಮುಖ್ ನಿರನ್ ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಹರೀಶ್ ಪೂವಯ್ಯ, ಬೂತ್ ಅಧ್ಯಕ್ಷರು ಹಾಗೂ ಕಾರ್ಯಕರ್ತರು ಹಾಜರಿದ್ದರು. ಮಡಿಕೇರಿ ನಗರ ಪ್ರಧಾನ ಕಾರ್ಯದರ್ಶಿ ಬಿ.ಕೆ.ಜಗದೀಶ್ ಪದಾಧಿಕಾರಿಗಳ ಆಯ್ಕೆಯ ನೇತೃತ್ವ ವಹಿಸಿದ್ದರು.

ಬೇಗೂರಲ್ಲಿ ಸಾಮೂಹಿಕ ಪ್ರಾರ್ಥನೆ




ಬೇಗೂರು(ಗುಂಡ್ಲುಪೇಟೆ): ಗ್ರಾಮದಲ್ಲಿ ಮುಸ್ಲಿಂ ಬಾಂಧವರು ಪವಿತ್ರ ರಂಜಾನ್ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು.

ಒಂದು ತಿಂಗಳಿನಿಂದ ಉಪವಾಸ ಆಚರಣೆಯನ್ನು ಮಾಡುತ್ತಿದ್ದು, ಚಂದ್ರ ದರ್ಶನವಾದ ಹಿನ್ನೆಲೆಯಲ್ಲಿ ಉಪವಾಸವನ್ನು ಕೊನೆಗೊಳಿಸಿ ಹಿರಿಯರು, ಕಿರಿಯರು, ಮಕ್ಕಳು ಸೇರಿದಂತೆ ಎಲ್ಲರೂ ಹೊಸ ಬಟ್ಟೆಗಳನ್ನು ತೊಟ್ಟು ಸಂಭ್ರಮದಿಂದ ಹಬ್ಬವನ್ನು ಆಚರಿಸಿದರು. ಅಕ್ಕ ಪಕ್ಕದ ಗ್ರಾಮಗಳಿಂದಲೂ ಸಹ ಬೇಗೂರಿಗೆ ಬಂದು ಬೆಳಿಗ್ಗೆ 9.30 ಗಂಟೆಗೆ ಹಳೆಯ ಮಸೀದಿ ಮುಂಭಾಗದಿಂದ ಮೆರವಣಿಗೆಯಲ್ಲಿ ಹೊರಟು ಮಸ್ಜಿದ್–ಈ–ಮುಬಾರಕ್ ತಲುಪಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಧರ್ಮ ಗುರುಗಳಾದ ಅಸ್ಲಾಂ ಖಾನ್ ಶಾಂತಿ ದೂತ, ಕರುಣಾಸಾಗರ ಮೊಹಮ್ಮದ್ ಪೈಗಂಬರರ ಜೀವನ ಚರಿತ್ರೆ ಹಾಗೂ ರಂಜಾನ್ ಹಬ್ಬದ ಸಂದೇಶವನ್ನು ಪಠಿಸಿದರು.

ಈ ಸಂದರ್ಭದಲ್ಲಿ ಮಸೀದಿಯ ಮುಖಂಡರುಗಳಾದ ಮಟನ್ ಬಾಬು, ಅಬ್ದುಲ್ ಜಬ್ಬಾರ್, ಕರವೇ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಿಯಾಜ್ ಪಾಷ, ಅಬ್ದುಲ್ ಖಾದರ್ (ಟೈಲರ್ ಬಾಬು), ಮೊಹಮ್ಮದ್ ಝಿಕ್ರಿಯಾಸಾಬ್, ನಿಸ್ಸಾರ್ ಅಹಮ್ಮದ್, ಮೊಹಮ್ಮದ್ ಇಲಿಯಾಸ್, ಇಮ್ರಾನ್ ಖಾನ್, ಮೊಹಮದ್ ಪಾಷ, ನೂರ್ ಮೊಹಮ್ಮದ್, ಫೈರೋಜ್ ಖಾನ್, ಇಶ್ರೀಫ್ ಬೇಗ್, ಅಕ್ಬರ್ ಖಾನ್, ಫಾಝಿಲ್, ಫ್ಲೈಮಿಂಗ್ ಮಿಲ್ ಜಾವಿದ್, ನವೀದ್, ಆಸೀಫ್, ತನ್ವೀರ್, ಮೊಹಮ್ಮದ್ ಫಾರೂಕ್, ನಯಾಜ್, ನಿಟ್ರೆ ಗ್ರಾಮದ ಮುನ್ಸೂರ್, ಸೋಮಹಳ್ಳಿಯ ಸಿರಾಜುದ್ದೀನ್, ಶಾಮಿಯಾನ ಮುಬಾರಕ್, ಅಕ್ರು, ನಾಲ್ ಅಲ್ತಾಫ್, ಸಲ್ಮಾನ್, ಗ್ಯಾರೇಜ್ ಅಲ್ತಾಫ್, ಇಸಮಾಯಿಲ್ ಸೇರಿದಂತೆ ಮತ್ತಿತರರಿದ್ದರು.

ಚಾ.ನಗರ ಜಿಲ್ಲೆಯಾದ್ಯಂತ ಸಂಭ್ರಮದ ರಂಜಾನ್ ಆಚರಣೆ


ಮುಸ್ಲಿಂ ಬಾಂಧವರು ಶನಿವಾರ ಸಾಮೂಹಿಕ ಪ್ರಾರ್ಥನೆಯಲ್ಲಿ ತೊಡಗಿರುವುದು

ಚಾಮರಾಜನಗರ: ಜಿಲ್ಲೆಯಾದ್ಯಂತ ಮುಸ್ಲಿಂ ಸಮುದಾಯದವರು ಶನಿವಾರ ಈದ್ ಉಲ್ ಫಿತ್ರ್ (ರಂಜಾನ್) ಅನ್ನು ಶ್ರದ್ಧೆ, ಭಕ್ತಿ, ಸಂಭ್ರಮದಿಂದ ಆಚರಿಸಿದರು.

ತ್ಯಾಗ, ಶಾಂತಿಯ ಸಂಕೇತದ ಹಬ್ಬವನ್ನು ತಿಂಗಳ ಉಪವಾಸ ವ್ರತ ಅಂತ್ಯಗೊಳಿಸುವ ಮೂಲಕ ಭಕ್ತಿಯಿಂದ ಆಚರಿಸಿದರು.

ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ಸೇರಿದಂತೆ ಗ್ರಾಮೀಣ ಭಾಗ ದಲ್ಲಿ ಮುಸ್ಲಿಂ ಬಾಂಧವರು ಬೆಳಗ್ಗೆ ತಮ್ಮ ಊರಿನ ಈದ್ಗಾ ಮೈದಾನಗಳಲ್ಲಿ ಸಮಾವೇಶಗೊಂಡು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಹೊಸ ಧಿರಿಸಿನೊಂದಿಗೆ ಹಬ್ಬ ಸ್ವಾಗತಿಸಿದ ಮಂದಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಹರ್ಷ ವ್ಯಕ್ತಪಡಿಸಿದರು. ನಗರ ಸೇರಿದಂತೆ ಕೆಲವೆಡೆ ಸಾಮೂಹಿಕ ಪ್ರಾರ್ಥನೆ ನಂತರ ಸಮುದಾಯದ ಎಲ್ಲರೂ ಒಟ್ಟುಗೂಡಿ ಮೆರವಣಿಗೆ ನಡೆಸಿದರು. ಸ್ಥಿತಿವಂತರು ತಮ್ಮ ಧರ್ಮದ ಬಡ ಮಂದಿಗೆ ಕೈಲಾದಷ್ಟು ದಾನ ಮಾಡಿದರಲ್ಲದೇ ಹಿರಿಯರಿಂದ ಆಶೀರ್ವಾದ ಪಡೆದರು.

ಜಿಲ್ಲಾ ಕೇಂದ್ರದಲ್ಲಿನ ಸೋಮವಾರಪೇಟೆ ಬಳಿಯಲ್ಲಿ ಇರುವ ಈದ್ಗಾ ಮೈದಾನ ಹಾಗೂ ಪಾಲಿಟೆಕ್ನಿಕ್ ಕಾಲೇಜಿನ ಹಿಂಭಾಗದಲ್ಲಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆಯನ್ನು ಶ್ರದ್ಧಾ, ಭಕ್ತಿಯಿಂದ ಸಲ್ಲಿಸಿದರು.

ಹಿಂದಿನ ಎರಡು ದಿನಗಳ ಹಿಂದೆಯೇ ಈದ್ಗಾವನ್ನು ಶುಚಿಗೊಳಿಸುವ ಕಾರ್ಯ ನಡೆದಿತ್ತು. ಎರಡು ಈದ್ಗಾದಲ್ಲೂ ಶಾಮಿಯಾನ ಹಾಕಿಸಲಾಗಿತ್ತು. ಈದ್ಗಾ ಮೈದಾನಕ್ಕೆ ತೆರಳಲಾಗದವರು ಮಸೀದಿಯಲ್ಲೇ ಪ್ರಾರ್ಥನೆ ಸಲ್ಲಿಸುವ ಮೂಲಕ ಹಬ್ಬ ಆಚರಿಸಿದರು.

ಮುಸ್ಲಿಂ ಧರ್ಮ ಗುರುಗಳಾದ ಅಬ್ದುಲ್ ಹಸೀಬ್ ಅವರು ರಂಜಾನ್ ಹಬ್ಬದ ಮಹತ್ವದ ಸಂದೇಶ ಸಾರಿದರು.

ಪುಟ್ಟ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಎಲ್ಲರು ಹೊಸ ಬಟ್ಟೆ ತೊಟ್ಟು ಕಂಗೊಳಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಜಿಲ್ಲಾ ಕೇಂದ್ರವಲ್ಲದೇ ಕೊಳ್ಳೇಗಾಲ, ಗುಂಡ್ಲುಪೇಟೆ, ಹನೂರು, ಯಳಂದೂರು ಸೇರಿದಂತೆ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ರಂಜಾನ್ ಹಬ್ಬದ ಆಚರಣೆ ಜೋರಾಗಿತ್ತು.

ಪೊಲೀಸ್ ಬಂದೋಬಸ್ತ್: ರಂಜಾನ್ ಆಚರಣೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯಾಗಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ರಂಜಾನ್ ಸಾಮೂಹಿಕ ಪ್ರಾರ್ಥನೆ ನಡೆಯುವ ಪ್ರದೇಶದಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಭದ್ರತೆ ಕೈಗೊಂಡಿದ್ದು, ಕೆಲವು ಮುಖ್ಯರಸ್ತೆಗಳಲ್ಲಿ ಪರ್ಯಾಯ ಸಂಪರ್ಕ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಲ್ಲಿ ಪೊಲೀಸ್ ಗಸ್ತು ವಾಹನ ಸುತ್ತಾಡುತ್ತಿದ್ದು, ಸಂಚಾರ ನಿಯಂತ್ರಣಕ್ಕೆ ಹೆಚ್ಚುವರಿ ಟ್ರಾಫಿಕ್ ಪೊಲೀಸರನ್ನು ನಿಯೋಜಿಸಲಾಗಿತ್ತು.

ಜಿಲ್ಲೆಯ ಹನೂರು ಪಟ್ಟಣದಲ್ಲಿ ಮುಸ್ಲಿಂ ಬಾಂಧವರು ಪವಿತ್ರ ಈದ್ ಉಲ್ ಫಿತ್ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿದರು. ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ಮುಸ್ಲಿಂ ಸಮುದಾಯದವರ ಬೀದಿಗಳಲ್ಲಿ ಸಡಗರ ಕಳೆಗಟ್ಟಿತ್ತು. ಶುಕ್ರವಾರದ ಸಂಜೆಯೇ ಆಗಸದಲ್ಲಿ ಚಂದ್ರ ಗೋಚರಿಸಿದ ತರುವಾಯ ಕಳೆದೊಂದು ತಿಂಗಳಿನಿಂದ ಕೈಗೊಂಡಿದ್ದ ಉಪವಾಸ ವ್ರತವನ್ನು ಅಂತ್ಯಗೊಳಿಸಿದರು.

ಶನಿವಾರ ಬೆಳಗ್ಗೆ ಹೊಸ ಬಟ್ಟೆಗಳನ್ನು ತೊಟ್ಟು ಮಸೀದಿಗಳ ಬಳಿ ಜಮಾಯಿಸಿ ಶುಭಾಶಯ ವಿನಿಮಯ ಮಾಡಿಕೊಂಡರು.

ಮಸೀದಿ ಬೀದಿಯಿಂದ ಮೆರವಣಿಗೆಯಲ್ಲಿ ಈದ್ಗಾ ಮೈದಾನಕ್ಕೆ ತೆರಳಿ ಒಂದೆಡೆ ಕುಳಿತು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಭಕ್ತಿ ಭಾವೈಕ್ಯತೆ ಮೆರೆದರು.

ವಿವಿಧೆಡೆ ಪ್ರಾರ್ಥನೆ: ತಾಲೂಕಿನ ಕೌದಳ್ಳಿ, ಬಂಡಳ್ಳಿ, ರಾಮಾಪುರ, ಅಜ್ಜಿಪುರ ಕುರುಬರದೊಡ್ಡಿ, ಎಲ್ಲೆಮಾಳ ಚಿತ್ತಾಪುರದಲ್ಲೂ ಮುಸಲ್ಮಾನರು ವಿಶೇಷ ಪ್ರಾರ್ಥನೆ ಸಲ್ಲಿಸಿ ಈದ್ ಉಲ್ ಫಿತ್ ಹಬ್ಬ ಆಚರಿಸಿದರು.

ಯಳಂದೂರಿನಲ್ಲಿ ರಂಜಾನ್ ಆಚರಣೆ



ಯಳಂದೂರು: ಪಟ್ಟಣವೂ ಸೇರಿದಂತೆ ತಾಲೂಕಿನ ವಿವಿಧೆಡೆ ಶನಿವಾರ ಮುಸ್ಲಿಮರ ಪವಿತ್ರ ರಂಜಾನ್ ಮಾಸದ ಉಪವಾಸ ಅಂತ್ಯಗೊಳಿಸುವ ಮೂಲಕ ಈದ್–ಉಲ್‌ಫಿತರ್ ಹಬ್ಬವನ್ನು ಸಂಭ್ರಮ ಸಡಗರಗಳಿಂದ ಆಚರಿಸಿದರು.

ಪಟ್ಟಣದ ಜಾಮೀಯಾ ಮಸೀದಿಯಿಂದ ಬೆಳಗ್ಗೆ ನೂರಾರು ಸಂಖ್ಯೆಯ ಮುಸ್ಲಿಮರು ಒಗ್ಗೂಡಿ ದೇವರ ನಾಮಗಳನ್ನು ಹಾಡುತ್ತ ಪಟ್ಟಣದ ಕೆ.ಕೆ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಜಮಾವಣೆಗೊಂಡರು. ನಂತರ ಇಲ್ಲಿನ ಮುಸ್ಲಿಂ ಧಾರ್ಮಿಕ ಗುರುಗಳಾದ ಅಬ್ರಾರ್ ಅಹಮ್ಮದ್ ಈ ಹಬ್ಬದ ವಿಶೇಷತೆಗಳ ಬಗ್ಗೆ ಧಾರ್ಮಿಕ ಪ್ರವಚನ ನೀಡಿದರು.

ಶುಭ ಕೋರಿದ ಶಾಸಕ ಎಆರ್‌ಕೆ: ಈದ್ಗಾದಲ್ಲಿ ನಮಾಜ್ ಮಾಡುವ ಸ್ಥಳಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಭೇಟಿ ನೀಡಿ ಹಬ್ಬದ ಶುಭಾಶಯ ಕೋರಿದರು.

ಬೇಡರಪುರದಲ್ಲಿ ಬೋನಿಗೆ ಬಿದ್ದ ಚಿರತೆ


ಬೋನಿಗೆ ಬಿದ್ದಿರುವ ಚಿರತೆ


ಚಾಮರಾಜನಗರ: ತಾಲೂಕಿನ ಬೇಡರಪುರ ಗ್ರಾಮದಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಗಂಡು ಚಿರತೆಯೊಂದು ಬಿದ್ದಿದೆ.

ಗ್ರಾಮದ ಮಲ್ಲಣ್ಣ ಎಂಬುವವರ ಕಬ್ಬಿನ ಗದ್ದೆಯಲ್ಲಿ ಕಳೆದ ಹದಿನೈದು ದಿನಗಳ ಹಿಂದೆ ಬಿಆರ್‌ಟಿ ಸಾಮಾಜಿಕ ಅರಣ್ಯ ಇಲಾಖೆ ಅಧಿಕಾರಿಗಳು ಇರಿಸಿದ್ದ ಬೋನಿಗೆ ಗುರುವಾರ ಸುಮಾರು 5 ವರ್ಷದ ಗಂಡು ಚಿರತೆಯೊಂದು ಸೆರೆಯಾಗಿದೆ.

ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆಯ ಅಧಿಕಾರಿಗಳು ಚಿರತೆಯನ್ನು ರಕ್ಷಣೆ ಮಾಡಿ ಸುರಕ್ಷಿತ ಸ್ಥಳಕ್ಕೆ ತೆಗೆದುಕೊಂಡು ಹೋಗಲಾಗಿದೆ.

ಒಂದೇ ತಿಂಗಳಲ್ಲಿ ಎರಡು ಚಿರತೆ ಸೆರೆ: ಕಳೆದ ಒಂದು ತಿಂಗಳ ಹಿಂದೆ ಇದೇ ಜಮೀನಿನಲ್ಲಿ ಹೆಣ್ಣು ಚಿರತೆಯನ್ನು ಸೆರೆ ಹಿಡಿಯಲಾಗಿತ್ತು. ಈಗ ಅದೇ ಜಾಗದಲ್ಲಿ ಮತ್ತೊಂದು ಗಂಡು ಚಿರತೆಯನ್ನು ಸೆರೆ ಹಿಡಿದು ರಕ್ಷಣೆ ಮಾಡಲಾಗಿದೆ ಎಂದು ಹಿರಿಯ ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಮೂಡ್ನಾಕೂಡು ಬಳಿ ಚಿರತೆ ಪ್ರತ್ಯಕ್ಷ



ಚಾಮರಾಜನಗರ: ತಾಲೂಕಿನ ಮೂಡ್ನಾಕೂಡು ಗ್ರಾಮದ ಬಳಿ ಶನಿವಾರ ರಾತ್ರಿ 8 ಗಂಟೆ ಸಂದರ್ಭದಲ್ಲಿ ಚಿರತೆಯೊಂದು ಕಾಣಿಸಿಕೊಂಡಿದೆ.

ಚಾಮರಾಜನಗರದ ಉದ್ಯಮಿ ಬಿಲ್ವ ಮಹೇಶ್ ಅವರು ಸಾಗಡೆ ಗ್ರಾಮದಿಂದ ಮೂಡ್ನಾಕೂಡು ಗ್ರಾಮದ ಮಾರ್ಗವಾಗಿ ಚಾಮರಾಜನಗರಕ್ಕೆ ಬರುತ್ತಿರುವ ಸಂದರ್ಭದಲ್ಲಿ ಗ್ರಾಮದ ಸಮೀಪವೆ ಚಿರತೆಯೊಂದು ರಸ್ತೆ ದಾಟಿತು, ಈ ದೃಶ್ಯವನ್ನು ಮಹೇಶ್ ಅವರು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ

ನ್ಯಾ.ನಾಗಮೋಹನ್ ದಾಸ್ ವರದಿ ರದ್ದುಪಡಿಸಲು ಆಗ್ರಹ

ಅಸ್ಪೃಶ್ಯರಲ್ಲೇ ಒಡಕು ಬೇಡ, ನಾವು ಒಂದಾಗಿರೋಣ



ಪತ್ರಿಕಾಗೋಷ್ಠಿಯಲ್ಲಿ ಡಾ.ವಿ.ಎನ್.ಮಹದೇವಯ್ಯ ಮಾತನಾಡಿದರು.

ಚಾಮರಾಜನಗರ: ಅವೈಜ್ಞಾನಿಕ, ಅಸಂವಿಧಾನಿಕವಾಗಿರುವ ನ್ಯಾ.ನಾಗಮೋಹನ್ ವರದಿಯನ್ನು ರದ್ದುಪಡಿಸಬೇಕು ಎಂದು ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಡಾ.ವಿ.ಎನ್.ಮಹದೇವಯ್ಯ ಸರ್ಕಾರವನ್ನು ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಒಳಮೀಸಲಾತಿ ವಿಚಾರದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ ಅವರನ್ನು ಗುರಿಯಾಗಿಸುವುದು, ನಿಂದಿಸುವುದು ಸರಿಯಲ್ಲ. ಇತ್ತೀಚೆಗೆ ಕೊಳ್ಳೇಗಾಲದಲ್ಲಿ ಒಳ ಮೀಸಲಾತಿ ವಿರೋಧಿಸಿ ನಡೆದ ಪ್ರತಿಭಟನೆಯಲ್ಲಿ ಮಹದೇವಪ್ಪ ಸೇರಿದಂತೆ ಸಮುದಾಯ ಸಚಿವರು, ಸ್ವಾಮೀಜಿ ಅವರ ಭಾವಚಿತ್ರಕ್ಕೆ ಅಪಮಾನ ಮಾಡಿರುವುದಕ್ಕೆ ನಮ್ಮ ಸಂಘಟನೆಯಿಂದ ಕ್ಷಮೆಯಾಚಿಸುತ್ತೇವೆ. ಆ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇವೆ ಎಂದರು.

ಒಳ ಮೀಸಲಾತಿ ಎಂಬುದು ಮೀಸಲಾತಿ ಪಡೆಯುತ್ತಿರುವ ಎಸ್.ಸಿ ಪಟ್ಟಿಯಲ್ಲಿರುವ ಎಲ್ಲಾ ಅಸ್ಪೃಶ್ಯ ಜಾತಿ ಸಮುದಾಯಗಳಿಗೂ ಸಂಬಂಧಿಸಿದ್ದು. ಅದರಲ್ಲಿ ಪ್ರಸ್ತುತ ಎಡಗೈ ಸಂಬಂಧಿತ ಮತ್ತು ಬಲಗೈ ಸಂಬಂಧಿತ ಎಂಬ ಎರಡು ಗುಂಪುಗಳಾಗಿದೆ. 17% ಮೀಸಲಾತಿಯನ್ನು ಎಡಗೈ ಬಲಗೈ ಸಮುದಾಯಗಳು ಹಂಚಿಕೊಳ್ಳುವುದರಲ್ಲಿ ದೊಡ್ಡ ಬಿಕ್ಕಟ್ಟು ಉಂಟಾಗಿದೆ. ಶಿಕ್ಷಣ, ಉದ್ಯೋಗ ರಾಜಕಾರಣ ಮತ್ತು ಇತರೆ ಕ್ಷೇತ್ರಗಳಲ್ಲಿ ಒಳಮೀಸಲಾತಿ ಅನುಷ್ಠಾನಗೊಳಿಸುವಾಗ ಯಾರಿಗೂ ತೊಂದರೆ ಗಯಾಗಬಾರದು. "ರೋಸ್ಟರ್ ಬಿಂದು ಎಸ್.ಸಿ ಪಟ್ಟಿಯಲ್ಲಿರುವ ಎಡಗೈ ಬಲಗೈ ಸಂಬಂಧಿತ ಎರಡು ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಸಿಗುವಂತೆ ಸೂತ್ರವನ್ನು ರೂಪಿಸಿಬೇಕು. ಈ ಸಮಸ್ಯೆ ಪರಿಹರಿಸುವ ಜವಾಬ್ದಾರಿ ಸದ್ಯಕ್ಕೆ ಸರ್ಕಾರದ ಮೇಲಿದೆ. ಮುಖ್ಯಮಂತ್ರಿಗಳು, ಎಡಗೈ ಬಲಗೈ ಸಚಿವರು ಮತ್ತು ಶಾಸಕರುಗಳು ಇದನ್ನು ಒಮ್ಮತದಿಂದ ಸಹನೆ ತಾಳ್ಮೆಯಿಂದ ಬಗೆಹರಿಸಬೇಕು. ಆದರೆ ಸದ್ಯದ ಪರಿಸ್ಥಿತಿ ದಿಕ್ಕು ತಪ್ಪಿ ಬೇರೆ ಬೇರೆ ಬೆಳವಣಿಗೆಗಳು ಆಗುತ್ತಿವೆ ಇದನ್ನ ತಾಳ್ಮೆಯಿಂದ ಎಲ್ಲರು ಬಗೆಹರಿಸುವ ಕಡೆ ಗಮನ ಕೊಡಬೇಕು ಎಂದು ಒತ್ತಾಯಿಸಿದರು.

ಈ ನಡುವೆ ಎಡಗೈ ಮತ್ತು ಬಲಗೈ ಸಮುದಾಯಗಳ ಮುಖಂಡರು ರಾಜಕಾರಣದ ಸಂಚು ಮತ್ತು ಪಿತೂರಿಗೆ ಬಲಿಯಾಗಿ ಪರಸ್ಪರ ಬೀದಿ ಕಾಳಗ ಮಾಡದಿರುವುದು ಒಳ್ಳೆಯದು. ಆಡಳಿತ ಪಕ್ಷ ವಿರೋಧ ಪಕ್ಷಗಳು ರಾಜಕೀಯ ಲಾಭ ಮಾಡಿಕೊಳ್ಳಲು ನಾವು ದಾಳಗಳಾಗಬಾರದು, ಎಡಗೈನವರಾಗಲಿ ಬಲಗೈ ನವರಾಗಲಿ ನಮ್ಮ ನಮ್ಮ ಹಕ್ಕುಗಳಿಗಾಗಿ ಹೋರಾಡೋಣ. ಆದರೆ ಯಾವುದೇ ಪರಿಸ್ಥಿತಿಯಲ್ಲಿ ತಾಳ್ಮೆ ಕಳೆದುಕೊಳ್ಳಬಾರದು. ಯಾರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುವುದು. ಅವಮಾನ ಮಾಡುವುದನ್ನು ಮಾಡಬಾರದು. ಕೆಟ್ಟ ಪದಗಳನ್ನು ಬಳಸಿ ಘೋಷಣೆ ಕೂಗುವುದು ತಪ್ಪು ಶಾಂತಿಯುತವಾಗಿ ನಮ್ಮ ಶಕ್ತಿ ಪ್ರದರ್ಶನ ಮತ್ತು ಪ್ರತಿಭಟನೆ ಮಾಡುವುದು ನಮ್ಮ ಹಕ್ಕು, ಆದರೆ ನಮ್ಮ ನಾಯಕರು, ಮಂತ್ರಿಗಳು, ಸ್ವಾಮೀಜಿಗಳು, ಮುಖಂಡರುಗಳಿಗೆ ಅಗೌರವ ತೋರಬಾರದು. ಆರೀತಿ ನಡೆದುಕೊಳ್ಳುವುದು ಅತ್ಯಂತ ಖಂಡನೀಯ, ನಮ್ಮದೇ ಮಂತ್ರಿಗಳಿಗೆ ಹಕ್ಕನ್ನು ರಕ್ಷಿಸುವಂತೆ ಮನವರಿಕೆ ಮಾಡಿ ಕಾರ್ಯೋನ್ಮುಖರಾಗುವಂತೆ ಮಾಡಬೇಕು ಎಂದರು.


ಜಿಪಂ ಮಾಜಿ ಸದಸ್ಯ ನಾಗರಾಜು ಕಮಲ್, ಪಿ.ಸಂಘಟನಾ ಭಾಗ್ಯ ಉಮ್ಮತ್ತೂರು, ರಾಜೇಂದ್ರ ಹೊನ್ನೂರು, ಮರಿ ಸ್ವಾಮಿ ಚಾಟೀಪುರ, ಲಿಂಗಣ್ಣ ಉತ್ತಂಬಳ್ಳಿ ಇದ್ದರು.

ಚಿಣ್ಣರ ಚಿಲಿಪಿಲಿ



ಚಾಮರಾಜನಗರ: ಶಂಕರಪುರ ಬಡಾವಣೆಯಲ್ಲಿನ ನವೀನ ಮಾಹಿತಿ ತಂತ್ರಜ್ಞಾನ–ಚಿಣ್ಣರ ಲೋಕ (ಪ್ರಿ–ಕೆಜಿ & ಡೇ ಕೇರ್ ಸೆಂಟರ್) ಶಾಲಾ ದಿನಾಚರಣೆ ಅಂಗವಾಗಿ "ಚಿಣ್ಣರ ಚಿಲಿಪಿಲಿ" ಕಾರ್ಯಕ್ರಮ ಆಯೋಜಿಸಲಾಯಿತು. ಮಕ್ಕಳು ಭಜನೆ, ಹಾಡುಗಾರಿಕೆ, ಶ್ಲೋಕ ಪಠಣ ಪ್ರದರ್ಶಿಸಿದರೆ, ಪೋಷಕರಿಗೆ ಮನರಂಜನಾತ್ಮಕ ಸ್ಪರ್ಧೆಗಳ ವ್ಯವಸ್ಥೆ ಮಾಡಲಾಗಿತ್ತು. ಪೋಷಕರು ಮಕ್ಕಳೊಂದಿಗೆ ಉತ್ಸಾಹದಿಂದ ಭಾಗವಹಿಸಿದರು. ಮುಖ್ಯಸ್ಥರಾದ ಸೌಮ್ಯ ವಿಜಯಕುಮಾರ್ ಮತ್ತು ವಿಜಯಕುಮಾರ್ (ವಿಜಯಣ್ಣ) ನೇತೃತ್ವದಲ್ಲಿ ಕಾರ್ಯಕ್ರಮ ಯಶಸ್ವಿ ಯಾಗಿ ನಡೆಯಿತು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ಹಾಜರಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 22-03-2026



ಹಣ್ಣಿಗಿಂತ ಬೀಜವೇ ಬಲು ಉಪಕಾರಿ

ಆರ್. ಯಶಸ್
ಲೇಖಕ, ಮೈಸೂರು
ದೂ: 63662 87446

ಮುಂದಿನ ಸಲ ನೀವು ಏನಾದರೂ ಕಲ್ಲಂಗಡಿ ಹಣ್ಣನ್ನು ತಿಂದು ಅದರ ಬೀಜವನ್ನು ಹಾಗೆ ಉಗುಳುವ ಮುನ್ನ ಒಮ್ಮೆ ಯೋಚಿಸಿ! ಏಕೆಂದರೆ, ಕಲ್ಲಂಗಡಿ ಹಣ್ಣಿನ ಬೀಜದಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ವಿಟಮಿನ್ ಹಾಗೂ ಇತರೆ ಖನಿಜಾಂಶಗಳು ಅಡಕವಾಗಿರುತ್ತವೆ. ಕಲ್ಲಂಗಡಿ ಹಣ್ಣಿನ ಬೀಜವನ್ನು ಸೇವಿಸುವುದು ಸಂಪೂರ್ಣವಾಗಿ ಸುರಕ್ಷಿತವಾಗಿರುವುದರ ಜೊತೆಗೆ ನಿಮ್ಮ ಆರೋಗ್ಯಕ್ಕೂ ಹಿತಕರವಾಗಿರುವುದುಂಟು.

ಕಲ್ಲಂಗಡಿ ಹಣ್ಣು ಮೂಲವಾಗಿ ಶರೀರಕ್ಕೆ ಆಹ್ಲಾದಕರ ತಂಪು ನೀಡುವ ಹಣ್ಣಾಗಿದ್ದು, ಇದರ ಬೀಜಗಳನ್ನು ಬಿಸಿಲಿನಲ್ಲಿ ಒಣಗಿಸುವುದರಿಂದ ಅಥವಾ ಬಾಣಲೆಯಲ್ಲಿ ಹುರಿಯುವುದರಿಂದ ಮಳೆಗಾಲಕ್ಕೆ ಉತ್ತಮ ಕುರುಕುಲು ತಿಂಡಿಯ ರೂಪವಾಗಿ ಸವಿಯಬಹುದು. ಇವುಗಳಲ್ಲಿ ಒಳ್ಳೆಯ ಕೊಬ್ಬಿನಾಂಶಗಳಾದ ಒಮೇಗಾ 3 ಫ್ಯಾಟಿ ಆ್ಯಸಿಡ್ ಮತ್ತು ಒಮೇಗಾ 6 ಫ್ಯಾಟಿ ಆ್ಯಸಿಡ್‌ಗಳು ಕೂಡಿದ್ದು, ಇದರಿಂದ ತೆಗೆಯಲಾಗಿರುವ ಎಣ್ಣೆಯು ಚರ್ಮ ಹಾಗೂ ಕೇಶರಾಶಿಗಳ ಬೆಳವಣಿಗೆಗೆ ಅದ್ಭುತವಾಗಿ ಪರಿಣಮಿಸುತ್ತದೆ.

ಹೃದಯದ ಆರೋಗ್ಯ ಕಾಪಾಡುವುದು

ಕಲ್ಲಂಗಡಿ ಹಣ್ಣಿನ ಬೀಜದಲ್ಲಿ ರಕ್ತದೊತ್ತಡ ಸಮತೋಲನ ಹಾಗೂ ಹೃದಯದ ಆರೋಗ್ಯ ಕಾಪಾಡುವ ಮೆಗ್ನೀಶಿಯಂ ಇರುವುದು. ಇದರೊಂದಿಗೆ ಇವುಗಳಲ್ಲಿ ಸಿಟ್ರುಲಿನ್ ಎಂಬ ಪದಾರ್ಥವಿದ್ದು ಎಯೋರ್ಟಿಕ್ ಬ್ಲಡ್ ಪ್ರೆಶರ್ (ಹೃದಯದ ಪರ್ನತ್ತರ ಕೊಳವೆಯಲ್ಲಿನ ರಕ್ತದೊತ್ತಡ) ವನ್ನು ನಿಯಂತ್ರಿಸುವಲ್ಲಿ ಸಹಾಯ ಮಾಡುತ್ತದೆ. ಈ ಬೀಜಗಳನ್ನು ತಿನ್ನುವುದರಿಂದ ಕೆಟ್ಟ ಕೊಬ್ಬಿನಾಂಶ ಕಡಿಮೆ ಮಾಡಿ ಒಳ್ಳೆಯ ಕೊಬ್ಬಿನಾಂಶವನ್ನು ದೇಹದಲ್ಲಿ ಶೇಖರಿಸುತ್ತದೆ.



ರೋಗ-ನಿರೋಧಕ ಶಕ್ತಿ ಹೆಚ್ಚಿಸುವುದು

ಕಲ್ಲಂಗಡಿ ಹಣ್ಣಿನ ಬೀಜದಲ್ಲಿ ಆ್ಯಂಟಿ-ಆಕ್ಸಿಡೆಂಟ್‌ಗಳು ಅಪಾರ ಪ್ರಮಾಣದಲ್ಲಿ ಕೂಡಿದ್ದು, ದೇಹದ ಜೀವಕೋಶದ ಸತ್ವವನ್ನು ಹಾಳು ಮಾಡಿ ಕ್ಯಾನ್ಸರ್‌ನಂತಹ ಖಾಯಿಲೆಗಳನ್ನು ತಂದೊಡ್ಡುವ ಅಪಾಯಕಾರಿ 'ಫ್ರೀ ರ್‍ಯಾಡಿಕಲ್ಸ್' ಗಳಿಂದ ಕಾಪಾಡುತ್ತವೆ. ಇದರೊಂದಿಗೆ, ಒಂದು ಅಧ್ಯಯನದ ಪ್ರಕಾರ, ಕಲ್ಲಂಗಡಿ ಹಣ್ಣಿನ ಬೀಜದಲ್ಲಿರುವ ಮೆಗ್ನೀಶಿಯಂ ಪ್ರಮಾಣದಿಂದ ಶರೀರದಲ್ಲಿ ರೋಗ-ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ರುಜುಪಡಿಸಲಾಗಿದೆ.

ಮಧುಮೇಹ ಖಾಯಿಲೆಯನ್ನು ನಿವಾರಿಸುವುದು

ಒಂದು ಸಂಶೋಧನೆಯಲ್ಲಿ ಸಕ್ಕರೆ ಖಾಯಿಲೆಯಿರುವ ಇಲಿಗಳಿಗೆ ಕಲ್ಲಂಗಡಿ ಹಣ್ಣಿನ ಬೀಜದ ಸಾರಾಂಶವನ್ನು ನೀಡಿ ಅಧ್ಯಯನ ನಡೆಸಲಾಯಿತು. ಆ ಅಧ್ಯಯನದಲ್ಲಿ ದೊರೆತ ಫಲಿತಾಂಶದ ಪ್ರಕಾರ, ಕಲ್ಲಂಗಡಿ ಹಣ್ಣಿನ ಬೀಜದ ಸಾರದಲ್ಲಿನ ಮೆಥನಾಲಿಕ್ ಅಂಶವು ಗ್ಲುಕೋಸ್ ಹೋಮಿಯೋಸ್ಟೇಸಿಸ್ (ಶರೀರದಲ್ಲಿ ಸಕ್ಕರೆ ಅಂಶವನ್ನು ಗ್ಲುಕೋಸ್ ಮೂಲಕ ಶಕ್ತಿ ರೂಪದಲ್ಲಿ ಬದಲಿಸುವ ಪ್ರಕ್ರಿಯೆ) ಅನ್ನು ಹೆಚ್ಚಿಸುವುದರಿಂದ ಶರೀರದಲ್ಲಿ ಗ್ಲುಕೋಸ್ ಅಂಶ ಉತ್ಪತ್ತಿಯಾಗುದರಿಂದ ಸಕ್ಕರೆ ಅಂಶವನ್ನು ನಿಯಂತ್ರಿಸುವುದರಲ್ಲಿ ಸಹಾಯ ಮಾಡುತ್ತದೆ.

ಸಂಧಿವಾತ ತಡೆಗಟ್ಟುವುದು

ಕಲ್ಲಂಗಡಿ ಹಣ್ಣಿನ ಬೀಜಗಳಲ್ಲಿ ಮೆಗ್ನೀಶಿಯಂ, ಮ್ಯಾಂಗನೀಸ್ ಮತ್ತು ಕ್ಯಾಲ್ಶಿಯಂ ಹೆಚ್ಚಿನ ಅಂಶದಲ್ಲಿರುವುದರಿಂದ ಸಂಧಿವಾತವನ್ನು ತಡೆಗಟ್ಟುವುದರಲ್ಲಿ ಸಹಾಯಮಾಡುತ್ತದೆ. ಒಂದು ಅಧ್ಯಯನದ ಪ್ರಕಾರ ಕಲ್ಲಂಗಡಿ ಹಣ್ಣಿನ ಸತ್ವಾಂಶವನ್ನು ಸೇವಿಸಿದ ಇಲಿಗಳಲ್ಲಿ ಸಂಧಿವಾತದ ಪ್ರಮಾಣ ಕಡಿಮೆಯಾಗಿರುವುದು ಕಂಡು ಬಂದಿದೆ.

ಹೊಟ್ಟೆಯ ಅಲ್ಸರ್ ತಡೆಯಬಹುದು

ಕಲ್ಲಂಗಡಿ ಹಣ್ಣಿನ ಬೀಜದಲ್ಲಿರುವ ಟ್ರೈಟರ್ ಪೆನೈಡ್ ಮತ್ತು ಫಿನಾಲ್ ಅಂಶಗಳು ಹೊಟ್ಟೆಯಲ್ಲಿನ ಹುಣ್ಣುಗಳನ್ನು ಕಡಿಮೆ ಮಾಡುವುದರ ಜೊತೆಗೆ ಹೊಟ್ಟೆದುಬ್ಬರವನ್ನು ಕೂಡ ಕಡಿಮೆ ಮಾಡುವ ಗುಣಗಳನ್ನು ಹೊಂದಿದೆ ಎಂಬುದು ಒಂದು ಸಂಶೋಧನೆಯು ರುಜು ಪಡಿಸುತ್ತದೆ.

ಪುರುಷರಲ್ಲಿ ವೀರ್ಯಾಣು ಹೆಚ್ಚಿಸುವುದು

ಕಲ್ಲಂಗಡಿ ಹಣ್ಣಿನ ಬೀಜದಲ್ಲಿ ಝಿಂಕ್ ಅಂಶವಿರುವುದರಿಂದ ಪುರುಷರ ಸಂತಾನೋತ್ಪತ್ತಿ ವ್ಯವಸ್ಥೆಗೆ ಲಾಭಕಾರಿಯಾಗಿರುತ್ತದೆ. ಇವುಗಳಲ್ಲಿ ಪ್ರೊಲಾಕ್ಟಿನ್, ಎಸ್ಟ್ರಾಡಿಯೋಲ್ ಹಾರ್ಮೋನುಗಳು ಇರುವುದರಿಂದ ಟೆಸ್ಟೋಸ್ಟೀರೋನ್ ಅಂಶವನ್ನು ಶೇಕಡ 5% ರಿಂದ 10% ರಷ್ಟು ಹೆಚ್ಚಿಸುವುದು.

ತೂಕ ಇಳಿಸುವುದರಲ್ಲಿ ಸಹಾಯ ಮಾಡುವುದು

ಬೆಂಗಳೂರಿನಲ್ಲಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಡೆಸಿದ ಸಂಶೋಧನೆ ಪ್ರಕಾರ ಕಲ್ಲಂಗಡಿ ಹಣ್ಣಿನ ಬೀಜದ ಸಾರಾಂಶದಲ್ಲಿ ತೂಕ ಇಳಿಸುವ ಗುಣಗಳನ್ನು ಕಂಡು ಬಂದಿದ್ದು, ಕೆಲವು ಇಲಿಗಳ ಮೇಲೆ ಪ್ರಯೋಗ ನಡೆಸಿದಾಗ ಈ ಫಲಿತಾಂಶಗಳು ಕಂಡು ಬಂದಿವೆ.

ಸ್ತ್ರೀ ಆರೈಕೆಗೆ ಸಹಾಯಕಾರಿ

ಕಲ್ಲಂಗಡಿ ಹಣ್ಣಿನ ಬೀಜದಲ್ಲಿ 58 ಮೈಕ್ರೋ ಗ್ರಾಂನಷ್ಟು ಫಾಲೇಟ್ (ವಿಟಮಿನ್ ಬಿ9) ಕೂಡಿದ್ದು, ಮೆದುಳಿನ ಕಾರ್ಯದಕ್ಷತೆಯ ಜೊತೆಗೆ ಹೋಮೋ ಸಿಸ್ಟೀನ್ ಅಂಶವನ್ನು ಸಹ ನಿಯಂತ್ರಿಸುತ್ತದೆ. ಸ್ತ್ರೀಯರಲ್ಲಿ ಸಂತಾನ ಪೋಷಣೆಗೆ ಪೂರಕವಾಗುವ ಫೋಲಿಕ್ ಆ್ಯಸಿಡ್ ಉತ್ಪತ್ತಿಗೆ ಸಹಾಯ ಮಾಡುವುದು.

ಚರ್ಮ ಮತ್ತು ಕೂದಲಿನ ಆರೈಕೆಗೆ ಸಹಕಾರಿ

ಕಲ್ಲಂಗಡಿ ಹಣ್ಣಿನ ಬೀಜದಲ್ಲಿ ಒಳ್ಳೆಯ ಕೊಬ್ಬಿನಾಂಶ, ಆ್ಯಂಟಿ ಆಕ್ಸಿಡೆಂಟ್‌ಗಳು ಇರುವುದರಿಂದ ಸುಸ್ಥಿರ ಚರ್ಮದ ನಿರ್ವಹಣೆ ಹಾಗೂ ಸುಕ್ಕುಗಟ್ಟುವಿಕೆಯನ್ನು ತಡೆಗಟ್ಟಲು ಸಹಾಯ ಮಾಡುತ್ತದೆ. ಇವುಗಳ ಜೊತೆಗೆ ಈ ಬೀಜದಿಂದ ತೆಗೆಯಲಾದ ಎಣ್ಣೆಯನ್ನು ಕೂದಲಿನ ಮೇಲೆ ಉಪಯೋಗ ಮಾಡುವುದರಿಂದ ಕೂದಲಿನ ಹೊಟ್ಟು ಸಮಸ್ಯೆಯನ್ನು ತಡೆಯುವುದರ ಜೊತೆಗೆ, ಕೂದಲಿನ ಬುಡವನ್ನು ಬಲಪಡಿಸುತ್ತದೆ.

ಪರಿಜ್ಞಾನವಿಲ್ಲದ ಪರಿಹಾರ..!!??

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಹೆಗ್ಗೆರೆ ಗೇಟ್ ಬಳಿ ಭಾನುವಾರ ಸಂಭವಿಸಿದ ಭೀಕರ ಅಪಘಾತದಲ್ಲಿ ಸಾವಿಗೀಡಾದ ಮೂವರು ರಿಸರ್ವ್ ಸಬ್ ಇನ್ಸ್‌ಪೆಕ್ಟರ್‌ಗಳ ಕುಟುಂಬಕ್ಕೆ ತಲಾ ರೂ.5 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ರೂ.2 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ!.

- **ಈ ಪೊಲೀಸ್ ಅಧಿಕಾರಿಗಳು ಪ್ರಯಾಣಿಸುತ್ತಿದ್ದ ಕಾರ್ ಮಾಲೀಕ ಯಾರು?**
- **ಈ ಕಾರ್ ಚಾಲಕನಿಗೆ ಚಾಲನಾ ಪರವಾನಿ ಇದೆಯೇ?**
- **ಈ ಕಾರಿಗೆ ವಿಮೆ ಮಾಡಿಸಲಾಗಿದೆಯೇ?**
- **ಈ ಕಾರಿಗೆ ಡಿಕ್ಕಿ ಹೊಡೆದ ಖಾಸಗಿ ಬಸ್ಸಿನ ಮಾಲೀಕ ಯಾರು?**
- **ಈ ಬಸ್ ಚಾಲಕನಿಗೆ ಡ್ರೈವಿಂಗ್ ಲೈಸನ್ಸ್ ಇದೆಯೇ?**
- **ಈ ಬಸ್ಸಿಗೆ ವಿಮೆ ಮಾಡಿಸಲಾಗಿದೆಯೇ?**
- **ಈ ವಾಹನದ ಚಾಲಕರಿಗೆ ಡ್ರೈವಿಂಗ್ ಲೈಸೆನ್ಸ್ ಇದ್ದು, ವಾಹನಗಳಿಗೆ ವಿಮೆ ಇದ್ದರೆ ವಿಮಾ ಕಂಪನಿಗಳಿಗೆ ಪರಿಹಾರ ನೀಡುವ ಜವಾಬ್ದಾರಿ ಇಲ್ಲವೇ?**

ಯಾವುದೇ ರಸ್ತೆ ಅಪಘಾತ ನಡೆದು ವಾಹನಗಳು ಪರಸ್ಪರ ಡಿಕ್ಕಿ ಹೊಡೆದು ಸಾವು-ನೋವು ಸಂಭವಿಸಿದರೆ ಅಂತಹ ಪ್ರಕರಣದಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಲಾಯಿಸಿದ ಚಾಲಕನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗುತ್ತದೆ.

ಅಪಘಾತದಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬದವರು ಪರಿಹಾರ ಕೋರಿ ಮೋಟಾರು ವಾಹನ ಕಾಯಿದೆಯ ಅನ್ವಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುತ್ತಾರೆ. ಅಂತಹ ಪ್ರಕರಣಗಳಲ್ಲಿ ಅಪಘಾತ ಎಸಗಿದ ವಾಹನದ ಚಾಲಕ, ಮಾಲೀಕ ಹಾಗೂ ಆ ವಾಹನದ ವಿಮಾ ಸಂಸ್ಥೆಯನ್ನು ಪಕ್ಷಕಾರರನ್ನಾಗಿ ಮಾಡಲಾಗಿರುತ್ತದೆ.ಅಪಘಾತ ಎಸಗಿದ ವಾಹನದ ಚಾಲಕನಿಗೆ ಡ್ರೈವಿಂಗ್ ಲೈಸೆನ್ಸ್ ಇದ್ದು, ವಾಹನದ ವಿಮೆ ಚಾಲ್ತಿಯಲ್ಲಿದ್ದರೆ ಅಂತಹ ವಿಮಾ ಕಂಪನಿಯೇ ಮೃತರ ಕುಟುಂಬದವರಿಗೆ ಪರಿಹಾರ ನೀಡಬೇಕೆಂದು ನ್ಯಾಯಾಲಯವು ಆದೇಶಿಸುತ್ತದೆ. ಪರಿಹಾರದ ಮೊತ್ತ ಹೆಚ್ಚಾಯಿತೆಂದು ಆಪಾದಿಸಿ ವಿಮಾ ಕಂಪನಿಗಳು ಈ ಆದೇಶದ ವಿರುದ್ಧ ಹೈಕೋರ್ಟ್ ಮೆಟ್ಟಿಲೇರುತ್ತವೆ. ಸುಪ್ರೀಂ ಕೋರ್ಟ್ ಮೆಟ್ಟಿಲನ್ನೂ ಏರುತ್ತವೆ

ಇಂತಹ ಪ್ರಕರಣಗಳಲ್ಲಿ ಮೃತರ ಕುಟುಂಬದವರು ವರುಷಗಟ್ಟಲೆ ನ್ಯಾಯಾಲಯಕ್ಕೆ ಅಲೆದಾಡಿ ಪರಿಹಾರ ಪಡೆಯಬೇಕಾಗುತ್ತದೆ.

ರಸ್ತೆ ಅಪಘಾತ ಪ್ರಕರಣಗಳಲ್ಲಿ ಪರಿಹಾರ ಪಡೆಯುವ ಕಾನೂನು ಪ್ರಕ್ರಿಯೆ ಹೀಗಿರುವಾಗ.... ಚಿತ್ರದುರ್ಗದಲ್ಲಿ ಸಂಭವಿಸಿದ ಅಪಘಾತದಲ್ಲಿ ಸಾವಿಗೀಡಾದ ಮೂವರು ರಿಸರ್ವ್ ಸಬ್ ಇನ್ಸ್‌ಪೆಕ್ಟರ್‌ಗಳ ಕುಟುಂಬಕ್ಕೆ ತಲಾ ರೂ.5 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ರೂ.2 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಘೋಷಿಸಲು ಹೇಗೆ ಸಾಧ್ಯ?

ಮರಗಳುರುಳಿ ಯಾರಾದರೂ ಸತ್ತರೆ, ಪ್ರವಾಹ, ನೆರೆ, ಬರ, ಸಿಡಿಲು, ವಿದ್ಯುದಾಲಿಂಗನ, ನಾಯಿ ಕಡಿತ, ಕಾಡುಪ್ರಾಣಿಗಳಿಂದ ದಾಳಿ, ಆಕಸ್ಮಿಕ ಸ್ಫೋಟ, ಬಾಂಬ್ ದಾಳಿ, ಲಾಕಪ್ ಡೆತ್ ಇತ್ಯಾದಿ ಕಾರಣಗಳಿಂದ ಪ್ರಾಣಹಾನಿಯಾದರೆ ಮುಖ್ಯಮಂತ್ರಿಗಳು ಪರಿಹಾರ ಘೋಷಿಸಬಹುದು. ಅಮಾಯಕರ ಪ್ರಾಣಹಾನಿಯಾಗಲು ಪ್ರಕೃತಿ ವಿಕೋಪ ಅಥವಾ ಸರಕಾರದ ಲೋಪ ಕಾರಣವಾದರೆ ಮುಖ್ಯಮಂತ್ರಿಗಳು ಪರಿಹಾರ ಘೋಷಿಸುವುದರಲ್ಲಿ ತಪ್ಪಿಲ್ಲ.ಆದರೆ.... ಲಕ್ಷಾಂತರ ರೂಪಾಯಿ ವೇತನ ಪಡೆಯುವ ಅಧಿಕಾರಿಗಳ ಕುಟುಂಬದವರಿಗೆ ಈ ತುರ್ತು ಪರಿಹಾರದ ಅಗತ್ಯವಿದೆಯೇ?



ಈ ಅಪಘಾತದಲ್ಲಿ ಭಾಗಿಯಾದ ಎರಡೂ ವಾಹನಗಳ ಚಾಲಕರು, ಮಾಲೀಕರು ಹಾಗೂ ವಿಮಾ ಕಂಪನಿಗಳಿಗೆ ಯಾವ ಜವಾಬ್ದಾರಿಯೂ ಇಲ್ಲವೇ?

ಈ ಅಪಘಾತ ಪ್ರಕರಣದಲ್ಲಿ ಗಾಯಗೊಂಡವರು ಮತ್ತು ಮೃತರ ಕುಟುಂಬದವರಿಗೆ ಮುಖ್ಯಮಂತ್ರಿಗಳು ವೈಯುಕ್ತಿಕವಾಗಿ ಪರಿಹಾರ ನೀಡುವುದರಲ್ಲಿ ತಪ್ಪಿಲ್ಲ. ಅಥವಾ ತಮ್ಮ ಪಕ್ಷದ ವತಿಯಿಂದ ನೀಡಿದರೂ ತಪ್ಪಿಲ್ಲ ಆದರೆ ಸರಕಾರದ ಕಡೆಯಿಂದ ಸಾರ್ವಜನಿಕರ ಹಣವನ್ನು ಅಪಘಾತದಂತಹ ಪ್ರಕರಣದಲ್ಲಿ ತನಗೆ ತೋಚಿದಂತೆ ಪರಿಹಾರವಾಗಿ ನೀಡುವುದು ಸರಿಯಲ್ಲ. ಇದು ಸಾರ್ವಜನಿಕರ ಹಣವನ್ನು ಪೋಲು ಮಾಡಿದಂತೆ.

ಇಂತಹ ಅಪಘಾತದಲ್ಲಿ ಗಾಯಗೊಂಡವರಿಗೆ ಅಥವಾ ಮೃತರಾದವರ ಪೊಲೀಸ್ ಅಧಿಕಾರಿಗಳ ಕುಟುಂಬದವರಿಗೆ ಲಕ್ಷಾಂತರ ರೂಪಾಯಿ ಪರಿಹಾರ ಘೋಷಿಸುವುದೇ ಸರಿ ಎಂಬುದಾದರೆ ರಾಜ್ಯದಲ್ಲಿ ನಡೆದ ಪ್ರತಿಯೊಂದು ಅಪಘಾತ, ಸಾವು-ನೋವು ಮುಂತಾದ ಪ್ರಕರಣಗಳಲ್ಲಿ ಜನಸಾಮಾನ್ಯರೇಕೆ ಪರಿಹಾರಕ್ಕಾಗಿ ಕೋರ್ಟಿಗೆ ಅಲೆದಾಡಬೇಕು?


ಪೊಲೀಸ್ ಅಧಿಕಾರಿಗಳ ಕುಟುಂಬದವರಿಗೆ ಪರಿಹಾರ ನೀಡಿದಂತೆ ಪ್ರತಿಯೊಂದು ಅಪಘಾತ ಪ್ರಕರಣಗಳಲ್ಲಿ ಗಾಯಗೊಂಡವರಿಗೆ ಹಾಗೂ ಮೃತರಾದವರ ಕುಟುಂಬದವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಪರಿಹಾರ ಘೋಷಿಸಬಹುದಲ್ಲವೇ?




ಪಿ.ಜೆ.ರಾಘವೇಂದ್ರ
ನ್ಯಾಯವಾದಿ
ಮೈಸೂರು

ಮಕ್ಕಳ ಚಿತ್ರಕಥೆ: ಪಾಸ್‌ವರ್ಡ್ ಹೇಳಿದರೆ ಮಾತ್ರ

■ ಹೆಚ್.ಜಿ.ಎನ್.ಪ್ರಸಾದ್ ಮೊ. 98453 76199




ಪ್ರೈಮರಿ ಶಾಲೆಯಲ್ಲಿ ಓದುತ್ತಿರುವ ಮಗಳನ್ನು ಅವಳ ತಂದೆ-ತಾಯಿ ಪ್ರತಿನಿತ್ಯ ಶಾಲೆಗೆ ಕರೆದುಕೊಂಡು ಹೋಗಿ ಬಿಡುತ್ತಾರೆ.



ಮಧ್ಯಾಹ್ನದ ವೇಳೆ ಮಕ್ಕಳನ್ನು ಊಟದ ನಂತರ ಸ್ವಲ್ಪ ವಿಶ್ರಾಂತಿ ಪಡೆಯಲು ಬಿಟ್ಟಿರುತ್ತಾರೆ.




ಆಗ, ಆವರಣದಲ್ಲಿ ಆಟವಾಡುತ್ತಿದ್ದ ಮಗುವಿನ ಬಳಿ ಅಪರಿಚಿತ ವ್ಯಕ್ತಿ ಬೈಕ್‌ನಲ್ಲಿ ಬಂದು ನಿಲ್ಲುತ್ತಾನೆ.



ಮಗುವನ್ನು ಉದ್ದೇಶಿಸಿ ಆ ಅಪರಿಚಿತ, ಪುಟಾಣಿ, ನಿಮ್ಮ ಅಮ್ಮನಿಗೆ ಹುಷಾರಿಲ್ಲಾ. ನಿನ್ನ ತಂದೆ-ತಾಯಿಗಳಿಬ್ಬರೂ ನಮ್ಮ ಸ್ನೇಹಿತರು ..ಬಾ ಬೇಗ ಹೋಗೋಣಾ..! ಎನ್ನುತ್ತಾರೆ.



ಆಗ ಆ ಪುಟಾಣಿಯು ನಗುತ್ತಾ ಅದೆಲ್ಲಾ ಸರಿ ಅಂಕಲ್... ಪಾಸ್‌ವರ್ಡ್.. ಏನು...!? ಎಂದು ಪ್ರಶ್ನಿಸಿದಳು. ಆ ಅಪರಿಚಿತ, ತಬ್ಬಿಬ್ಬಾಗಿ ಏನು... ಪಾಸ್‌ವರ್ಡ್... ಏನು ಪಾಸ್‌ವರ್ಡ್..?ಎಂದು ಗಾಬರಿಯಾಗಿ ಕೇಳುತ್ತಾನೆ.



ಆ ಬಾಲಕಿ ನಮ್ಮ ಅಪ್ಪ-ಅಮ್ಮ ನನಗೆ ಒಂದು ಪಾಸ್‌ವರ್ಡ್ ಕೊಟ್ಟಿದ್ದಾರೆ. ಆ ಪಾಸ್‌ವರ್ಡ್ ಹೇಳಿದರೆ ಮಾತ್ರ ಅವರ ಜೊತೆ ಹೋಗಬೇಕೆಂದು ಹೇಳಿದ್ದಾರೆ.! ಎನ್ನುತ್ತಾ ಜೋರಾಗಿ ಕೂಗಿಕೊಳ್ಳುತ್ತಾಳೆ. ತಕ್ಷಣವೇ ಆವರಣದಲ್ಲಿದ್ದ ಭದ್ರತಾ ಸಿಬ್ಬಂದಿ, ಗೆಳೆಯರು, ಶಿಕ್ಷಕರು ಅವಳ ರಕ್ಷಣೆಗೆ ಓಡಿ ಬರುತ್ತಾರೆ. ಅಷ್ಟರಲ್ಲೇ ಅಪಹರಣಕಾರ ಬೈಕ್‌ನೊಂದಿಗೆ ಪರಾರಿಯಾಗಿಬಿಟ್ಟಿರುತ್ತಾನೆ. ಆ ಬಾಲಕಿಯ ತಂದೆ-ತಾಯಿಯು ಯಾರೇ ಹೊರಗಿನಿಂದ ಬಂದು ನಿನ್ನನ್ನು ಕರೆದರೆ ಮಾತನಾಡಿಸಿರೆ ಅವರನ್ನು ಪಾಸ್‌ವರ್ಡ್ ಕೇಳು ಅವರು ಪಾಸ್‌ವರ್ಡ್ ಸರಿಯಾಗಿ ಹೇಳಿದರೆ ಮಾತ್ರಅವನ್ನು ನಾವು ಕಳುಹಿಸಿದ್ದೇವೆ ಎಂದರ್ಥ. ಅವನು ಪಾಸ್‌ವರ್ಡ್ ಹೇಳಲಿಲ್ಲ ಎಂದರೆ ನೀನು ಅಪಾಯದಲ್ಲಿದ್ದೀಯಾ ಅಂತ ಎಂದು ಹೇಳಿದ್ದರು.

ಕಿವಿಮಾತು : ಹಾಗೆಯೇ ನೀವೂ ಕೂಡ ನಿಮ್ಮ ಮಕ್ಕಳಿಗೆ ಒಂದು ಪಾಸ್‌ವರ್ಡ್ ಕೊಟ್ಟಿರಿ.. ಅದು ಏನಾದರೂ ಆಗಿರಲಿ, ಅಪರಿಚಿತರು ಮಾತನಾಡಿಸಿದಾಗ ಅವರುಗಳು ಆ ಪಾಸ್‌ವರ್ಡ್ ಹೇಳಿದರೆ ಮಾತ್ರ ಅವರ ಬಳಿ ಮಾತನಾಡಲಿ.

ವಾರಭವಿಷ್ಯ

22.03.2026 ರಿಂದ 28.03.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ-ಮೀನ, ಚಂದ್ರ-ಮೇಷ, ವೃಷಭ, ಮಿಥುನ, ಕಟಕ, ಕುಜ-ಕುಂಭ, ಬುಧ-ಕುಂಭ, ಗುರು-ಮಿಥುನ, ಶುಕ್ರ-ಮೀನ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಹರ್ಷ, ನಲಿವುಗಳೊಡನೆ ವಾರಕ್ಕೆ ಸ್ವಾಗತ. ನೂತನ ವಸ್ತ್ರಾಭರಣಗಳನ್ನು ಖರೀದಿಯಿಂದ ಶ್ರೀಮತಿಗೆ ಸಂತೋಷ, ಗೃಹ ಕೃತ್ಯಗಳಿಗೆ ಮಿತ್ರ ಜನರ ಸಹಾಯ ಒದಗುವುದು. ಹೋಟೆಲ್, ಟ್ರಾವೆಲ್ಸ್ ಉದ್ಯಮದವರಿಗೆ ಇದು ಉತ್ತಮ ವಾರ. ಗೋಪಾಲಕರಿಗೆ ಪಶು ವೃದ್ಧಿಯಿಂದ ಸಂತಸ. ಪುಣ್ಯಕ್ಷೇತ್ರ ಸಂದರ್ಶನದಿಂದ ವಾರಕ್ಕೆ ವಿದಾಯ.
ಶ್ರೀ ಗಣಪತಿ ಉಪಾಸನೆ. ಶುಭ ಸಂಖ್ಯೆ-1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ಮನೆಯಲ್ಲಿ ಮಂಗಳ ಕಾರ್ಯಕ್ಕೆ ಸಿದ್ಧತೆ. ಹತ್ತಿ, ಜವಳಿ, ರೇಷ್ಮೆ ವ್ಯಾಪಾರಿಗಳಿಗೆ ಕೈತುಂಬಾ ಸಂಪಾದನೆ. ಸ್ತ್ರೀಯರೊಬ್ಬರ ಸಹಾಯದಿಂದ ವೈಯಕ್ತಿಕ ಸಮಸ್ಯೆ ಪರಿಹಾರವಾಗುವುದು. ಶುಭ ಗುರುವಿನಿಂದ ಪರೀಕ್ಷೆ ಮತ್ತು ಸಂದರ್ಶನಗಳಲ್ಲಿ ಸಫಲತೆಯನ್ನು ಹೊಂದುವಿರಿ. ವಾರ ಮಧ್ಯೆ ವಿಹಾರಾರ್ಥ ಪ್ರಯಾಣಗಳು ಉಂಟಾಗಬಹುದು. ಸರ್ಕಾರಿ ಕೆಲಸ ಕಾರ್ಯಗಳು ನಿಮ್ಮ ಅನುಕೂಲಕ್ಕೆ ಇರದು.
ಶ್ರೀ ವಿಷ್ಣು ಪೂಜನ. ಶುಭ ಸಂಖ್ಯೆ-5

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಈ ವಾರ ನಿಮ್ಮ ಭಾಗ್ಯದಲ್ಲಿ ವೃದ್ಧಿಯಾಗುವ ಸೂಚನೆ ಇದೆ. ನಿಪುಣತೆಯಿಂದ ಕಾರ್ಯ ಸಾಧನೆ. ನಿರೀಕ್ಷಿತ ಹಣ ಕೈ ಸೇರುವುದು. ಪಿತೃ ವರ್ಗದವರಿಂದ ಸ್ಥಿರಾಸ್ತಿ ದೊರೆಯುವ ಸಂಭವ. ಮಕ್ಕಳ ಸಾಧನೆ, ಶ್ರೇಯಸ್ಸಿನಿಂದ ಹರ್ಷ. ಮುಖ್ಯ ಕೆಲಸಗಳನ್ನು ಆದ್ಯತೆಯ ಮೇಲೆ ಪೂರೈಸಿಕೊಳ್ಳಿ. ಕೃಷಿ ಇತ್ಯಾದಿ ಕಾರ್ಯಗಳಲ್ಲಿ ವಿಘ್ನಗಳು ಉಂಟಾಗುವುದು. ಪ್ರಯಾಣಗಳಲ್ಲಿ ಅನಾನುಕೂಲತೆ ಉಂಟಾಗುವುದು.
ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-4

ಕಟಕ (ಹೊ,ಹು,ಹೆ,ಡ,ಡಿ,ಡು)
'ಸಂತೃಪ್ತಿಯೇ ಸ್ವರ್ಗ,' ಮನೆಯಲ್ಲಿ ಸತ್ಕರ್ಮಾನುಷ್ಠಾನಗಳು ನಡೆಯುವುದು. ವಿದ್ಯಾರ್ಥಿಗಳು ಉನ್ನತ ಶ್ರೇಣಿಯನ್ನು ಸಾಧಿಸುವರು. ನಿಮ್ಮ ರಾಶ್ಯಾಧಿಪತಿ ಚಂದ್ರನ ಸಂಚಾರ ಶುಭವಿರುವ ಕಾರಣ ಏನೇ ಸಮಸ್ಯೆಗಳು ಎದುರಾದರೂ ಜಾಣ್ಮೆಯಿಂದ ಬಗೆಹರಿಸಿಕೊಳ್ಳುವಿರಿ. ವೃತ್ತಿಪರ ವ್ಯವಹಾರಗಳಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸುವಿರಿ. ವಾರದ ಕಡೆಗೆ ಅನಿರೀಕ್ಷಿತ ಖರ್ಚುಗಳು ಎದುರಾಗಿ ಪರ್ಸ್ ಖಾಲಿ.
ಶ್ರೀ ದುರ್ಗಾ ಸ್ತುತಿ. ಶುಭ ಸಂಖ್ಯೆ-8

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ವಾರದ ಪೂರ್ವಾರ್ಧದಲ್ಲಿ ಯಾವುದಾದರೂ ವಿಶೇಷ ಸಾಧನೆ ಮಾಡಲು ಗ್ರಹಗತಿಗಳು ಉತ್ತಮವಾಗಿದೆ. ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸುವಿರಿ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ದೈವಾನುಕೂಲದಿಂದ ಯಶಸ್ಸು. ಹಲವರಿಗೆ ಕಂಕಣಬಲ ಕೂಡಿ ಬರುವ ಅವಕಾಶವಿದೆ. ಲಾಭ ತರುವಂತಹ ವ್ಯಾಪಾರ, ವ್ಯವಹಾರಗಳು ಹುಡುಕಿಕೊಂಡು ಬರಲಿದೆ. ಸರ್ಕಾರಿ ನೌಕರರಿಗೆ ಬೇಡದ ಸ್ಥಳಕ್ಕೆ ವರ್ಗಾವಣೆ ಆಗಬಹುದು.
ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ-9

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಈ ವಾರದಲ್ಲಿ ಹಿರಿಯರ ಹಿತೋಕ್ತಿ ಪಾಲಿಸುವುದರಿಂದ ಶುಭ ಫಲವನ್ನು ಕಾಣುವಿರಿ. ಜೀವನೋಪಾಯಕ್ಕೆ ಹಲವು ಮಾರ್ಗಗಳು ತೆರೆದುಕೊಳ್ಳಲಿದೆ. ಧನಾದಾಯವಿದ್ದರೂ ಬೇಡದ ಖರ್ಚುಗಳು ಜಾಸ್ತಿ, ಆಸೆಗಳಿಗೆ ಕಡಿವಾಣ ಹಾಕಿ. ಶಿಕ್ಷಣ ಕ್ಷೇತ್ರದಲ್ಲಿ ಉನ್ನತವಾದುದನ್ನು ಸಾಧಿಸಲು ಗ್ರಹಗಳ ಅನುಕೂಲವಿದೆ. ನಿಮ್ಮ ವ್ಯವಹಾರ ಕುಶಲತೆಯು ಉತ್ತಮ ಮಟ್ಟದ್ದಾಗಿರುತ್ತದೆ. ಸಂಚಾರಿ ನಿಯಮಗಳನ್ನು ಪಾಲಿಸಿ.
ಶ್ರೀ ಸತ್ಯನಾರಾಯಣ ಆರಾಧನೆ. ಶುಭ ಸಂಖ್ಯೆ-8

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ಹೊಸ ವ್ಯಾಪಾರ ಸ್ಥಾಪನೆಗೆ ಪ್ರಯತ್ನಗಳು ಮುಂದುವರೆಯಲಿ. ಫ್ಯಾನ್ಸಿ ವಸ್ತು ಹಾಗೂ ಗಿಫ್ಟ್ ವಸ್ತು ಮಾರಾಟಗಾರರಿಗೆ ಭರಪೂರ ವ್ಯಾಪಾರ ಹಾಗೂ ಧನಲಾಭವಾಗುವುದು, ದೂರ ಸರಿದಿದ್ದವರು ಹತ್ತಿರ ಬರುವ ಸಾಧ್ಯತೆ ಇದೆ. ವಿದೇಶ ಪ್ರಯಾಣಕ್ಕೆ ಪೂರ್ವ ಸಿದ್ಧತೆಗಳು ನಡೆಯಲಿ. ಸರ್ಕಾರಿ ಅಧಿಕಾರಿಗಳ ಸಹಾಯ ಹಸ್ತ ದೊರೆಯುವುದು. ಅಪರಿಚಿತ ವ್ಯಕ್ತಿಗಳಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ.
ಶ್ರೀ ತ್ರಿಪುರ ಸುಂದರಿ ದರ್ಶನ. ಶುಭ ಸಂಖ್ಯೆ-2

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ಗುರು-ಶನಿಗಳು ಶುಭರಿಲ್ಲದ ಕಾರಣ ನೀವೊಂದು ಬಗೆದರೆ, ದೈವವೊಂದು ಬಗೆದಂತೆ ಭಾಸವಾಗುವುದು. ಪ್ರಯತ್ನ ಪೂರ್ವಕವಾಗಿ ಮಾಡಿದ ಕೆಲಸಗಳಲ್ಲಿ ಹಿನ್ನಡೆ ಉಂಟಾಗುವುದು. ವಾರದ ಉತ್ತರಾರ್ಧಕ್ಕೆ ಹಿತೈಷಿಗಳ ನೆರವಿನಿಂದ ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ದ್ವಿದಳ ಧಾನ್ಯ ವರ್ತಕರಿಗೆ ಬಂಪರ್ ವ್ಯಾಪಾರ ಹಾಗೂ ಧನಾರ್ಜನೆ ಆಗುವುದು. ಮನೆಯಲ್ಲಿ ಹಿರಿಯ ಚೇತನರಿಗೆ ಅನಾರೋಗ್ಯ.
ಶ್ರೀ ಸುಬ್ರಮಣ್ಯ ಉಪಾಸನೆ. ಶುಭ ಸಂಖ್ಯೆ-3

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ವಾರದ ಪೂರ್ವಾರ್ಧಕ್ಕೆ ನಿರೀಕ್ಷಿತ ಕೆಲಸಗಳು ನಿಮ್ಮ ಮನಸ್ಸಿನಂತೆ ನಡೆಯುವುದು. ವಿವಾಹಾದಿ ಮಂಗಳ ಕಾರ್ಯಗಳು ನಡೆಯುವ ಸಾಧ್ಯತೆ. ಕೌಟುಂಬಿಕ ಕಲಹಗಳು ಶಮನವಾಗುವುದು. ಆರೋಗ್ಯದಲ್ಲಿ ಸುಧಾರಣೆ. ಸಜ್ಜನರ ಸಹವಾಸ ಹಾಗೂ ಪುಣ್ಯ ಕಾರ್ಯಗಳಿಂದ ಪ್ರಸಿದ್ಧಿಗೆ ಬರುವಿರಿ. ಇಂಜಿನಿಯರ್, ಕಂಟ್ರಾಕ್ಟರ್ ದಾರರಿಗೆ ನೂತನ ಯೋಜನೆಗಳು ದೊರೆತು ಹೆಚ್ಚಿನ ಧನಲಾಭವಾಗುವುದು.
ಶ್ರೀ ಗುರುರಾಯರ ಸನ್ನಿಧಿಗೆ ತೆರಳಿ. ಶುಭ ಸಂಖ್ಯೆ-7

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ಹಲವು ಮೂಲಗಳಿಂದ ಧನ ಸಂಪಾದನೆಯಾದರೂ ಮಾನಸಿಕ ಸುಖ ಇರದು. ಶನಿದೇವನ ಕರುಣೆಯಿಂದ ಎಳ್ಳು, ಎಣ್ಣೆ ಕಾಳುಗಳು ಸಮೃದ್ಧಿಯಾಗಿ ಬೆಳೆಯುವುದು. ಶುಭ ಶುಕ್ರನಿಂದ ಸಮಯೋಚಿತ ವರ್ತನೆಯಿಂದ ನಿಮ್ಮ ಕಾರ್ಯ ಸುಗಮವಾಗುವುದು. ಆಡಿಟರುಗಳಿಗೆ ದೊಡ್ಡ ಫೈಲ್ ಸಿಗುವುದು. ಅಶುಭ ರಾಹು-ಕೇತುಗಳಿಂದ ಆರೋಗ್ಯ ಸಮಸ್ಯೆ, ಸಣ್ಣಪುಟ್ಟ ಅಪಘಾತ ಸಂಭವಿಸಬಹುದು.
ಶ್ರೀ ರಾಹು-ಕೇತು ಮಂತ್ರ ಪಠಿಸಿ. ಶುಭ ಸಂಖ್ಯೆ-2

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಶ್ರೀ ಗುರುವಿನ ಅನುಗ್ರಹದಿಂದ ನಿಮ್ಮ ವಾಂಛಿತ ಆಸೆಗಳು ಈಡೇರುವುದು. ಉದ್ಯೋಗಾಕಾಂಕ್ಷಿಗಳಿಗೆ ಶುಭ ಸಮಾಚಾರ ಬರಲಿದೆ. ನೆರೆಹೊರೆಯಲ್ಲಿ ಉತ್ತಮ ಬಾಂಧವ್ಯದಿಂದ ನಿಮ್ಮ ಕಾರ್ಯ ಸುಗಮ. ವಿವಾಹ ಯೋಗ್ಯರಿಗೆ ಬಾಳ ಸಂಗಾತಿ ದೊರೆಯುವ ಸಾಧ್ಯತೆ ಇದೆ. ಜಾತ್ರೆ, ರಥೋತ್ಸವಾದಿಗಳಲ್ಲಿ ಭಾಗವಹಿಸುವಿರಿ. ಪುಣ್ಯ ನದಿ ಸ್ನಾನ ದೊರಕುವುದು. ನೀರಿನ ಜೊತೆ ಹುಡುಗಾಟ ಕೂಡದು.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-6

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಹೊಸ ಕೆಲಸ, ಜವಾಬ್ದಾರಿ ದೊರೆತು, ಹಿರಿಯರಿಂದ ಪ್ರಶಂಸೆ. ಪ್ರತಿಷ್ಠಿತ ವ್ಯಕ್ತಿಗಳ ಪರಿಚಯವಾಗುತ್ತದೆ. ನಿಮ್ಮ ಸ್ವಂತ ಕೆಲಸಗಳಲ್ಲಿ ಅನುಕೂಲವಾಗುವ ಕಾರಣ ಮನಃ ಸಂತೋಷ. ಸಣ್ಣ ಕೈಗಾರಿಕೆಗಳಿಗೆ ಭರಪೂರ ಕೆಲಸ ಹಾಗೂ ಧನ ಸಂಪಾದನೆ. ವಾರ ಮಧ್ಯೆ ಇಷ್ಟ ಬಂಧು ಜನರ ಮಿಲನ ಮನಸ್ಸಿಗೆ ಮುದ ನೀಡುವುದು. ವಾರದ ಕಡೆಗೆ ಅನಿರೀಕ್ಷಿತ ಖರ್ಚು-ವೆಚ್ಚಗಳು ಎದುರಾಗಲಿದೆ.
ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-5

ಮೈಸೂರು ಮಿತ್ರ

ಭಾನುವಾರ 22 ಮಾರ್ಚ್ 2026

ಅದ್ದೂರಿ ಗರಳಪುರಿ ಉತ್ಸವಕ್ಕೆ ಚಾಲನೆ

ಉತ್ಸವದ ಮೂಲಕ ನಂಜನಗೂಡಿನ ಸಾಂಸ್ಕೃತಿಕ ಪರಂಪರೆಯ ವೈಭವದ ಮರುಸ್ಥಾಪನೆಗೆ ಪ್ರಯತ್ನ

ನಂಜನಗೂಡು: ನಂಜನಗೂಡು ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಗೆ ಹೆಸರುವಾಸಿಯಾಗಿದ್ದು, ನಂಜನಗೂಡಿನ ಸಾಂಸ್ಕೃತಿಕ ಪರಂಪರೆಯ ವೈಭವವನ್ನು ಉತ್ತೇಜಿಸುವ ಸಲುವಾಗಿ ಮತ್ತು ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ನಂಜನಗೂಡು ಗರಳಪುರಿ ಉತ್ಸವವನ್ನು ನಡೆಸಲಾಗುತ್ತಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ಗುರುಭವನದಲ್ಲಿ ಗರಳಪುರಿ ಉತ್ಸವದ ಅಂಗವಾಗಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಏರ್ಪಡಿಸಲಾಗಿದ್ದ ಭಾವಗೀತೆ ಸ್ಪರ್ಧೆಯನ್ನು ಉದ್ಘಾಟಿಸುವ ಮೂಲಕ ಗರಳ ಪುರಿ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ನಂಜನಗೂಡು ಕನ್ನಡದ ಮೊದಲ ಮಹಿಳಾ ಕಾದಂಬರಿಗಾರ್ತಿ ಮತ್ತು ಸಾಹಿತಿ ತಿರುಮಲಾಂಬ ಸೇರಿದಂತೆ ಸಂಗೀತ ಕ್ಷೇತ್ರದ ಹಲವು ಸಾಧಕರನ್ನು ಹೊಂದುವ ಮೂಲಕ ನಾಡಿನ ಕಲೆ, ಸಾಹಿತ್ಯ, ಸಂಗೀತ ಕ್ಷೇತ್ರಗಳಲ್ಲಿ ಶ್ರೀಮಂತವಾದ ಐತಿಹಾಸಿಕ ಪರಂಪರೆಯನ್ನು ಹೊಂದಿದೆ, ಈ ಸಾಂಸ್ಕೃತಿಕ ವೈಭವವನ್ನು ಮತ್ತಷ್ಟು ಉತ್ತೇಜಿಸುವ ಸಲುವಾಗಿ ಶ್ರೀಕಂಠೇಶ್ವರ ಸ್ವಾಮಿಯವರ ದೊಡ್ಡ ಜಾತ್ರಾ ಮಹೋತ್ಸವದ ಅಂಗವಾಗಿ ಈ ಗರಳಪುರಿ ಉತ್ಸವವನ್ನು ನಡೆಸಲಾಗುತ್ತಿದೆ ಎಂದರು.

ಇದರಲ್ಲಿ ಯಾವುದೇ ರಾಜಕೀಯವಿಲ್ಲ ಅಧಿಕಾರ ಶಾಶ್ವತವಲ್ಲ, ಆದರೆ ಅಧಿಕಾರ ಸಿಕ್ಕಾಗ ಜನತೆಗೆ ಏನು ಸೇವೆ ಸಲ್ಲಿಸಿದ್ದೇವೆ ಎಂಬುದು ಮುಖ್ಯವಾಗುತ್ತದೆ, ಆದ್ದರಿಂದ ಹಿರಿಯರ ಸಲಹೆಯಂತೆ ಮೊದಲ ಬಾರಿಗೆ ಗರಳಪುರಿ ಉತ್ಸವವನ್ನು ನಡೆಸುವ ಮೂಲಕ ಕ್ಷೇತ್ರದ ಜನರನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಒಂದುಗೂಡಿಸುವ ಪ್ರಯತ್ನ ನಡೆಸಲಾಗಿದೆ ಜೊತೆಗೆ ಸಂಗೀತ ಮತ್ತು ಸಾಹಿತ್ಯ ಕ್ಷೇತ್ರದ ಆಸಕ್ತರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆ ಕಲ್ಪಿಸಲಾಗುತ್ತಿದೆ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ ಶಾಸಕರ ಹಿತಾಸಕ್ತಿಯ ಮೇರೆಗೆ ಮೊದಲ ಬಾರಿಗೆ ನಂಜನಗೂಡಿನಲ್ಲಿ ಅದ್ದೂರಿಯಾಗಿ ಗರಳಪುರಿ ಉತ್ಸವವನ್ನು ನಡೆಸುವ ಮೂಲಕ ಭಾವಗೀತೆ ಸ್ಪರ್ಧೆ, ಜಾನಪದ ಗಾಯನ ಸ್ಪರ್ಧೆ, ಚೆಸ್, ಆರೋಗ್ಯ ಯೋಗ ಜಾಗೃತಿ, ಚಿತ್ರಕಲಾ, ವಚನಗಾಯನ, ವೇಶಭೂಷಣ, ರೀಲ್ಸ್ ಮೇಕಿಂಗ್, ರಂಗೋಲಿ, ಹಾಲು ಕರೆಯುವ, ಮೆಹಂದಿ ಸ್ಪರ್ಧೆ ಸೇರಿದಂತೆ ವಿವಿಧ ಕಲಾವಿದರಿಗೆ ಅವರ ಪ್ರತಿಭೆಯನ್ನು ಪ್ರದರ್ಶಿಸಿ ಪ್ರೋತ್ಸಾಹಿಸುವ ಕೆಲಸ ಮಾಡುವುದು ಶ್ಲಾಘನೀಯ ಕಾರ್ಯ ಎಂದರು.

ಕಾರ್ಯಕ್ರಮದಲ್ಲಿ ಸುಮಾರು 50ಕ್ಕೂ ಹೆಚ್ಚು ಸ್ಪರ್ಧಿಗಳು ಕನ್ನಡ ಭಾವಗೀತೆಯನ್ನು ಹಾಡಿ ಜನರನ್ನು ರಂಜಿಸಿದರು. ಸ್ಪರ್ಧೆಯಲ್ಲಿ ಭಾಗವಹಿಸಿದ ಕಲಾವಿದರಿಗೆ ಪ್ರಶಸ್ತಿ ಪ್ರಮಾಣ ಪತ್ರ ವಿತರಿಸಲಾಯಿತು.

ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಕೆ.ಜಿ.ಮಹೇಶ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ವಾಲ್ಮೀಕಿ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ತಾಲೂಕು ಸಾಹಿತ್ಯ ಪರಿಷತ್ ಅಧ್ಯಕ್ಷ ಲತಾ ಮೋಹನ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಜಿಪಂ ಮಾಜಿ ಸದಸ್ಯೆ ಶಶಿರೇಖಾ, ಮುಖಂಡರಾದ ಕೆ.ಎಂ.ಬಸವರಾಜು, ಶ್ವೇತ ಲಕ್ಷ್ಮಿ, ಎನ್.ಎಂ.ಮಂಜುನಾಥ್, ಗುರುಮಲ್ಲಪ್ಪ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್, ಪ್ರಮುಖರು ಉಪಸ್ಥಿತರಿದ್ದರು.



ಭಾವಗೀತೆ ಸ್ಪರ್ಧೆಯನ್ನು ಉದ್ಘಾಟಿಸುವ ಮೂಲಕ ಗರಳಪುರಿ ಉತ್ಸವಕ್ಕೆ ಶಾಸಕ ದರ್ಶನ್ ಚಾಲನೆ ನೀಡಿದರು.

ತಿ.ನರಸೀಪುರದಲ್ಲಿ ರಂಜಾನ್ ಹಬ್ಬ ಆಚರಣೆ

ತಿ.ನರಸೀಪುರ ಮಾ 21– ಮುಸ್ಲಿಂ ಬಾಂಧವರ ಪವಿತ್ರ ಹಬ್ಬಗಳಲ್ಲಿ ಒಂದಾದ ಈದ್ ಉಲ್ ಫಿತರ್ ರಂಜಾನ್ ಹಬ್ಬವನ್ನು ತಾಲೂಕಿನಾದ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಜಿಲ್ಲೆಯಾದ್ಯಂತ ರಂಜಾನ್ ಪ್ರಯುಕ್ತ ಮಸೀದಿಗಳು, ದರ್ಗಾಗಳನ್ನು ವಿದ್ಯುತ್ ದೀಪಾಲಂಕಾರದಿಂದ ವಿಶೇಷವಾಗಿ ಸಿಂಗರಿಸಲಾಗಿತ್ತು. ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲೂ ಸಹ ಮುಸ್ಲಿಂ ಬಾಂಧವರು ರಂಜಾನ್ ಹಬ್ಬವನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಅದ್ದೂರಿಯಾಗಿ ಆಚರಿಸಿದರು. ಲಿಂಕ್ ರಸ್ತೆಯಲ್ಲಿರುವ ಮಸ್ಜಿದ್–ಎ–ನೂರ್ ಮಸೀದಿಯಲ್ಲಿ ಜಮಾಯಿಸಿದ ಸಾವಿರಾರು ಮುಸ್ಲಿಂ ಬಾಂಧವರು ಈ ಬಾರಿ ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಬೆಳಗ್ಗೆ 10ಕ್ಕೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಹೊಸ ಉಡುಪುಗಳನ್ನು ಧರಿಸಿ, ಒಬ್ಬರಿಗೊಬ್ಬರು ಆಲಿಂಗನ ಮಾಡಿ ಹಬ್ಬದ ಶುಭಾಶಯ ಕೋರಿದ್ದು ವಿಶೇಷವಾಗಿತ್ತು. ರಂಜಾನ್ ಹಬ್ಬದ ಸಂಭ್ರಮ ಹಿಂದೂ ಮತ್ತು ಮುಸ್ಲಿಂ ಬಾಂಧವರ ಭಾವೈಕ್ಯತೆಯ ಸಂಕೇತವಾಗಿ ಸಮುದಾಯದವರು ಸಹ ಹಬ್ಬದ ಶುಭಾಶಯ ಕೋರುವ ಮೂಲಕ ಭಾವೈಕ್ಯತೆಯನ್ನು ಸಾರಿದರು. ಗುರುಗಳಾದ ಮೌಲಾನಾ ಕೌಸರ್ ಹಾಗೂ ಅಧ್ಯಕ್ಷರು ಡಾ.ಬಿ.ಮನ್ಸೂರ್ ಅಲಿ, ಕಾರ್ಯದರ್ಶಿ ಸೈಯದ್, ಸಲ್ಮಾನ್, ಸದಸ್ಯರಾದ .ಬಿ ಸಮಿಉಲ್ಲಾ ಅಲ್ತಾಫ್, ಇನಾಯತ್, ಮನ್ಸೂರ್ ಕಮಲ್, ಸಮಿ ಲೈಟ್ ಇಮ್ರಾನ್ ಅಕ್ಬರ್ ಪಾಷ, ರಿಯಾಜ್ 700ಕ್ಕೂ ಹೆಚ್ಚು ಜನ ಉಪಸ್ಥಿತಿ ಇದ್ದರು.



ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ರಂಜಾನ್ ಆಚರಿಸಿದರು.

ಶಾದಿ ಮಹಲ್ ಕಾಮಗಾರಿ ಪೂರ್ಣ, ಶೀಘ್ರ ಉದ್ಘಾಟನೆ

ರಂಜಾನ್ ಸಾಮೂಹಿಕ ಪ್ರಾರ್ಥನೆಯಲ್ಲಿ ಶಾಸಕ ರವಿಶಂಕರ್ ಭಾಗಿ

ಕೆ.ಆರ್.ನಗರ: ಪಟ್ಟಣದ ಜೂನಿಯರ್ ಕಾಲೇಜು ಹಿಂಭಾಗದಲ್ಲಿ ನಿರ್ಮಾಣ ಮಾಡಲಾಗಿರುವ ಶಾದಿಮಹಲ್ ಕಾಮಗಾರಿ ಪೂರ್ಣಗೊಂಡಿದ್ದು ಶೀಘ್ರದಲ್ಲಿ ವಕ್ಫ ಬೋರ್ಡ್ ಸಚಿವ ಜಮೀರ್ ಅಹ್ಮದ್ ಖಾನ್ ಮತ್ತಿತರ ಗಣ್ಯರ ಸಮ್ಮುಖದಲ್ಲಿ ಉದ್ಘಾಟನೆ ಮಾಡಲಾಗುವುದು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಪಟ್ಟಣದ ಈದ್ಗಾ ಮೈದಾನದಲ್ಲಿ ನಡೆದ ರಂಜಾನ್ ಹಬ್ಬದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಮುಸ್ಲಿಂ ಬಾಂಧವರಿಗೆ ಹಬ್ಬದ ಶುಭಾಶಯ ತಿಳಿಸಿ ಅನಂತರ ಮಾತನಾಡಿದ ಅವರು ಸಮುದಾಯದವರ ಬೇಡಿಕೆಯಂತೆ ಮುಸ್ಲಿಂ ಬಡಾವಣೆಯಲ್ಲಿ ನಮ್ಮ ಕ್ಲಿನಿಕ್ ಆರಂಭಿಸಲು ಕ್ರಮ ವಹಿಸುತ್ತೇನೆ ಎಂದರು. ಈಗಾಗಲೇ ಮುಸ್ಲಿಂ ಬಡಾವಣೆಯಲ್ಲಿ ಮೌಲಾನ್ ಆಜಾದ್ ಸರ್ಕಾರಿ ಶಾಲೆಯನ್ನು ಆರಂಭಿಸಲಾಗಿದ್ದು ಅದಕ್ಕೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ನಿವೇಶನ ಮತ್ತು ಅಗತ್ಯ ಅನುದಾನ ಕೊಡಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಬಡಾವಣೆಯ 4 ವಾರ್ಡ್‌ಗಳ ರಸ್ತೆ, ಬಾಕ್ಸ್ ಚರಂಡಿ ನಿರ್ಮಾಣ ಸೇರಿದಂತೆ ಇತರ ಅಭಿವೃದ್ಧಿ ಕಾಮಗಾರಿಗೆ 5 ಕೋಟಿ ರೂ. ಬಿಡುಗಡೆ ಮಾಡಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ ಎಂದು ಮಾಹಿತಿ ನೀಡಿದ ಶಾಸಕ ಡಿ.ರವಿಶಂಕರ್ ಮಸೀದಿಯ ಅಭಿವೃದ್ಧಿಗಾಗಿ ಹಾಗೂ ಹಳೆ ಎಡತೊರೆಯ ಖಾದರ್ ಲಿಂಗವಲ್ಲಿಯ ದರ್ಗಾ ಅಭಿವೃದ್ಧಿಗೆ 90 ಲಕ್ಷ ರೂ. ನೀಡಲಾಗಿದೆ ಎಂದು ತಿಳಿಸಿದರು.



ಕೆ.ಆರ್.ನಗರದಲ್ಲಿ ನಡೆದ ರಂಜಾನ್ ಸಾಮೂಹಿಕ ಪ್ರಾರ್ಥನೆಯಲ್ಲಿ ಶಾಸಕ ರವಿಶಂಕರ್ ಪಾಲ್ಗೊಂಡು ಮಾತನಾಡಿದರು.

ವೀರೇದೇವನಪುರದಲ್ಲಿ ನ್ಯಾಯಬೆಲೆ ಅಂಗಡಿ ಉದ್ಘಾಟನೆ

ನಂಜನಗೂಡು: ತಾಲೂಕಿನ ವೀರೇದೇವನಪುರ ಗ್ರಾಮಸ್ಥರ ಬೇಡಿಕೆಯನ್ನು ಮನ್ನಿಸಿ ಗ್ರಾಮದ ಪ್ರಾಥಮಿಕ ಪತ್ತಿನ ಸಹಕಾರ ಸಂಘದ ಕಟ್ಟಡದಲ್ಲಿ ನ್ಯಾಯಬೆಲೆ ಅಂಗಡಿಯನ್ನು ಆರಂಭಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ತಾಲೂಕಿನ ವೀರೇದೇವನಪುರ ಗ್ರಾಮದಲ್ಲಿ ಶನಿವಾರ ನ್ಯಾಯಬೆಲೆ ಅಗಂಡಿಯಲ್ಲಿ ಗ್ರಾಮಸ್ಥರಿಗೆ ಪಡಿತರ ವಿತರಿಸಿ ಅವರು ಮಾತನಾಡಿದರು. ವೀರೇದೇವನಪುರ ಗ್ರಾಮಸ್ಥರು ಪಡಿತರ ಪಡೆಯಬೇಕಾದರೆ ಪಕ್ಕದ ಗ್ರಾಮದ ನ್ಯಾಯಬೆಲೆ ಅಂಗಡಿಗೆ ತೆರಳಬೇಕಾಗಿತ್ತು, ಆದಕಾರಣ ಗ್ರಾಮಸ್ಥರು ನಮ್ಮ ಗ್ರಾಮದಲ್ಲಿಯೇ ನ್ಯಾಯಬೆಲೆ ಅಂಗಡಿ ತೆರೆದು ಪಡಿತರ ವಿತರಿಸಬೇಕು ಎಂದು ಬೇಡಿಕೆ ಸಲ್ಲಿಸಿದ್ದರು, ಗ್ರಾಮಸ್ಥರ ಬೇಡಿಕೆಯಂತೆ ಇಂದಿನಿಂದ ನಿಮ್ಮ ಗ್ರಾಮದಲ್ಲಿ ನ್ಯಾಯ ಬೆಲೆ ಅಂಗಡಿ ಆರಂಭಿಸಲಾಗಿದ್ದು, ನಿಮ್ಮ ಗ್ರಾಮದಲ್ಲಿಯೇ ಪಡಿತರ ಪಡೆಯಬಹುದಾಗಿದೆ ಎಂದ ಅವರು ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ನೀಡಿದ್ದ ಭರವಸೆಯಂತೆ 5 ಗ್ಯಾರಂಟಿಗಳನ್ನು ಸಮರ್ಥವಾಗಿ ಜಾರಿಗೆ ತಂದಿದೆ. ಗ್ಯಾರಂಟಿ ಯೋಜನೆಗಳು ಬಡವರು ಬದುಕು ಕಟ್ಟಿಕೊಳ್ಳಲು ನೆರವಾಗಿವೆ ವಿಪಕ್ಷಗಳ ಆರೋಪದಂತೆ ಗ್ಯಾರಂಟಿ ಯೋಜನೆಯಿಂದ ಅಭಿವೃದ್ಧಿ ಯೋಜನೆಗಳಿಗೆ ಹಿನ್ನಡೆಯಾಗಿಲ್ಲ, ನಮ್ಮ ಕ್ಷೇತ್ರದಲ್ಲಿ ಸತತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗಿದೆ. ಗ್ರಾಮದಲ್ಲೂ ಕೂಡ ಗ್ರಾಮಸ್ಥರು ಬಸ್ ಶೆಲ್ಟರ್ ನಿರ್ಮಾಣ ಹಾಗೂ ಗ್ರಂಥಾಲಯವನ್ನು ನಿರ್ಮಿಸಿ ಕೊಡುವಂತೆ ಬೇಡಿಕೆ ಇಟ್ಟಿದ್ದು ಶಾಸಕರ ಅನುದಾನದಲ್ಲಿ ಅನುದಾನ ನೀಡುವ ಮೂಲಕ ನಿಮ್ಮ ಬೇಡಿಕೆಯನ್ನು ಈಡೇರಿಸಲಾಗುವುದು ಎಂದರು.

ಸಮಾರಂಭದಲ್ಲಿ ವಿಜಯ್ ಕುಮಾರ್ ಶ್ರೀನಿವಾಸಮೂರ್ತಿ, ರಂಗದಾಸ್, ಮಂಜುನಾಥ್, ಮುದ್ದುಮಾದ ಶೆಟ್ಟಿ, ದೊರೆಸ್ವಾಮಿ, ಸುರೇಶ್, ಸೋಮು, ಶಿವಕುಮಾರ್, ಬದನವಾಳು ಮಹೇಶ್, ಪಾರ್ವತಮ್ಮ ಇದ್ದರು.



ವೀರೇದೇವನಪುರದಲ್ಲಿ ಶಾಸಕ ದರ್ಶನ್ ನ್ಯಾಯಬೆಲೆ ಅಂಗಡಿ ಉದ್ಘಾಟಿಸಿದರು.

ಮಾ.24, ಬೆಂಗಳೂರು ಫ್ರೀಡಂ ಪಾರ್ಕಿನಲ್ಲಿ ಒಳ ಮೀಸಲಾತಿ ವಿರೋಧಿಸಿ ಪ್ರತಿಭಟನೆ

ಹುಣಸೂರು, ಮಾ.21– ಒಳ ಮೀಸಲಾತಿ ವಿರೋಧಿಸಿ ಮಾ.24ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ಭೋವಿ ಸಮಾಜದ ರಾಜ್ಯ ಉಪಾಧ್ಯಕ್ಷ ವಿ.ಗಣೇಶ್ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ, ಅವರು ಭೋವಿ, ಕೊರಮ, ಕೊರಚ, ಲಂಬಾಣಿ ಇನ್ನೂ ಅನೇಕ ಸಮುದಾಯಕ್ಕೆ. ನಾಗಮೋಹನ್ ದಾಸ್ ಅವರ ಒಳ ಮೀಸಲಾತಿ ವರದಿಯ ತಾರಾತಮ್ಯದಿಂದ 101 ಹಿಂದುಳಿದ ವರ್ಗಗಳಿಗೆ ತುಂಬಲಾರದ ನಷ್ಟವಾಗಿದ್ದು ಸರಕಾರ ಸರಿಪಡಿಸಬೇಕಿದೆ ಎಂದು ಆಗ್ರಹಿಸಿದರು.

ಒಳ ಮೀಸಲಾತಿ ವಿಚಾರದಲ್ಲಿ ರಾಜಕೀಯ ಸರ್ವ ಪಕ್ಷಗಳು ಮೌನವಹಿಸದೆ, ಮಧ್ಯ ಪ್ರವೇಶ ಮಾಡಿ. ಧ್ವನಿ ಇಲ್ಲದ ನಮಗೆ ನ್ಯಾಯ ಕೊಡಿಸಬೇಕು. ಹಾಗೆ ರಾಜ್ಯದಲ್ಲಿ ರಾಜಕೀಯ ಪಕ್ಷಗಳ ಗೆಲುವಿಗೆ ನಮ್ಮ ಸಮುದಾಯಗಳು ನಿರ್ಣಾಯಕ ಪಾತ್ರವಹಿಸಲಿದ್ದು, ನಮ್ಮ ನೋವಿಗೆ ಸ್ಪಂದಿಸದಿದ್ದರೆ. ಮುಂದಿನ ದಿನಗಳಲ್ಲಿ ಪಾಠ ಕಲಿಸಲಿದ್ದೇವೆ ಎಂದು ಎಚ್ಚರಿಸಿದರು.

ಹುಣಸೂರು ದಿ.ದೇವರಾಜ ಅರಸು ಕರ್ಮ ಭೂಮಿಯಾಗಿದ್ದು, ಎಷ್ಟೋ ಹಿಂದುಳಿದ ನಾಯಕರಿಗೆ ರಾಜಕೀಯ ಜನ್ಮ ನೀಡಿದ್ದಾರೆ. ಸಾಮಾಜಿಕ ನೆಲೆಗಟ್ಟಿನಲ್ಲಿ ಅಧಿಕಾರ ಕಲ್ಪಿಸಿ. ಸಾಮಾನ್ಯ ಜನತೆಗೆ ಸಾಮರಸ್ಯ ಒದಗಿಸಿದ್ದಾರೆ. ಅವರ ದಾಖಲೆ ಮುರಿಯುವ ನೆಪದಲ್ಲಿ ಅವರಿಗೆ ಅವಮಾನ ಮಾಡದೇ ಸಹಬಾಳ್ವೆಗೆ ಅವಕಾಶ ನೀಡಿ ಎಂದರು.

ಅ.ಕ.ರಾ.ಭೋವಿ ಸಂಘದ ರಕ್ಷಣಾ ವೇದಿಕೆ ಅಧ್ಯಕ್ಷ ಪರಮೇಶ್ ಮಾತನಾಡಿ, ಮಾ.24 ರಂದು ತಾಲೂಕಿನ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿ. ಸಮಾವೇಶವನ್ನು ಯಶಸ್ವಿಗೊಳಿಸ ಬೇಕಾಗಿ ಮನವಿ ಮಾಡಿದರು.

ಸುದ್ದಿ ಗೋಷ್ಠಿಯಲ್ಲಿ ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಸ್ವಾಮಿ ಭೋವಿ, ವಾಸು, ವೆಂಕಟೇಶ್, ಅಶೋಕ್, ಮಹದೇವ್ ಇದ್ದರು.



ಸುದ್ದಿಗೋಷ್ಠಿಯಲ್ಲಿ ವಿ.ಗಣೇಶ್ ಮಾತನಾಡಿದರು.

ಜಾತ್ರೆಗಳು ಜನರ ನಡುವೆ ಬಾಂಧವ್ಯ ಬೆಸೆಯುವ ಕೊಂಡಿಗಳು



ತಿ.ನರಸೀಪುರ, ಮಾ.21– ಹಳ್ಳಿಗಳಲ್ಲಿ ನಡೆಯುವ ಜಾತ್ರೆಗಳು ಜನರ ನಡುವಿನ ಬಾಂಧವ್ಯ ಬೆಸೆಯುವ ಕೊಂಡಿಗಳು ಎಂದು ಅಪರ ನಿವೃತ್ತ ಆಯುಕ್ತ ಹಾಗೂ ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಉಪಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಬಣ್ಣಿಸಿದರು.

ಪಟ್ಟಣದ ಹೆಳವರಹುಂಡಿ ಗ್ರಾಮದಲ್ಲಿ ಯುಗಾದಿ ಹಬ್ಬದಂದು ನಡೆಯುವ 34ನೇ ವರ್ಷದ ಗಂಗಮ್ಮ ತಾಯಿ ಕೊಂಡೋತ್ಸವದಲ್ಲಿ ಮಾತನಾಡಿದ ಅವರು, ಬಡ ವರ್ಗದವರಿಗೆ ನೆರಳಾಗಿ ನಿಂತು ಎಲ್ಲವನ್ನು ಸರಿದೂಗಿಸಿಕೊಂಡು ಹೋಗುವ ಅವರ ಶ್ರಮ ಇನ್ನು ಹೆಚ್ಚಾಗಿ ಬೇಕಾಗಿದೆ. ಗ್ರಾಮಸ್ಥರು ಇದಕ್ಕೆ ಅಪಾರ ಬೆಂಬಲ ನೀಡುತ್ತಾ ಬಂದಿದ್ದಾರೆ. ಇನ್ನು ಹೆಚ್ಚಿನ ಸಹಕಾರ ನೀಡಿ ಎಂದರು.

ಜಾತ್ರಾ ಮಹೋತ್ಸವ ಇಂದು 34 ವರ್ಷಗಳನ್ನು ಪೂರೈಸಿದೆ. ಇದಕ್ಕೆ ಊರಿನ ಜನತೆ, ನೆರೆಹೊರೆಯ ಭಕ್ತರ ಸಹಕಾರ, ಭಕ್ತಿ, ಗೌರವಗಳೇ ಕಾರಣ. ಹೀಗಾಗಿ ದಾಸೋಹ, ಸಾಧಕರಿಗೆ ಸನ್ಮಾನ ಎಂದರು.

ಪುರಸಭೆಯ ಮಾಜಿ ಸದಸ್ಯ ಮೆಡಿಕಲ್ ನಾಗರಾಜು, ಸೋಮು, ಯಜಮಾನರಾದ ರಂಗಯ್ಯ, ಅರ್ಚಕ ಹನುಮಂತು, ಮುಖಂಡರಾದ ಗೋವಿಂದಯ್ಯ, ಚಂದ್ರು ಬಸಪ್ಪ, ಸಣ್ಣಪ್ಪ, ರೇವಣ್ಣ, ಮಹೇಶ್, ಶಿವ ಸ್ವಾಮಿ, ಹಾಗೂ ಸಮುದಾಯದ ಮುಖಂಡರು ಹಾಜರಿದ್ದರು.

ಸೂಳೆ ಕೋಟೆಯಲ್ಲಿ ಶ್ರೀ ಆಂಜನೇಯ ಸ್ವಾಮಿ ವೈಭವದ ರಥೋತ್ಸವ

ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಸೂಳೆಕೋಟೆ (ಹನುಮಂತಪುರ) ಗ್ರಾಮದಲ್ಲಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವವು ಶನಿವಾರ ಭಕ್ತಿಭಾವದಿಂದ ವಿಜೃಂಭಣೆಯಿಂದ ನೆರವೇರಿತು.

ಬೆಳಗ್ಗೆ 6.30 ಗಂಟೆಗೆ ಕಾವೇರಿ ನದಿಯಿಂದ ತೀರ್ಥ ಹಾಗೂ ಮೃತಿಕೆ ಸಂಗ್ರಹಣೆ ಮಾಡಿ, ಹೊಸದಾಗಿ ನಿರ್ಮಿಸಿದ ತೇರಿನ ಕಳಸ ಪ್ರತಿಷ್ಠಾಪನೆ ಪೂಜೆ ಸಲ್ಲಿಸಲಾಯಿತು. ನಂತರ ಬೆಳಗ್ಗೆ 11.45ಕ್ಕೆ ಸೀತಾರಾಮ ಸಮೇತ ಶ್ರೀ ಆಂಜನೇಯ ಸ್ವಾಮಿಯ ರಥಾರೋಹಣ ನೆರವೇರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಭಕ್ತಾದಿಗಳು ಭಕ್ತಿ ಭಾವದಿಂದ ಬ್ರಹ್ಮರಥವನ್ನು ಎಳೆದರು.

ರಥೋತ್ಸವದ ವೇಳೆ ನೂರಾರು ಭಕ್ತರು ರಥಕ್ಕೆ ಹಣ್ಣು–ಜವನ ಎಸೆದು ಭಕ್ತಿ ವ್ಯಕ್ತಪಡಿಸಿದರು. ಅನೇಕರು ರಥದ ಹಗ್ಗ ಹಿಡಿದು ರಥವನ್ನು ಎಳೆದು ಪುಣ್ಯ ಗಳಿಸಿದರು. ಇನ್ನೂ ಹಲವರು ರಥೋತ್ಸವವನ್ನು ವೀಕ್ಷಿಸಿ ಸ್ವಾಮಿಯ ಕೃಪೆಗೆ ಪಾತ್ರರಾದರು.

ಯುಗಾದಿ ಹಬ್ಬದ ಎರಡನೇ ದಿನ ನಡೆಯುವ ಈ ಜಾತ್ರೆಗೆ ಅಕ್ಕಪಕ್ಕದ ಜಿಲ್ಲೆಗಳು ಹಾಗೂ ತಾಲೂಕಿನ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ಆಗಮಿಸಿ ಸಂಜೆವರೆಗೆ ಪೂಜೆ ಸಲ್ಲಿಸಿ ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಂಡರು. ರಥೋತ್ಸವಕ್ಕೆ ಆಗಮಿಸಿದ ಎಲ್ಲಾ ಭಕ್ತರಿಗೆ ದೇವಸ್ಥಾನ ಸಮಿತಿಯಿಂದ ಅನ್ನದಾನ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಬೆಟ್ಟದಪುರ ಶ್ರೀ ಸಲಿಲಾಖ್ಯ ಕನ್ನಡ ಮಠದ ಶ್ರೀ ಚಿಕ್ಕವೀರ ದೇಶೀಕೇಂದ್ರ ಸ್ವಾಮಿಗಳು, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ನಿತಿನ್ ವೆಂಕಟೇಶ್, ದೇವಸ್ಥಾನ ಸಮಿತಿಯ ಅಧ್ಯಕ್ಷ ಎಚ್.ಶಿಂಗ್ರಿಶೆಟ್ಟಿ, ಕಾರ್ಯದರ್ಶಿ ಕೆ.ಶಿವರಾಮ್, ಕಾರ್ಯಾಧ್ಯಕ್ಷ ಎಸ್.ಎಸ್. ಶಂಕರಪ್ಪ ತಾ.ಪಂ ಮಾಜಿ ಸದಸ್ಯ ಮೋಹನ್ ರಾಜ್ ಸೇರಿದಂತೆ ಸಮಿತಿಯ ಪದಾಧಿಕಾರಿಗಳು ಹಾಗೂ ಸಾವಿರಾರು ಭಕ್ತರು ಭಾಗವಹಿಸಿದ್ದರು.



ನವೋದಯ ಪರೀಕ್ಷೆಯಲ್ಲಿ ಇಬ್ಬರು ಉತ್ತೀರ್ಣ

ಹೆಚ್.ಡಿ.ಕೋಟೆ: ನವೋದಯ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ತಾಲೂಕಿನ ಹೊಸತೊರವಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಎಂ.ಸಂಧ್ಯಾ, ಎಚ್.ಆರ್.ಪಲ್ಲವಿ, ಇಬ್ಬರು ವಿದ್ಯಾರ್ಥಿಗಳು ಆಯ್ಕೆಗೊಂಡು ಶಾಲೆಗೆ, ತಾಲೂಕಿಗೆ ಕೀರ್ತಿ ತಂದಿದ್ದಾರೆ.




ನವೋದಯ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ರಾಜು ಹಾಗೂ ಶಾಲಾ ಶಿಕ್ಷಕರು ಗ್ರಾಮಸ್ಥರು ಅಭಿನಂದಿಸಿದರು.

ಐದನೇ ವರ್ಷದ ಪುಣ್ಯಸ್ಮರಣೆ



ಕಾಂಗ್ರೆಸ್‌ನ ಹಿರಿಯ ರಾಜಕಾರಣಿ ಹಾಗೂ ಮೈಸೂರು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕೆ.ಸಿ.ಬಲರಾಮ್ ಅವರ ಐದನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಗೀತ ಗಾಯನ, ಅನ್ನ ಸಂತರ್ಪಣೆ ಹಾಗೂ ಶಾಲಾ ಮಕ್ಕಳ ನೋಟ್‌ಬುಕ್ ವಿತರಣೆ ಕಾರ್ಯಕ್ರಮವನ್ನು ಕುಪ್ಯಾ ಗ್ರಾಮದಲ್ಲಿ ಏರ್ಪಡಿಸಲಾಗಿತ್ತು. ಹಾಪ್‌ಕಾಮ್ಸ್ ಮಾಜಿ ನಿರ್ದೇಶಕ ಮುಸುವಿನ ಕೊಪ್ಪಲು ಪ್ರಕಾಶ್, ಶೇಖರ್(ದದ್ದೂರಿ) ಡೈರಿ ಅಧ್ಯಕ್ಷ ಪ್ರಭಾಕರ್ ಬಲರಾಮ್, ಶಿಕ್ಷಕ ಪುಟ್ಟಸ್ವಾಮಿ, ಗವಿಸಿದ್ದಯ್ಯ ಮತ್ತಿತರಿದ್ದರು

ಗಾರೆ ಕೆಲಸಗಾರ ಕಾಲು ಜಾರಿ ಬಿದ್ದು ಸಾವು



ಹುಣಸೂರು, ಮಾ.21– ನಗರದ ಸದಾಶಿವ ಕೊಪ್ಪಲಿನಲ್ಲಿ ಗಾರೆ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಕಾಲು ಜಾರಿ ಬಿದ್ದ ಗಾರೆ ಸಂಘದ ಮಾಜಿ ಅಧ್ಯಕ್ಷ ಗಾರೆ ಕೃಷ್ಣಪ್ಪ (70) ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ನಗರದ 27ನೇ ವಾರ್ಡಿನ ಹೊಸ ಮಾರುತಿ ಬಡಾವಣೆ ನಿವಾಸಿ ಗಾರೆ ಕೃಷ್ಣಪ್ಪ ಮೂರು ದಿನಗಳ ಹಿಂದೆ ಕೆಲಸ ಮಾಡುತ್ತಿರುವ ಸಮಯದಲ್ಲಿ ಕಾಲು ಜಾರಿ ಬಿದ್ದಿದ್ದು ತಕ್ಷಣ ಚಿಕಿತ್ಸೆಗಾಗಿ ಹುಣಸೂರಿನಲ್ಲಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಸೇರಿಸಲಾಗಿತ್ತು ಚಿಕಿತ್ಸೆ ಫಲಕರಿಸದೆ ಇಂದು ಮೃತಪಟ್ಟಿದ್ದಾರೆ.

ಗಾರೆ ಕೆಲಸದ ವೃತ್ತಿಯಲ್ಲಿ ಹಿರಿಯರು ಮತ್ತು ಅನುಭವಸ್ಥರೆನಿಸಿದ್ದ ಕೃಷ್ಣಪ್ಪ ನವರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದಾರೆ

ಮೃತಪಟ್ಟ ಕುಟುಂಬಕ್ಕೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಮಾಜಿ ನಗರ ಸಭೆ ಸದಸ್ಯರು ರಾಧಾ ಲಕ್ಷ್ಮಿ, ಮಹಿಳಾ ಸಹಕಾರ ಸಂಘದ ಕಾರ್ಯದರ್ಶಿ ಶಶಿಕಲಾ, ನಾಗರಾಜ್, ಚಂದ್ರಶೇಖರ್, ಸತೀಶ್, ಲಕ್ಷ್ಮಣ್, ಸಾಂತ್ವನ ಹೇಳಿದ್ದಾರೆ

ದಳ್ಳಾಳಿ ಮಾದನಾಯಕ ನಿಧನ



ಸುತ್ತೂರು: ನಂಜನಗೂಡು ತಾಲೂಕು ಸುತ್ತೂರು ಗ್ರಾಮದ ಭತ್ತದ ದಲ್ಲಾಳಿ ಮಾದನಾಯಕರು ಇಂದು ನಿಧನರಾದರು.

ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಇವರ ಅಂತ್ಯಕ್ರಿಯ (ಭಾನುವಾರ) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.


ಸಾಮೂಹಿಕ ಪ್ರಾರ್ಥನೆ ಮೂಲಕ ರಂಜಾನ್ ಆಚರಣೆ

ಸರಗೂರು: ಪಟ್ಟಣದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಮೂಲಕ ರಂಜಾನ್ ಹಬ್ಬವನ್ನು ಸಂಭ್ರಮ ಸಡಗರ ಮತ್ತು ಭಕ್ತಿಭಾವದಿಂದ ಆಚರಿಸಲಾಯಿತು. ಜಾಮಿಯಾ ಮಸೀದಿ ಗುರುಗಳಾದ ಅಬ್ದುಲ್ ರಶೀದ್ ಸಾಬ್ ಹಾಗೂ ನೂರ್ ಮಸೀದಿ ಗುರುಗಳಾದ ಅಬ್ದುಲ್ ಜಲೀಲ್ ಅವರು ನಾಡಿನ ಜನತೆಗೆ ಪವಿತ್ರ ರಂಜಾನ್ ಹಬ್ಬದ ಶುಭಾಶಯ ಕೋರಿದರು.

ಈದ್ಗಾ ಮೈದಾನಕ್ಕೆ ಶಾಸಕರಾದ ಅನಿಲ್ ಚಿಕ್ಕಮಾದು ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸುತ್ತಿದ್ದ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯ ಕೋರಿ ಒಂದು ತಿಂಗಳ ಉಪವಾಸ ನಂತರ ಬರುವ ಹಬ್ಬವೇ ಪವಿತ್ರ ರಂಜಾನ್, ಹಬ್ಬಗಳ ಆಚರಣೆಯಿಂದ ಎಲ್ಲರಲ್ಲಿ ಉತ್ತಮ ಬಾಂಧ್ಯವ್ಯ ಬೆಸೆಯುತ್ತದೆ, ಜಗತ್ತಿನ ಜನತೆಗೆ ಸನ್ಮಾರ್ಗದ ದಾರಿ ತೋರಿ ಕತ್ತಲು ಕವಿದ ಮನುಷ್ಯನ ಬಾಳಿನಲ್ಲಿ ಜ್ಞಾನದ ದೀಪ ಬೆಳಗಿಸುವ ಪವಿತ್ರ ರಂಜಾನ್ ಎಲ್ಲರಿಗೂ ದೇವರು ಒಳಿತು ಮಾಡಲಿ ಉತ್ತಮ ಮಳೆ ಬೆಳೆಯಾಗಿ ದೇಶ ಸಂವೃದ್ಧಿಯಾಗಲಿ ಎಂದು ಹಾರೈಸಿದರು.

ಮುಸ್ಲಿಂ ಬಾಂಧವರಿಂದ ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ರಂಜಾನ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ನಂತರ ಪಟ್ಟಣದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ನಡೆಸಿ ಮಸೀದಿಗೆ ಬಂದು ಸಾಂಕೇತಿಕವಾಗಿ ಪ್ರಾರ್ಥನೆ ಸಲ್ಲಿಸಲಾಯಿತು, ರಂಜಾನ್ ಹಬ್ಬದ ಪ್ರಯುಕ್ತ ಜಾವೀದ್‌ಪಾಷ, ಉಚಿತವಾಗಿ ಕಬ್ಬಿನಹಾಲು ವಿತರಣೆ ಮಾಡಿದರು, ಸಮಾಜದ ವತಿಯಿಂದ ಮಕ್ಕಳಿಗೆ ಸಿಹಿ ಹಂಚಿದರು, ಪುಟ್ಟ ಮಕ್ಕಳು ಹೊಸಬಟ್ಟೆ ತೊಟ್ಟು ರಂಜಾನ್ ಹಬ್ಬದ ಮೆರಗು ತಂದರು,

ಸಮಾಜದ ಯಜಮಾನರಾದ ಹಿದಾಯತ್ ಶರೀಫ್, ಅಮೀರ್ ಸುಹೇಲ್, ಸ್ಟೇಟ್ ವಕ್ಫ್ ಬೋರ್ಡ್ ಸದಸ್ಯ ಸುಭಾನ್, ಜಾವೀದ್‌ಪಾಷ, ಖಲೀಲ್, ಯಾಸೀನ್, ದಾದು, ವಾಜೀದ್, ರಾಹಿಲ್ ಪಾಷ, ಸಾಧಿಕ್‌ಪಾಷ, ಅಬ್ದುಲ್ ವಾಹಿದ್, ಜಲೀಲ್, ಹಾಜಿ ಅಬ್ದುಲ್‌ಅಜೀಜ್, ನಾಸೀರ್, ಹಿಬ್ರಾಹಿಂ, ಶೇಬ್, ಆನಾಸ್, ರಫಿ, ಚಾಂದ್, ಸೇಟು, ಸಾಧನ್, ಜಲೀಲ್ ಹಾಜ್ರತ್, ಸಿರಾಜ್ ಪಾಷ, ಹಾಗೂ ಮುಸ್ಲಿಂ ಬಾಂಧವರು ಯುವಕರು, ಭಾಗವಹಿಸಿದ್ದರು. ಸಂಭ್ರಮದ ರಂಜಾನ್ ಆಚರಣೆ ನಡೆಸಿದ ಮುಖಂಡರು ಯುವಕರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು,



ರಂಜಾನ್ ಹಬ್ಬದ ಪ್ರಯುಕ್ತ ಈದ್ಗಾ ಮೈದಾನಕ್ಕೆ ಶಾಸಕ ಅನಿಲ್ ಚಿಕ್ಕಮಾದು ಬೇಟಿ ನೀಡಿ ಶುಭಾಶಯ ಕೋರಿದರು.

ಕರ್ನಾಟಕ ಜಾಹೀರಾತು ನೀತಿ–2026ಕ್ಕೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಖಂಡನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಬರೀ ಆಡುವವರು... ಮಾಡುವವರಲ್ಲ ಎಂಬುದಕ್ಕೆ ಇದೊಂದು ಸಾಕ್ಷಿ...!!

ಮೈಸೂರು, ಮಾ.21– 'ಕರ್ನಾಟಕ ಜಾಹೀರಾತು ನೀತಿ–2026' ಅನ್ನು ಜಾರಿಗೆ ತರಲು ಮುಂದಾಗಿರುವ ರಾಜ್ಯ ಸರ್ಕಾರದ ಧೋರಣೆಯನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಖಂಡಿಸಿದೆ.

ಇದು ವಾರ್ತಾ ಇಲಾಖೆ ಅಧಿಕಾರಿಗಳ ವಕ್ರ ದೃಷ್ಟಿ ಹಾಗೂ ಸೇಡಿನ ಮನೋಭಾವ ಒಳಗೊಂಡ ನೀತಿ ಇದಾಗಿದ್ದು, ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಪಾಲಿಗೆ ಮರಣ ಶಾಸನವಾಗಿದೆ. ಪತ್ರಿಕೆಗಳು ನಾಶವಾದರೆ ಪ್ರಜಾಪ್ರಭುತ್ವವೂ ನಾಶವಾಗಲಿದೆ ಎಂಬ ಅರಿವು ಸರ್ಕಾರಕ್ಕೆ ಇರಬೇಕು ಎಂದು ಸಂಘ ಅಭಿಪ್ರಾಯಿಸಿದೆ.

ಈ ಸಂಬಂಧ ಇಂದು ಪತ್ರಕರ್ತರ ಭವನದಲ್ಲಿ ಸಂಘದ ಅಧ್ಯಕ್ಷ ಕೆ.ದೀಪಕ್ ನೇತೃತ್ವದಲ್ಲಿ ನಡೆದ ಪತ್ರಿಕಾ ಸಂಪಾದಕರ ಸಭೆಯಲ್ಲಿ, ಸಂಕಷ್ಟದಲ್ಲಿರುವ ಪತ್ರಿಕೆಗಳನ್ನು ಮೇಲೆತ್ತಬೇಕಿರುವ ರಾಜ್ಯ ಸರ್ಕಾರ 'ಕರ್ನಾಟಕ ಜಾಹೀರಾತು ನೀತಿ'ಯನ್ನು ಜಾರಿಗೆ ತರಲು ಮುಂದಾಗಿ, ಪತ್ರಿಕೆಗಳ ಕೊಲ್ಲಲು ಸಂಚು ರೂಪಿಸಿದೆ ಎಂಬ ಅನಿಸಿಕೆ ವ್ಯಕ್ತವಾಗಿದೆ.

ಸಾಮಾನ್ಯ ವರ್ಗದ ಪತ್ರಿಕೆಗಳು ಮಾಧ್ಯಮ ಪಟ್ಟಿಗೆ ಸೇರಲು 2 ವರ್ಷದಿಂದ 3 ವರ್ಷಕ್ಕೆ ಪ್ರಕಟಣಾ ಅವಧಿಯನ್ನು ವಿಸ್ತರಿಸಿರುವುದು ಹಾಗೂ ಪರಿಶಿಷ್ಟ ಜಾತಿ, ವರ್ಗ, ವಿಶೇಷ ಸ್ಥಾನಮಾನ ಹೊಂದಿರುವ ಜಿಲ್ಲೆಗಳ ಪತ್ರಿಕೆಗಳು ಹಾಗೂ ಪ್ರಾದೇಶಿಕ ಭಾಷಾ ಪತ್ರಿಕೆಗಳಿಗೆ ಇದ್ದ 1 ವರ್ಷದ ಪ್ರಸರಣ ಅವಧಿಯನ್ನು 2 ವರ್ಷಕ್ಕೆ ವಿಸ್ತರಿಸಿರುವುದು ಹೊಸ ಪತ್ರಿಕೆಗಳ ಆರಂಭಕ್ಕೆ ಕಡಿವಾಣ ಹಾಕುವ ಹುನ್ನಾರವಾಗಿದೆ.

ಸದ್ಯ ಮಾನ್ಯತಾ ಪಟ್ಟಿಯಲ್ಲಿರುವ ಪತ್ರಿಕೆಗಳ ಮಾನ್ಯತೆಯನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ಮಾಧ್ಯಮ ಪರಿಶೀಲನಾ ಸಮಿತಿಯಿಂದ ಪುನರ್ ಪರಾಮರ್ಶಿಸುವುದು, ಪ್ರಾದೇಶಿಕ ಪತ್ರಿಕೆಗಳು ಸ್ವಂತ ಕಚೇರಿ ಮತ್ತು ಮುದ್ರಣಾ ಘಟಕ ಹೊಂದಿರಬೇಕು ಹಾಗೂ ಕನಿಷ್ಠ 15 ಮಂದಿ ಖಾಯಂ ನೌಕರರನ್ನು ಹೊಂದಿರಬೇಕು, ಕನಿಷ್ಠ 6 ಜಿಲ್ಲೆಗಳಲ್ಲಿ 25,000 ಪ್ರತಿಗಳ ಪ್ರಸಾರ ಸಂಖ್ಯೆಯನ್ನು ಹೊಂದಿರಬೇಕು ಎಂಬ ಷರತ್ತು ಹಾಕಲಾಗಿದೆ. ಪ್ರಾದೇಶಿಕ ಪತ್ರಿಕೆ ನಡೆಸುತ್ತಿರುವ ಎಲ್ಲರೂ ಪ್ರತ್ಯೇಕ ಮುದ್ರಣ ಘಟಕ ಸ್ಥಾಪಿಸಲು ಸಾಧ್ಯವಿಲ್ಲ ಎಂದು ಆಕ್ಷೇಪ ವ್ಯಕ್ತವಾಗಿದೆ.

ಪತ್ರಿಕೆ ಟೈಟಲ್ ವರ್ಗಾವಣೆ ರದ್ದು: ಪತ್ರಿಕೆಯ ಟೈಟಲ್ ವರ್ಗಾವಣೆಯನ್ನು ಕೇವಲ ಕುಟುಂಬಕ್ಕೆ ಸೀಮಿತಗೊಳಿಸುವುದು ಒಂದು ಪತ್ರಿಕೆಯ ಪರಂಪರೆ ಮುಂದುವರೆಕೆಗೆ ಧಕ್ಕೆಯಾಗಲಿದೆ. ಸಂಪಾದಕ ಸತ್ತರೂ ಪತ್ರಿಕೆಗಳು ಸಾಯಬಾರದು. ಪತ್ರಿಕೆಗಳ ಟೈಟಲ್ ವರ್ಗಾವಣೆ ಮಾಡಿದರೆ ಮಾನ್ಯತಾ ಪಟ್ಟಿಯಿಂದ ಕೈಬಿಡುವ ಕ್ರಮವೂ ಪತ್ರಿಕೆ ಮಾಲೀಕನ ಹಕ್ಕುಗಳನ್ನು ಕಸಿದುಕೊಳ್ಳುವಂತದ್ದಾಗಿದೆ ಹಾಗೂ ಪತ್ರಿಕೆಗಳು ದೀರ್ಘಕಾಲ ಮುದ್ರಣಗೊಳ್ಳಲು ತೊಡಕಾಗಲಿದೆ.

ಜಾಹೀರಾತು ದರ ಪರಿಷ್ಕರಣೆ ವಿಷಯದಲ್ಲಿ ಕರ್ನಾಟಕ ಜಾಹೀರಾತು ನೀತಿ–2013 ಅನ್ವಯ ಶೇ.12ರಷ್ಟು ಜಾಹೀರಾತು ದರವನ್ನು 2 ವರ್ಷಕ್ಕೊಮ್ಮೆ ಪರಿಷ್ಕರಿಸಬೇಕಿತ್ತು. ಆದರೆ, ಕಳೆದ ಐದು ವರ್ಷಗಳಿಂದ ದರ ಪರಿಷ್ಕರಣೆಯಾಗಿಲ್ಲ. ಈ ನಡುವೆ, ಪರಿಶಿಷ್ಟ ಜಾತಿ ಮತ್ತು ವರ್ಗದವರ ಮಾಲೀಕತ್ವದ ಪತ್ರಿಕೆಗಳಿಗೆ ಜಾಹೀರಾತು ಹಣವನ್ನು ಎಸ್.ಸಿ. ಎಸ್.ಪಿ/ಟಿ.ಎಸ್.ಪಿಗೆ ಅನುದಾನದ ವ್ಯಾಪ್ತಿಗೆ ಒಳಪಡಿಸಿ ವಾರ್ತಾ ಇಲಾಖೆಯಿಂದ ಬೇರ್ಪಡಿಸಿ, ಈ ಸಮುದಾಯಗಳ ಪತ್ರಿಕೆಗಳನ್ನು ಮುಖ್ಯವಾಹಿನಿಯಿಂದ ದೂರವಿಡುವ ಷಡ್ಯಂತರ ನಡೆದಿದೆ ಎಂದು ದೂರಲಾಯಿತು.

ಸಿಎಂ ಬಳಿಗೆ ನಿಯೋಗ: ಕರ್ನಾಟಕ ಹೊಸ ಜಾಹಿರಾತು ನೀತಿಯ ನ್ಯೂನತೆಗಳ ವಿರುದ್ಧ ರಾಜ್ಯ ಮಟ್ಟದಲ್ಲಿ ಎಲ್ಲಾ ಪತ್ರಿಕಾ ಸಂಪಾದಕರ ಸಭೆಯನ್ನು ಮಾರ್ಚ್ 24ರಂದು ಬೆಂಗಳೂರಿನಲ್ಲಿ ಕರೆಯಲಾಗಿದ್ದು, ಆ ಸಭೆಯ ನಂತರ ಮೈಸೂರು ಜಿಲ್ಲಾ ಪತ್ರಕರ್ತರ ನಿಯೋಗದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಹೊಸ ಜಾಹೀರಾತು ನೀತಿಯಿಂದ ಉಂಟಾಗುವ ಪರಿಣಾಮಗಳನ್ನು ಅವರ ಗಮನಕ್ಕೆ ತರಲು ಸಭೆಯಲ್ಲಿ ನಿರ್ಧರಿಸುವುದರ ಜೊತೆಗೆ ಸರಕಾರ ಪತ್ರಿಕಾ ಸಂಪಾದಕರ ಸಂಘಗಳು, ಪತ್ರಕರ್ತರ ಸಂಘಗಳು ಒಳಗೊಂಡ ಸಮಿತಿಯ ಮೂಲಕ ಹೊಸ ನೀತಿಯನ್ನು ಪುನರ್ ಪರಿಶೀಲಿಸಬೇಕೆಂದು ಆಗ್ರಹಿಸಲಾಯಿತು.

ಸಭೆಯಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಪ್ರತಿನಿಧಿ ಪತ್ರಿಕೆಯ ಪ್ರಕಾಶಕ ಶ್ರೀಹರಿ ದ್ವಾರಕನಾಥ್, ಸಂಪಾದಕ ಸಿ.ಕೆ.ಮಹೇಂದ್ರ, ರಾಜ್ಯಧರ್ಮ ಪತ್ರಿಕೆ ಸಂಪಾದಕಿ ಎಸ್.ಕವಿತಾ, ಪ್ರಜಾನುಡಿ ಪತ್ರಿಕೆ ಸಂಪಾದಕ ಸ್ವರೂಪ್, ವರ್ತಮಾನ ಪತ್ರಿಕೆ ಸಂಪಾದಕ ಕೆ.ಎನ್.ರವಿ, ಮೈಸೂರು ಪತ್ರಿಕೆ ಸಂಪಾದಕ ಮೋಹನ್, ನಗರ ಬೆಳಕು ಪತ್ರಿಕೆ ಸುವರ್ಣ, ಮಲ್ಲಿಗೆ ಮಾಚಮ್ಮ, ಸಾಧ್ವಿ ಪತ್ರಿಕೆ ಸಂಪಾದಕ ಬಿ.ರಾಘವೇಂದ್ರ, ನಿಜದನಿ ಪತ್ರಿಕೆ ಸಂಪಾದಕ ಸುನಿಲ್, ನನ್ನೂರು ಮೈಸೂರು ಪತ್ರಿಕೆ ಎನ್.ಸುರೇಶ್, ಲೋಕಹಿತ ಪತ್ರಿಕೆ ಸಂಪಾದಕ ಲೋಹಿತ್, ಪ್ರಬುದ್ಧ ಮಿತ್ರ ಪತ್ರಿಕೆ ರಾಘವೇಂದ್ರಸ್ವಾಮಿ, ಪ್ರಬುದ್ಧ ವಿಜಯ ಪತ್ರಿಕೆ ಸಂಪಾದಕ ಕಿಶೋರ್ ನಾಗ್ ಹಾಗೂ ಅನೇಕ ಪತ್ರಿಕೆಗಳ ಪ್ರತಿನಿಧಿಗಳು, ಸಂಘದ ಪದಾಧಿಕಾರಿಗಳಾದ ದಾರಾ ಮಹೇಶ್, ನಿರ್ದೇಶಕರಾದ ಸೋಮಶೇಖರ್, ಹನಗೋಡು ನಟರಾಜ್ ಮತ್ತಿತರರು ಪಾಲ್ಗೊಂಡಿದ್ದರು.



ಕೆ.ದೀಪಕ್ ನೇತೃತ್ವದಲ್ಲಿ 'ಕರ್ನಾಟಕ ಜಾಹೀರಾತು ನೀತಿ' ಸಂಬಂಧ ಶನಿವಾರ ಪತ್ರಿಕಾ ಸಂಪಾದಕರ ಸಭೆ ನಡೆಯಿತು.

> ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಜಾಪ್ರಭುತ್ವವಾದಿಗಳು. ಪ್ರಜಾಪ್ರಭುತ್ವ ಉಳಿವಿನಲ್ಲಿ ಪತ್ರಿಕೆಗಳ ಪಾತ್ರ ದೊಡ್ಡದು ಎಂದು ಸದಾ ಹೇಳುವವರು. ಆದರೆ, 'ಕರ್ನಾಟಕ ಜಾಹೀರಾತು ನೀತಿ–2026' ಮೂಲಕ ಅನವಶ್ಯಕ ಷರತ್ತುಗಳನ್ನು ವಿಧಿಸಿ ಪತ್ರಿಕೆಗಳ ಕುತ್ತಿಗೆ ಹಿಸುಕುವುದು ಸರಿಯಲ್ಲ. ಒಬ್ಬ ಕಳ್ಳನ ತಡೆಯಲು ವಿಶ್ವಾಸಾರ್ಹತೆ ಉಳಿಸಿಕೊಂಡಿರುವ ಇಡೀ ಪತ್ರಿಕಾ ಸಮೂಹಕ್ಕೆ ಕೋಳ ತೊಡಿಸಲು ಸರಕಾರ ಮುಂದಾಗಿದೆ. ವಾರ್ತಾ ಇಲಾಖೆಯು ಪೂರ್ವಾಗ್ರಹ ಮನಸ್ಥಿತಿಯಿಂದ ಹೊರ ಬಂದು ಹೊಸ ಜಾಹೀರಾತು ನೀತಿಯನ್ನು ಎಲ್ಲರ ಸಲಹೆ ಪಡೆದು ಪುನರ್ ಪರಿಶೀಲಿಸಬೇಕು. ಪತ್ರಿಕೆಗಳು ನಾಶವಾದರೆ ಪ್ರಜಾಪ್ರಭುತ್ವವೂ ನಾಶವಾಗಲಿದೆ ಎಂಬ ಅರಿವು ಸರಕಾರಕ್ಕೆ ಇರಬೇಕು.
> -ಕೆ.ದೀಪಕ್, ಅಧ್ಯಕ್ಷ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ)	2+2 ಪ್ರದರ್ಶನಗಳು
ಸಂಗಂ	
ಧುರಂದರ್ (ಹಿ)	3 ಪ್ರದರ್ಶನಗಳು
ಲಿಡೋ	
ಭಾರತ ಮಹಾಸಾಯುಲಕು ವಿಘ್ನಪತಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಆಕಾಶ್ (ಕ)	4 ಪ್ರದರ್ಶನಗಳು

ಮಹಿಳೆಯರು, ಮಕ್ಕಳ ಕಾವಲು ಸಮಿತಿ ರಚನೆಗೆ ಪ್ರತಿ ಜಿಲ್ಲಾ ಸಿಇಓಗಳಿಗೆ ಪತ್ರ

ಮೈಸೂರು, ಮಾ.21(ಎಸ್‌ಪಿಎನ್)– ರಾಜ್ಯದ ಪ್ರತಿ ಗ್ರಾಪಂನಲ್ಲಿ ಮಹಿಳೆಯರು ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ ರಚಿಸಿ, ನಿಯಮಿತ ಸಭೆ ನಡೆಸಿ ಗ್ರಾಮದಲ್ಲಿ ವ್ಯಾಪಕ ಅರಿವು ಮೂಡಿಸುವಂತೆ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಸಿಇಓಗಳಿಗೆ ಪತ್ರ ಬರೆದಿದ್ದಾರೆ.

ಮಕ್ಕಳ ಅಪಹರಣ, ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟುವಲ್ಲಿ ಸಮನ್ವಯತೆ ಸಾಧಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಆಯೋಗದ ಸದಸ್ಯರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಐದಂಶಗಳ ಶಿಫಾರಸ್ಸು ಮಾಡಿ, ಪತ್ರ ಬರೆದಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ 2,748 ಬಾಲಕರು ಹಾಗೂ 6,891 ಬಾಲಕಿಯರು ಸೇರಿದಂತೆ ಒಟ್ಟು 9,597 ಮಕ್ಕಳ ಅಪಹರಣವಾಗಿದೆ. ಇದರಲ್ಲಿ 1,094 ಮಕ್ಕಳು ಪ್ರಕರಣಗಳು ಇತ್ಯರ್ಥವಾಗಿಲ್ಲ ಎಂದು ಉಲ್ಲೇಖಿಸಿದ್ದಾರೆ. ಹಾಗಾಗಿ ಮಕ್ಕಳ ಸ್ನೇಹಿ ಗ್ರಾಪಂ ಅಭಿಯಾನದ ಸಂದರ್ಭದಲ್ಲಿ ಆಯಾ ಪಂಚಾಯಿತಿ ವ್ಯಾಪ್ತಿಯ ಮಕ್ಕಳ ಸ್ಥಿತಿಗತಿಗಳ ಅಂಕಿ–ಅಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ ಕ್ರಿಯಾ ಯೋಜನೆಗಳನ್ನು ರೂಪಿಸಬೇಕು. ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳಲ್ಲಿ ಮಕ್ಕಳ ಅಪಹರಣ ಮತ್ತು ಮಕ್ಕಳ ನಾಪತ್ತೆಯ ಕುರಿತು ಮಕ್ಕಳಿಗೆ ಅರಿವು ಮೂಡಿಸಬೇಕು.

ಗ್ರಾಪಂ ಮಟ್ಟದ ಶಿಕ್ಷಣ ಕಾರ್ಯಪಡೆಯನ್ನು ಕಡ್ಡಾಯವಾಗಿ ರಚಿಸುವುದು. ಅಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿಯ ಜೊತೆಗೆ ಸುರಕ್ಷತೆಯನ್ನು ಮೊದಲ ಆದ್ಯತೆಯನ್ನಾಗಿ ಪರಿಗಣಿಸಿ ಚರ್ಚಿಸಬೇಕು. ಗ್ರಾಪಂ ಅರಿವು ಕೇಂದ್ರಗಳಲ್ಲಿ ಮಾಹೆಯಾನ ಓದುವ ಬೆಳಕು ಕಾರ್ಯಕ್ರಮದಡಿ ಗ್ರಂಥಪಾಲಕರಿಂದ ಮಕ್ಕಳಿಗೆ ಮಾಹಿತಿ ನೀಡಬೇಕು ಎಂದು ಆಯುಕ್ತೆ ಆರುಂಧತಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ಪಾಠ; ದೇಸಿ ಆಟ, ಚಿಣ್ಣರಿಗೆ ಬೇಸಿಗೆ ಶಿಬಿರ

ಮೈಸೂರು, ಮಾ. 21– ಸುತ್ತೂರು ಶ್ರೀಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ನಾಡಿನ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಶತಶತಮಾನಗಳಿಂದ ಸೇವೆ ಸಲ್ಲಿಸುತ್ತಿದೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಅನೇಕ ಪ್ರಸಾದ ನಿಲಯಗಳು ಹಾಗೂ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವುದರ ಜೊತೆಗೆ ಶ್ರೀಸಾಮಾನ್ಯರ ಏಳಿಗೆಗಾಗಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಘಸಂಸ್ಥೆಗಳನ್ನು ಪ್ರಾರಂಭಿಸಿದೆ. ಈ ಸಂಸ್ಥೆಗಳ ಮೂಲಕ ಪ್ರತಿವರ್ಷ ವಿವಿಧ ಶಿಬಿರಗಳನ್ನು ನಡೆಸುತ್ತಿದೆ.


ಕೃಷಿಕರ ಮಕ್ಕಳು ಕಾರಣಾಂತರಗಳಿಂದ ಕೃಷಿಯಿಂದ ದೂರ ಉಳಿಯುತ್ತಿದ್ದಾರೆ. ಕೃಷಿಕರ ಮಕ್ಕಳಿಗೆ ಕೃಷಿ ಕುರಿತು ಆಸಕ್ತಿ, ಕನಿಷ್ಠ ಜ್ಞಾನ, ತಿಳುವಳಿಕೆ ನೀಡಲು, ಗ್ರಾಮದತ್ತ ಮಕ್ಕಳನ್ನು ಆಕರ್ಷಿಸಲು 2023ರಿಂದ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರವು ಹೊಸ ಪ್ರಯತ್ನದೊಂದಿಗೆ ಚಿಣ್ಣರಿಗೆ 'ಕೃಷಿಪಾಠ ದೇಶಿಆಟ' ಬೇಸಿಗೆ ಶಿಬಿರ ಪ್ರಾರಂಭಿಸಿದೆ.

ಕೃಷಿ ಪಾಠದಲ್ಲಿ ಗೋ ಆಧಾರಿತ ಕೃಷಿ, ತೋಟಗಾರಿಕೆ, ಕೈತೋಟ, ಎರೆಗೊಬ್ಬರ ತಯಾರಿ, ಬೀಜದುಂಡೆ, ಮಣ್ಣಿನ ಮಹತ್ವ, ಕೀಟ ಪ್ರಪಂಚ, ರೇಷ್ಮೆ ಕೃಷಿ, ಜೇನು ಕೃಷಿ, ಕೃಷಿ ಉಪಕರಣಗಳ ಪರಿಚಯ, ಮಾವಿನ ಕಟಾವು, ಟ್ರ್ಯಾಕ್ಟರ್ ಸವಾರಿ ಇನ್ನಿತರೆ ಕೃಷಿ ಸಂಬಂಧಿತ ವಿಷಯಗಳ ಕುರಿತು ಪರಿಚಯಿಸಲಾಗುವುದು. ದೇಶಿ ಆಟಗಳಲ್ಲಿ ಬುಗುರಿ, ಗಾಳಿಪಟ, ಗೋಲಿ, ಕುಂಟೆಬಿಲ್ಲೆ, ಅಳುಗುಳಿ ಮನೆ, ಚೌಕಾಬಾರ, ಲಗೋರಿ, ಬಳೆ ಆಟ ಮೂಲಕ ರಜಾದಿನ ಕಳೆಯುವುದು. ಈ ಶಿಬಿರದ ಮೂಲ ಉದ್ದೇಶವಾಗಿದೆ ಇದಲ್ಲದೆ, ಮಕ್ಕಳಿಗೆ ಮೌಲ್ಯಗಳನ್ನು ತಿಳಿಸಲು ಪ್ರತಿನಿತ್ಯ ಪ್ರಾರ್ಥನೆ, ಯೋಗ ಹಾಗೂ ನೀತಿಕತೆ ತಿಳಿಸಲಾಗುವುದು. ಚಿತ್ರಕಲೆ, ಕಾಗದದಿಂದ ಕರಕುಶಲ ವಸ್ತುಗಳ ತಯಾರಿ, ಮಣ್ಣಿನ ಆಟಿಕೆಗಳ ತಯಾರಿ, ಗಾಳಿಪಟ ತಯಾರಿ ಇವುಗಳ ಕುರಿತು ಹೇಳಿಕೊಡಲಾಗುವುದು.

'ಕೃಷಿ ಪಾಠ ದೇಶಿ ಆಟ' ಶಿಬಿರವು 2026 ಏಪ್ರಿಲ್ 7ರಿಂದ 11ರವರೆಗೆ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಏರ್ಪಡಿಸಲಾಗಿದೆ. ಈ ಶಿಬಿರಕ್ಕೆ 6 ರಿಂದ 12 ವರ್ಷದ ಮಕ್ಕಳು ಪ್ರವೇಶ ಪಡೆಯಬಹುದು. ಮೊದಲು ಬಂದ 25 ವಿದ್ಯಾರ್ಥಿಗಳಿಗೆ ಆದ್ಯತೆ ಏಪ್ರಿಲ್ 5ರೊಳಗೆ ಹೆಸರನ್ನು ನೋಂದಾಯಿಸಬೇಕು. ಮೈಸೂರಿನಿಂದ ಬರುವ ವಿದ್ಯಾರ್ಥಿಗಳಿಗೆ ವಾಹನ ವ್ಯವಸ್ಥೆ ಇರುತ್ತದೆ. ಶಿಬಿರದಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಶಂಸಾಪತ್ರ ಹಾಗು ಒಂದು ಗಿಡ ವಿತರಿಸಲಾಗುವುದು.

ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಶಿಬಿರದ ಸಂಚಾಲಕರುಗಳಾದ ಹೆಚ್.ವಿ. ದಿವ್ಯಾ (87628 40430), ಡಾ. ದೀಪಕ್ (74830 79554) ಅವರನ್ನು ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ.

ಮೂಡಲಹುಂಡಿಯಲ್ಲಿ ಯುಗಾದಿಯಲ್ಲಿ ಬೀರೇಶ್ವರ, ಬಸವೇಶ್ವರ ಉತ್ಸವ



ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಬೀರೇಶ್ವರ, ಬಸವೇಶ್ವರರ ಉತ್ಸವ ಮೂರ್ತಿ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು.

ಮೈಸೂರು, ಮಾ.21(ಎಂಟಿವೈ)– ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಬೀರೇಶ್ವರ, ಬಸವೇಶ್ವರರ ಉತ್ಸವ ಮೂರ್ತಿ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು.

ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ತಿ.ನರಸೀಪುರದ ತ್ರಿವೇಣಿ ಸಂಗಮ ಕ್ಷೇತ್ರಕ್ಕೆ ಬೀರೇಶ್ವರ, ಬಸವೇಶ್ವರ, ಬನ್ನಿಮಹಾಕಾಳೇಶ್ವರಿ (ಬನ್ನಮ್ಮ) ದೇವರ ಉತ್ಸವ ಮೂರ್ತಿಯನ್ನು ಸಂಪ್ರದಾಯದಂತೆ ಕೊಂಡೊಯ್ದು ಮಜ್ಜನ ಸೇವೆ ಮಾಡಿ ವಿಶೇಷ ಪೂಜೆ ಸಲ್ಲಿಸಿ ವರಕೋಡು ಗ್ರಾಮಕ್ಕೆ ತರಲಾಯಿತು. ಗುರುವಾರ ರಾತ್ರಿಯಿಡೀ ವರಕೋಡು ಗ್ರಾಮದಲ್ಲಿ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆ ಮಂಗಳವಾದ್ಯದೊಂದಿಗೆ ನೆರವೇರಿಸಲಾಯಿತು. ಶುಕ್ರವಾರ ಬಡಗಲಹುಂಡಿ, ಕೆಂಪೇಗೌಡನಹುಂಡಿ ಹಾಗೂ ಹೊಸಹುಂಡಿ ಗ್ರಾಮದಲ್ಲಿ ಉತ್ಸವ ಮೂರ್ತಿಯ ಮೆರವಣಿಗೆ ನಡೆಸಲಾಯಿತು.

ಶುಕ್ರವಾರ ಸಂಜೆ 6.30ರಿಂದ ರಾತ್ರಿ 11.15ರವರೆಗೆ ಮೂಡಲಹುಂಡಿ ಗ್ರಾಮದಲ್ಲಿ ಬೀರೇಶ್ವರ, ಬಸವೇಶ್ವರರ ಉತ್ಸವ ಮೂರ್ತಿ ಹಾಗೂ ಬನ್ನಿಮಹಾಕಾಳೇಶ್ವರಿಯ ಪೂಜಾ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು. ಮೆರವಣಿಗೆಯಲ್ಲಿ ಗ್ರಾಮದ ಕಂಸಾಳೆ ತಂಡ, ವೀರಮಕ್ಕಳ ತಂಡ, ಮಂಗಳವಾದ್ಯ, ತಮಟೆ ಮೇಳ ಜಾತ್ರೆಗೆ ಮೆರಗು ತುಂಬಿದವು. ಈ ವೇಳೆ ಗ್ರಾಮದ ಮಹಿಳೆಯರು ಬೀರೇಶ್ವರ ಹಾಗೂ ಮಲೆ ಮಹದೇಶ್ವರರ ಆರಾಧಿಸುವ ಜಾನಪದ ಗೀತೆ, ಸೋಬಾನೆ ಪದ ಹಾಡುತ್ತಾ ಯುಗಾದಿ ಪೂಜಾ ಮಹೋತ್ಸವಕ್ಕೆ ಕಳೆ ಕಟ್ಟಿದರು. ಬಳಿಕ ದೇವರ ಉತ್ಸವ ಮೂರ್ತಿಯನ್ನು ವರಕೋಡು ಗ್ರಾಮದ ಬೀರೇಶ್ವರ ದೇವಾಲಯಕ್ಕೆ ಕೊಂಡೊಯ್ದು ಇಡುವ ಮೂಲಕ ಯುಗಾದಿ ಜಾತ್ರಾ ಸಂಭ್ರಮಕ್ಕೆ ತೆರೆ ಎಳೆಯಲಾಯಿತು.

ಅಪರಿಚಿತನಿಗೆ ಬ್ಯಾಂಕ್ ಖಾತೆ ವಿವರ, ಎಟಿಎಂ ಪಿನ್ ನಂಬರ್ ನೀಡಿದ ರೈಲ್ವೆ ಇಲಾಖೆ ನಿವೃತ್ತ ಸಿಬ್ಬಂದಿಗೆ 3.96 ಲಕ್ಷ ರೂ. ವಂಚನೆ

ಇಲಾಖೆಯ ಪರ್ಸನಲ್ ಅಧಿಕಾರಿಯೆಂದು ನಂಬಿಸಿದ ವಂಚಕ

ಮೈಸೂರು, ಮಾ.21(ಪಿಎಂ)– ಸೈಬರ್ ವಂಚಕರ ಮಾತು ನಂಬಿ ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಎಟಿಎಂ ಪಿನ್ ನಂಬರ್ ನೀಡಿ ರೈಲ್ವೆ ಇಲಾಖೆಯ ನಿವೃತ್ತ ಹಿರಿಯ ನಾಗರಿಕರೊಬ್ಬರು 3 ಲಕ್ಷದ 96 ಸಾವಿರ ರೂ. ಕಳೆದುಕೊಂಡಿದ್ದು, ಈ ಸಂಬಂಧ ಅಶೋಕಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುವೆಂಪುನಗರದ ಹಿರಿಯ ನಾಗರಿಕರೊಬ್ಬರು ಹೀಗೆ ವಂಚನೆಗೆ ಒಳಗಾದವರು. ನನಗೆ ಮಾ.10ರಂದು ಅಪರಿಚಿತ ನಂಬರ್‌ನಿಂದ ಕರೆ ಬಂದಿತು. ಅಪರಿಚಿತ ವ್ಯಕ್ತಿಯು ತಾನು ರೈಲ್ವೆ ಇಲಾಖೆ ಪರ್ಸನಲ್ ಅಧಿಕಾರಿಯೆಂದು ತಿಳಿಸಿ, ಪಿಂಚಣಿ ಬಗ್ಗೆ ಮಾಹಿತಿ ಪಡೆದರು ಎಂದು ಸದರಿ ಹಿರಿಯ ನಾಗರಿಕರು ತಾವು ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಬ್ಯಾಂಕ್ ಖಾತೆ ಮತ್ತು ಎಟಿಎಂ ಪಿನ್ ನಂಬರ್ ತಿಳಿದುಕೊಂಡು, ನಿಮ್ಮ ಕೆನರಾ ಬ್ಯಾಂಕ್ ಖಾತೆಗೆ ಪಿಂಚಣಿ ಹಣ ಬರುತ್ತದೆ ಎಂದು ತಿಳಿಸಿದರು. ಅದನ್ನು ನಂಬಿ ಬ್ಯಾಂಕ್ ಖಾತೆ ಮಾಹಿತಿ ನೀಡಿದೆ. ನಂತರ ರೈಲ್ವೆ ಇಲಾಖೆಯ ಮೈಸೂರು ವಿಭಾಗಕ್ಕೆ ಕರೆ ಮಾಡಿ ವಿಚಾರಿಸಿದಾಗ, ಈ ರೀತಿ ಯಾರೂ ಇಲ್ಲವೆಂದು ತಿಳಿಸಿದರು. ನಂತರ ಬ್ಯಾಂಕ್‌ಗೆ ಹೋಗಿ ವಿಚಾರಿಸಿದಾಗ, ನನ್ನ ಖಾತೆಯಿಂದ ಹಂತ ಹಂತವಾಗಿ 3 ಲಕ್ಷದ 96 ಸಾವಿರ ರೂ. ಹಣ ಡ್ರಾ ಮಾಡಿಕೊಂಡಿರುವುದು ಗಮನಕ್ಕೆ ಬಂದಿತು. ಆಗ ನನ್ನನ್ನು ವಂಚಿಸಿರುವ ಅರಿವಾಯಿತು ಎಂದು ಅವರು ನೀಡಿದ ದೂರಿನ್ವಯ ಮಾ.20ರಂದು ಎಫ್‌ಐಆರ್ ದಾಖಲಿಸಲಾಗಿದೆ.



ಶುಭಾಶಯ

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಅವರಿಗೆ ರಂಜಾನ್ ಹಬ್ಬದ ಪ್ರಯುಕ್ತ ಒಂಟಿಕೊಪ್ಪಲು ಗುರುರಾಜ್ ರಂಗಸ್ವಾಮಿ(ಪಾಪು), ಮೆಲ್ಲಹಳ್ಳಿ ರಾಜೇಶ್ ಸಿ.ಗೌಡ, ಕೆ.ಜಿ.ಕೊಪ್ಪಲು ದೀಪು ಶುಭಕೋರಿದರು.

ಉದ್ಯೋಗಸ್ಥ ಮಹಿಳೆಯರ ಸಾಧನೆಗೆ ಕುಟುಂಬ ಸಾಥ್ ನೀಡಬೇಕು

ಜಾನಪದ ವಿದ್ವಾಂಸೆ ಸುಜಾತ ಅಕ್ಕಿ ಸಲಹೆ



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿ ಡಾ.ಭಾವನಾ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಮಾ.21(ಬಿಎಲ್‌ಯು)– ಅಡುಗೆ ಮನೆಯಿಂದ ಹೊರಗೆ ದುಡಿಯುವ ಉದ್ಯೋಗಸ್ಥ ಮಹಿಳೆಯರಿಗೆ ಅವರ ಇಡೀ ಕುಟುಂಬ ಸಂಪೂರ್ಣ ಸಹಕಾರ ನೀಡಿ ಅವರ ಸಾಧನೆಗೆ ಉತ್ತೇಜನ ನೀಡಬೇಕು ಎಂದು ಜಾನಪದ ವಿದ್ವಾಂಸರಾದ ಸುಜಾತ ಅಕ್ಕಿ ಸಲಹೆ ನೀಡಿದರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ಇಂದು ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕುಟುಂಬದ ನಿರ್ವಹಣೆಯ ಜೊತೆಗೆ ಹೊರಗೆ ವೃತ್ತಿಯಲ್ಲಿ ತೊಡಗುವ ಮಹಿಳೆಗೆ ಪತಿ, ಮಕ್ಕಳು, ಆಕೆಯ ತಂದೆ ತಾಯಿ ಸಹಕಾರ ನೀಡಬೇಕು ಎಂದು ಕಿವಿಮಾತು ಹೇಳಿದರು.

ಆಧುನಿಕ ದಿನಮಾನದಲ್ಲಿ ಮಹಿಳೆಯರು ಅಭಿವೃದ್ಧಿ ಕೌಶಲ್ಯವನ್ನು ರೂಢಿಸಿಕೊಳ್ಳಬೇಕು. ಈ ಮೂಲಕ ಪ್ರಸ್ತುತ ದಿನಮಾನದ ಬೆಳವಣಿಗೆಯನ್ನು ಅರ್ಥ ಮಾಡಿಕೊಂಡು ಸಾಧನೆ ಮಾಡಬೇಕು. ಜೊತೆಗೆ ಮಹಿಳೆಯರು ಸಬಲೀಕರಣಗೊಳ್ಳಬೇಕು ಎಂದು ಸುಜಾತ ಅಕ್ಕಿ ತಿಳಿಸಿದರು.

ಪ್ರಸ್ತುತ ಮಹಿಳೆಯ ಪ್ರತಿಯೊಂದು ಕ್ಷೇತ್ರದಲ್ಲೂ ತನ್ನ ಪ್ರತಿಭೆ ತೋರಿಸಿದ್ದಾಳೆ. ಒಂದು ಕಾಲದಲ್ಲಿ ಮಹಿಳೆಗೆ ಇಂತಹ ಕೆಲಸ ಸಾಧ್ಯವಾಗುವುದಿಲ್ಲ ಎಂದು ಮೂಗು ಮುರಿಯುವ ಪರಿಸ್ಥಿತಿ ಇತ್ತು. ಆದರೆ ಈಗ ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲೂ ಸಾಧನೆ ಮಾಡಿದ್ದಾಳೆ, ಮಾಡುತ್ತಿದ್ದಾಳೆ ಎಂದರು.

ಸುನೀತಾ ವಿಲಿಯಮ್ಸ್, ಕಲ್ಪನಾ ಚಾವ್ಲಾ, ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮಿ ಬಾಯಿ ಸೇರಿದಂತೆ ಹಲವು ಮಹನೀಯರ ಸಾಧನೆಗಳು ಇದಕ್ಕೆ ಸ್ಪಷ್ಟ ಉದಾಹರಣೆ. ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರು ನೂರಾರು ಗಿಡಗಳನ್ನು ನೆಟ್ಟು ಹಸಿರು ವನ ಸೃಷ್ಟಿಸಿದರು, ಏಕ ಕಾಲಕ್ಕೆ 16 ಬ್ಯಾಂಕ್ ರಾಷ್ಟ್ರೀಕರಣ ಮಾಡಿ ಇಂದಿರಾ ಗಾಂಧಿ ದಾಖಲೆ ನಿರ್ಮಾಣ ಮಾಡಿದರು. ಇಂತಹ ಸಾಧಕರನ್ನು ಆದರ್ಶವಾಗಿಟ್ಟುಕೊಂಡು ಸಾಗಬೇಕು ಎಂದು ಉತ್ತೇಜಿಸಿದರು.

ಮಹಿಳೆಯರು ಪರಸ್ಪರ ಒಬ್ಬರನ್ನೊಬ್ಬರು ಪ್ರೀತಿಸಬೇಕು, ಒಬ್ಬ ಮಹಿಳೆಗೆ ಏನಾದರೂ ಅನ್ಯಾಯವಾದರೆ ಇತರೆ ಮಹಿಳೆಯರು ನೆರವಿಗೆ ಬರಬೇಕು ಎಂದು ಸುಜಾತ ಅಕ್ಕಿ ಸಲಹೆಯಿತ್ತರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ಮಹಿಳಾ ವೇದಿಕೆ ಸಂಯುಕ್ತವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿ ಡಾ.ಭಾವನಾ ಅವರನ್ನು ಸನ್ಮಾನಿಸಲಾಯಿತು. ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶೋಭಾರಾಣಿ, ಕಾವಾ ಆಡಳಿತಾಧಿಕಾರಿ ಡಾ.ನಿರ್ಮಲಾ ಮಠಪತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಜಯಪ್ಪ ಹೊನ್ನಾಳಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಹಿಳೆಯರ ಹೊಗಳುವುದರ ಹಿಂದೆಯೇ ಶೋಷಣೆ ಅಡಗಿದೆ!?

- ಮಹಿಳಾ ಹೋರಾಟಗಾರರಾದ ಸವಿತಾ ಪ.ಮಲ್ಲೇಶ್ ಅಭಿಮತ
- ಮಹಿಳಾ ದಿನಾಚರಣೆ; ಹಿರಿಯ ಕಲಾವಿದೆಯರಿಗೆ ಸನ್ಮಾನ



ಹಿರಿಯ ಕಲಾವಿದೆಯರಾದ ಎಚ್.ಬಿ.ಯಶೋಧ ರಾಮಚಂದ್ರ, ವಿಜಯಲಕ್ಷ್ಮಿ ಮಂಜುನಾಥ್, ಸುಲೋಚನ ಅವರನ್ನು ಶುಕ್ರವಾರ ಗೌರವಿಸಲಾಯಿತು.

ಮೈಸೂರು, ಮಾ.21(ಎಸ್‌ಪಿಎನ್)– ಮಹಿಳೆಯರನ್ನು ದೇವತೆ, ಸಹಾನುಭೂತಿ ಹೊಂದಿರುವವಳು, ಕ್ಷಮಯಾ ಧರಿತ್ರಿ ಎಂದು ಹೇಳುತ್ತಾರೆ. ಆದರೆ, ಆ ಪದಗಳ ಹಿಂದೆ ಶೋಷಣೆಯ ಅಂಶಗಳಿವೆ ಎಂದು ಮಹಿಳಾ ಹೋರಾಟಗಾರ್ತಿ ಸವಿತಾ ಪ.ಮಲ್ಲೇಶ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಕರ್ನಾಟಕ ನಾಟಕ ಅಕಾಡೆಮಿ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಮಹಿಳಾ ದಿನಾಚರಣೆ, ವಿಚಾರ ಸಂಕಿರಣ ಹಾಗೂ ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ ಮೂವರು ಹಿರಿಯ ಕಲಾವಿದರನ್ನು ಸನ್ಮಾನಿಸಿ, ಮಾತನಾಡಿದರು.

ಸಮಾಜದಲ್ಲಿ ಬಳಕೆಯಾಗುವ ಕೆಲ ಪದಗಳಿಂದ ಮಹಿಳೆಯರ ಕುರಿತು ತಪ್ಪು ಕಲ್ಪನೆಗಳು ಜನರ ಮನಸ್ಸಿನಲ್ಲಿ ಉಳಿಯುತ್ತವೆ. ಮಹಿಳೆ ಸಾಧಿಸುವ ಹಂಬಲ ಉಳ್ಳವಳು. ಆದರೆ, ಸಮಾಜ ಇದನ್ನು ಎಷ್ಟೋ ಬಾರಿ ಗುರುತಿಸುವುದಿಲ್ಲ. ಹಾಗಾಗಿ ಹೆಣ್ಣಿನ ವಿಚಾರವಾಗಿ ಸಾರ್ವಜನಿಕವಾಗಿ ಮಾತನಾಡುವಾಗ ಆಕೆಯ ಸಾಧನೆ ಕುರಿತು ಮಾತನಾಡಿದರೆ ಚೆಂದ ಎಂದು ಸಲಹೆ ನೀಡಿದರು.

ಮಹಿಳೆಯರ ನಿತ್ಯದ ಬದುಕು ಹಲವು ತಾಕಲಾಟದಿಂದ ಕೂಡಿರುತ್ತದೆ. ಹಾಗಾಗಿ ಸಮಾಜ ನೋಡುವ ದೃಷ್ಟಿಕೋನಗಳೇ ಬೇರೆಯಾಗಿರುತ್ತವೆ. ಇಂತಹ ಸನ್ನಿವೇಶಗಳಲ್ಲಿ ಮಹಿಳೆಯರನ್ನು ಸಾಧಕರ ಸಾಲಿನಲ್ಲಿ ಗುರುತಿಸಬೇಕು. ಸಾರ್ವಜನಿಕವಾಗಿ ಮಹಿಳೆಯರ ಕುರಿತು ಮಾತನಾಡುವಾಗ ಜನರ ಚಿಂತನೆಯನ್ನು ಬದಲಾಯಿಸುವುದು ಅತೀ ಮುಖ್ಯ ಎಂದರು.

ಸಮಾಜ ಎಷ್ಟೇ ಪ್ರಗತಿಪರ ಆಲೋಚನೆಗಳನ್ನು ಹೊಂದಿದ್ದರೂ ನಮ್ಮ ಮನದೊಳಗೆ ಇನ್ನು ಪಿತೃ ಪ್ರಧಾನ ವ್ಯವಸ್ಥೆಯ ಕುರುಹುಗಳು ಅಡಗಿವೆ. ಅದರಿಂದ ನಿತ್ಯದ ಬದುಕಿನ ನಡೆ–ನುಡಿಗಳ ಮೂಲಕ ಪಿತೃ ಪ್ರಧಾನ ವ್ಯವಸ್ಥೆಯ ಅಂಶಗಳು ವ್ಯಕ್ತವಾಗುತ್ತವೆ. ಈ ಮನೋಭಾವದಿಂದ ಸಮಾಜ ಹೊರಬರಬೇಕು. ಈ ನಿಟ್ಟಿನಲ್ಲಿ ಜಾಗೃತಿ ಕೂಡ ಮುಖ್ಯ ಎಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ರಾಜ್ಯದ ವಿವಿಧ ವಿಶ್ವವಿದ್ಯಾನಿಲಯ, ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿನಿಯರ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳಿಗೆ ವಿಷಾದನೀಯ. ಆದರೆ, ಬೆಳ್ತಂಗಡಿ ಪ್ರಕರಣ, ಚಿತ್ರದುರ್ಗ ಮಠದ ಪ್ರಕರಣ ಸೇರಿದಂತೆ ಮಹಿಳೆಯರ ಮೇಲಾಗುವ ದೌರ್ಜನ್ಯಗಳ ಕುರಿತು ಮತ್ತೊಮ್ಮೆ ಚಿಂತಿಸಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದರು.

ರಂಗಗೌರವ: ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ಎಚ್.ಬಿ.ಯಶೋಧ ರಾಮಚಂದ್ರ, ಹವ್ಯಾಸಿ ರಂಗಭೂಮಿ ಹಿರಿಯ ಕಲಾವಿದರಾದ ವಿಜಯಲಕ್ಷ್ಮಿ ಮಂಜುನಾಥ್, ವೃತ್ತಿ ರಂಗ ಭೂಮಿ ಹಿರಿಯ ಕಲಾವಿದರಾದ ಸುಲೋಚನ ಅವರನ್ನು ಗೌರವಿಸಲಾಯಿತು.

ಈ ವೇಳೆ ಹಿರಿಯ ರಂಗ ನಿರ್ದೇಶಕರಾದ ಕೆ.ಆರ್.ಸುಮತಿ, ಆಕಾಶವಾಣಿ ನಿರೂಪಕಿ ಡಾ.ಶಬಾನ ಮೈಸೂರು, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಜಿಲ್ಲಾಧ್ಯಕ್ಷ ರಾಜೇಶ್ ತಲಕಾಡು, ಕರ್ನಾಟಕ ನಾಟಕ ಆಕಾಡೆಮಿ ಸದಸ್ಯ ಸಂಚಾಲಕರಾದ ಎ.ಎಸ್. ಚಂದ್ರಶೇಖರ್ ಹಾಜರಿದ್ದರು.

ಗೋದಾವರಿ ನದಿಯಲ್ಲಿ ಮುಳುಗಿ ಐವರು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಾವು



ವಿಜಯವಾಡ: ಆಂಧ್ರಪ್ರದೇಶದ ಏಲೂರು ಜಿಲ್ಲೆಯ ಗೋದಾವರಿ ನದಿಯಲ್ಲಿ ಶುಕ್ರವಾರ ಐವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮುಳುಗಿ ಸಾವನ್ನಪ್ಪಿದ್ದಾರೆ. ಇಬ್ಬರು ಬದುಕುಳಿದಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೂವರು ವಿದ್ಯಾರ್ಥಿಗಳ ಮೃತದೇಹಗಳು ಪತ್ತೆಯಾಗಿದ್ದು, ಉಳಿದ ಇಬ್ಬರ ಪತ್ತೆಗೆ ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ತಿಳಿಸಿದ್ದಾರೆ. ಈ ಮಧ್ಯೆ, ಶೋಧ ಕಾರ್ಯಾಚರಣೆಯನ್ನು ತೀವ್ರಗೊಳಿಸುವಂತೆ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್ ಚಂದ್ರಬಾಬು ನಾಯ್ಡು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಗುಂಟೂರು ಜಿಲ್ಲೆಯ ಅಮರಾವತಿಯಲ್ಲಿರುವ ಖಾಸಗಿ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸ್ನಾನಕ್ಕಾಗಿ ನದಿಗೆ ಇಳಿದಾಗ ಈ ದುರಂತ ಸಂಭವಿಸಿದೆ.

ಸ್ನಾನಕ್ಕೆಂದು ನದಿಗೆ ಇಳಿದ ಐವರು ಎಂಜಿನಿಯರಿಂಗ್ ವಿದ್ಯಾರ್ಥಿಗಳು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದು, ಇಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಶೋಧ ಕಾರ್ಯಾಚರಣೆಯನ್ನು ತೀವ್ರಗೊಳಿಸುವಂತೆ ಮುಖ್ಯಮಂತ್ರಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಪೋಲವರಂ ಉಪ ಪೊಲೀಸ್ ವರಿಷ್ಠಾಧಿಕಾರಿ ಎಂ ವೆಂಕಟೇಶ್ವರ ತಿಳಿಸಿದ್ದಾರೆ.

ಇಬ್ಬರು ವಿದ್ಯಾರ್ಥಿಗಳಿಗೆ ಈಜು ಬರುತ್ತಿದ್ದರಿಂದ ಪ್ರಾಣಪಾಯದಿಂದ ಪಾರಾಗಿದ್ದಾರೆ. ಇತರರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಮೂರು ಶವಗಳನ್ನು ಹೊರತೆಗೆದು, ಮರಣೋತ್ತರ ಪರೀಕ್ಷೆ ನಡೆಸಿ, ಅವರ ಪೋಷಕರಿಗೆ ಹಸ್ತಾಂತರಿಸಲಾಗಿದೆ ಎಂದು ಡಿಎಸ್ಪಿ ತಿಳಿಸಿದ್ದಾರೆ.

ಇರಾನ್‌ನ ನಟಾಂಜ್ ಪರಮಾಣು ಸ್ಥಾವರದ ಮೇಲೆ ಅಮೆರಿಕ ದಾಳಿ; ವಿಕಿರಣ ಸೋರಿಕೆ ಆತಂಕ

ಟೆಹ್ರಾನ್: ಅಮೆರಿಕ ಹಾಗೂ ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸುತ್ತಿರುವ ಭೀಕರ ವೈಮಾನಿಕ ದಾಳಿ ಮೂರನೇ ವಾರಕ್ಕೆ ಕಾಲಿಟ್ಟಿದ್ದು, ಶನಿವಾರ ಇರಾನ್‌ನ ನಟಾಂಜ್ ಪರಮಾಣು ಸ್ಥಾವರದ ಮೇಲೆ ದಾಳಿ ನಡೆಸಲಾಗಿದೆ ಎಂದು ಇರಾನ್ ಸ್ಟೇಟ್ ಮೀಡಿಯಾ ತಸ್ನಿಮ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಇಂದು ಬೆಳಗ್ಗೆ ನಟಾಂಜ್‌ನಲ್ಲಿರುವ ಇರಾನ್‌ನ ಪ್ರಮುಖ ಯುರೇನಿಯಂ-ಪುಷ್ಟೀಕರಣ ಸ್ಥಾವರದ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸಿವೆ ಎಂದು ವರದಿ ತಿಳಿಸಿದೆ.

ಇರಾನ್‌ನ ಅತ್ಯಂತ ಮಹತ್ವದ ಪರಮಾಣು ಸ್ಥಾವರಗಳಲ್ಲಿ ಒಂದಾದ ನಟಾಂಜ್ ಪರಮಾಣು ಸ್ಥಾವರವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ ಎಂದು ತಸ್ನಿಮ್ ವರದಿ ಮಾಡಿದೆ.

ದಾಳಿಯ ನಂತರ ಯಾವುದೇ ವಿಕಿರಣ ಸೋರಿಕೆ ಪತ್ತೆಯಾಗಿಲ್ಲ ಮತ್ತು ಸ್ಥಾವರದ ಬಳಿ ವಾಸಿಸುವ ನಿವಾಸಿಗಳು ಅಪಾಯದಲ್ಲಿಲ್ಲ ಎಂದು ಸುದ್ದಿ ಸಂಸ್ಥೆ ತಿಳಿಸಿದೆ. ಆದಾಗ್ಯೂ ಸ್ಥಳೀಯ ನಿವಾಸಿಗಳು ವಿಕಿರಣ ಸೋರಿಕೆಯ ಆತಂಕದಲ್ಲಿದ್ದಾರೆ.

ದಾಳಿಗೆ ಒಳಗಾದ ನಟಾಂಜ್ ಪರಮಾಣು ಸ್ಥಾವರ ಇರಾನ್ ರಾಜಧಾನಿ ಟೆಹ್ರಾನ್‌ನಿಂದ ಸುಮಾರು 220 ಕಿಮೀ ದೂರದಲ್ಲಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆ ನಟಾಂಜ್ ಸೌಲಭ್ಯವನ್ನು ಪದೇ ಪದೇ ಟಾರ್ಗೆಟ್ ಮಾಡಲಾಗುತ್ತಿದ್ದು, ಜೂನ್ 2025 ರ ಇಸ್ರೇಲ್-ಇರಾನ್ 12 ದಿನಗಳ ಯುದ್ಧದ ಸಮಯದಲ್ಲೂ ಇಸ್ರೇಲ್ ಪಡೆಗಳು ಇರಾನಿನ ಮಿಲಿಟರಿ ಮತ್ತು ಪರಮಾಣು ಮೂಲಸೌಕರ್ಯದ ಮೇಲೆ ಸರಣಿ ದಾಳಿ ನಡೆಸಿದ್ದವು.

PUBLIC NOTICE

My Client intends to purchase the schedule property from its owners (1) Mrs. BHAGYA. N. (2) Mrs. SUSHMA. R. and (3) Mr. SAGAR. R. Legal heirs of Late A. Ramanna, residing at 400 Bhagya Shree Nilaya, 1" Cross, 5th A Main, Vidyanagar, Bengaluru North, BENGALURU-560 057. The schedule property originally purchased by Late A. Ramanna, through a registered Sale Deed dated 24.12.2008, from one Mr. M. Krishnappa. The said Sale Deed is registered as Document No. HDK-1-1896-2008-09, CD No. HDKD32, registered on 24.12.2008 at H.D. Kote Sub-Registrar Office, H.D. Kote. A. Ramanna, died on 09.01.2011 leaving behind Mrs. Bhaghya. N. Mrs. Sushma. R. and Mr. Sagar. R. as his legal heirs. The Khata of the schedule property has been made in the name of Mrs. Bhaghya. N. in the Revenue Records. Mrs. Bhagya. N. Mrs. Sushma. R. and Mr. Sagar. R. are selling schedule property which is more fully described in the schedule to my client. Anybody like individual person, Banks, financial institutions or any entity having any objection over the schedule property in writing may do so within 7 days from the date of publication of this notice to the under signed along with documents. Fake claims will not be entertained.

SCHEDULE OF THE PROPERTY

All that Piece and parcel of the Agricultural Land Property bearing Survey No. 76/1B, situated at Hommaragalli Village, Hampapura Hobli, H.D. Kote Taluk, Mysuru District, measuring: 2 Acres 18 Guntas bounded on the: East by: Palyada Road, West by: Shivarudramma's Land, North by: Grama Thana, Sauth by: Shivanudramma's Land.

Sd/ S. UMESH
Advocate. (Phone Off. 0821-2429670 Cell: 94483 42677)
#369 Madhav Bhavan, J.L.B. Road, MYSURU-570 005.
Date: 21.03.2026.

ಪ್ರಕಟಣೆ

ಶ್ರೀ ಮೊಹಮ್ಮದ್ ಅಲಿ ಖಾನ್ ಮತ್ತು ಕುಟುಂಬ ದವರ ಸ್ವತ್ತಾದ ಮೈಸೂರು ನಗರ, ಎನ್.ಆರ್ ಮೊಹಲ್ಲಾ, ಮಿಲ್ಲಿ ಬ್ಲಾಕ್ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ:76/ಬಿ ಹೊಂದಿರುವ ಅಳತೆ ಪೂರ್ವದಿಂದ ಪಶ್ಚಿಮಕ್ಕೆ: (89+91)/2 ಅಡಿಗಳು ಉತ್ತರ ದಿಂದ ದಕ್ಷಿಣಕ್ಕೆ: 40.00 ಅಡಿಗಳ ಒಟ್ಟು ವಿಸ್ತೀರ್ಣ: 3600.00 ಚದರ ಅಡಿಗಳ ನಿವೇಶನ ವನ್ನು ಶ್ರೀ ಮಹದೇವ ರಾಜು ಆದ ನಾನು ಖರೀದಿ ಮಾಡಲು ಬಯಸಿರುವ ಕಾರಣ ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದಾರು ತಂಟೆ ತಕರಾರು ಅಥವಾ ವಾರಸುದಾರರಾಗಲಿ ಇದ್ದಲ್ಲಿ ಪ್ರಕಟಣೆಗೊಂಡ 30 ದಿನಗಳ ಒಳಗೆ ದಾಖಲೆ ಸಹಿತವಾಗಿ ಬಂದು ಬೇಟಿ ಮಾಡತಕ್ಕದು. ಒಂದು ವೇಳೆ ನಿಗದಿತ ಸಮಯಕ್ಕೆ ಭೇಟಿ ಮಾಡದಿದ್ದಲ್ಲಿ ಸ್ವತ್ತನ್ನು ಖರೀದಿ ಮಾಡಲು ನಾವು ಹಕ್ಕುಳ್ಳವರೆಂದು ತಿಳಿಯಲಾಗುತ್ತದೆ.

ಸಹಿ/- ಮಹದೇವ ರಾಜು ಬಿನ್ ರಾಜು
#66, 10ನೇ ಎ ಸೆಕ್ಟರ್, 5ನೇ ಕ್ರಾಸ್, ಸಬ್ ರಿಜಿಸ್ಟರ್ ಆಫೀಸ್, ಯಲಹಂಕ ನ್ಯೂ ಟೌನ್, ಬೆಂಗಳೂರು ಉತ್ತರ, ಬೆಂಗಳೂರು-560064.
Ph: 8217472579.

46
ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

22ನೇ ವರ್ಷದ ಸವಿನೆನಪು



ಶ್ರೀ ಚೆನ್ನಸಿದ್ದಯ್ಯನವರು
ನಿಧನ: 22.03.2004
(ಬಿಲ್ಡಿಂಗ್ ಕಂಟ್ರಾಕ್ಟರ್, ಕುವೆಂಪುನಗರ, ಮೈಸೂರು)
ದಿನಗಳುರುಳಿದರೂ, ಮಾಸಗಳು ಮಾಸಿದರೂ, ವರುಷಗಳು ಗತಿಸಿದರೂ, ನಿಮ್ಮ ನೆನಪುಗಳು ಮಾತ್ರ ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ, ಸದಾ ನಿಮ್ಮ ನೆನಪಿನಲ್ಲೇ ಇರುವ
ಧರ್ಮಪತ್ನಿ ಪದ್ಮಮ್ಮ ಮತ್ತು ಕುಟುಂಬವರ್ಗದವರು